ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೫ ಆಗಸ್ಟ್-೨೦೦೪ ಸಂಚಿಕೆ-೧



ನೌಖಾಲಿಯ ಅಗ್ನಿಕುಂಡದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ

ಈ ಸಂಚಿಕೆಯಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಆಗಸ್ಟ್–೨೦೦೪
ಸಂಪುಟ ೫
ಸಂಚಿಕೆ ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/–
ಬಿಡಿ ಸಂಚಿಕೆ : ರೂ ೧೦/–

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೨೯೮೭೫೪
e-mail - janapada@yahoo.com

ಅರುಣಗೀತೆ.

ದೇವರ ಮಕ್ಕಳೆ ಎಲ್ಲರು ಏಳಿ,
ಬೆಳ್ಳಗೆ ಬೆಳಗಾಯಿತು ಬೇಗೇಳಿ!
ಮೂಡಣ ದೆಸೆಯಲಿ ಬಾನಿನ ನೀರೆ
ಪೊಸವೇಟದಿ ನಾಚುತ ಕೆಂಪೇರೆ
ನೇಸರು ಬರುವನು ಬೆಟ್ಟವನೇರಿ
ಭೂಮಿಗೆ ಬಾಳಿನ ಬೆಳಕನು ಬೀರಿ!
ಹೊಂಬಿಸಿಲಪ್ಪಿಹ ಬನ ಬನದಲ್ಲಿ
ನನೆಕೊನೆಯೇರಿಹ ಮರ ಮರದಲ್ಲಿ
ರೆಕ್ಕೆಯ ರಿಸಿಗಳು ಮುದವನು ತಾಳಿ
ಸಾಮಗಾನದಲಿ ಕರೆವರು ಕೇಳಿ
ದೇವರ ಮಕ್ಕಳೆ ಎಲ್ಲರು ಏಳಿ?
ಬೆಳ್ಳಗೆ ಬೆಳಗಾಯಿತು ಬೇಗೇಳಿ!
ಹೊಸ ದಿನವೈತಂದಿದೆ ನಿಮಗಾಗಿ;
ಹೊಸ ಸೊಬಗಿಳೆಗಿಳಿದಿದೆ ನಿಮಗಾಗಿ;
ಹೊಸ ಹೂವುಗಳರಳಿವೆ ನಿಮಗಾಗಿ;
ಕರೆ ಕರೆವುವು ನಿಮ್ಮನ್ನು ತಲೆದೂಗಿ!
ಪಸುರಲಿ ಪೊಳೆವೈಕಿಲ್ವನಿಮಾಲೆ,
ಬಣ್ಣದ ಚಿಟ್ಟೆಗಳಲೆಯುವ ಲೀಲೆ,
ಮೊರೆ ಮೊರೆವಳಿಗಳ ಮಂಜುಳ ಗಾನ,
ಸಗ್ಗವು ಭೂವಿಗೊಲಿದಿತ್ತಿಹ ದಾನ!
ಸೊಬಗೆಂಬುದು ಲೋಕದ ಸಿರಿಗಣ್ಣು!
ನನ್ನಿಗೆ ಸೂಬಗೇ ನಚ್ಚಿನ ಹೆಣ್ಣು!
ದೇವರ ಮಕ್ಕಳೆ ಎಲ್ಲರು ಏಳಿ;
ಬೆಳ್ಳಗೆ ಬೆಳಗಾಯಿತು ಬೇಗೇಳಿ!

–ಕುವೆಂಪು

ವಿಚಾರ ದೀಪ್ತಿ

ಓ ನನ್ನ ಭರತಮಾತೆ, ಓ ನನ್ನ ಭಾರತೀಯ ಭ್ರಾತೃಗಳಿರಾ, ನಿದ್ದೆಯಿಂದೆದ್ದೇಳಿ! ನವೋದಯವಾಗುತ್ತಿದೆ; ಕಣ್ದೆರೆದು ನೋಡಿ! ಅದೋ....

ಸುದೀರ್ಘ ರಾತ್ರಿಯು ಕಡೆಗಿಂದು ಕೊನೆಗಾಣುತ್ತಿದೆ. ಬಹುಕಾಲದ ಶೋಕತಾಪಗಳು ಕಡೆಗಿಂದು ಮಾಯವಾಗುತ್ತಲಿವೆ. ಇದುವರೆಗೆ ಶವದಂತೆ ಬಿದ್ದಿದ್ದ ಶರೀರ ಇಂದು ಸಚೇತನವಾಗುತ್ತಿದೆ. ಅದೋ, ಕಿವಿಗೊಡಿ; ತೂರ್ಯವಾಣಿಯೊಂದು ಕೇಳಿ ಬರುತ್ತಿದೆ- ಬಹುಪುರಾತನ ಕಾಲದ ಇತಿಹಾಸಗರ್ಭದಿಂದ ಹೊಮ್ಮಿ, ಪರ್ವತ ಪರ್ವತ ಶಿಖರಗಳಿಂದ ಮರುದನಿಯಾಗಿ ಚಿಮ್ಮಿ, ಅರಣ್ಯಾರಣ್ಯ ಕಂದರ ಕಂದರಗಳಲ್ಲಿ ಸಂಚರಿಸಿ, ಬರಬರುತ್ತ ಪ್ರಬಲವಾಗಿ ಬಂದಂತೆಲ್ಲ ಅಪ್ರತಿಹತವಾಗಿ, ನಮ್ಮೀ ಪುಣ್ಯಭೂಮಿಯನ್ನು ನಿದ್ದೆಯಿಂದೊದೆದೆಬ್ಬಿಸಿ, ಜ್ಞಾನ ಭಕ್ತಿ ಕರ್ಮ ವೈರಾಗ್ಯ ಸೇವಾ ತತ್ವಗಳನ್ನು ಉಚ್ಚಕಂಠದಿಂದ ಸಾರುವ ತೂರ್ಯವಾಣಿಯೊಂದು ಕೇಳಿಬರುತ್ತಿದೆ. ಹಿಮಾಲಯಗಳಿಂದ ಬೀಸಿ ಬರುವ ಪುಣ್ಯಸಮೀರದಂತೆ ನಿರ್ಜೀವದಂತಿದ್ದ ಅಸ್ಥಿಮಾಂಸಗಳಿಗೆ ಜೀವದಾನ ಮಾಡುತ್ತಿದೆ! ಜಡನಿದ್ರೆಯನ್ನು ಪರಿಹರಿಸುತ್ತಿದೆ; ಕಾರ್ಯೋತ್ಸಾಹ ಸ್ಥೈರ್ಯ ಧೈರ್ಯಗಳನ್ನು ಉದ್ರೇಕಿಸುತ್ತಿದೆ. ಕುರುಡರಿಗೆ ಕಾಣದು; ಮೂರ್ಖರಿಗೆ ತಿಳಿಯದು. ನಮ್ಮೀ ಭಾರತ ಭೂಮಿಯು ಯುಗ ಯುಗಗಳ ನಿದ್ರೆಯಿಂದ ಮೇಲೇಳುತ್ತಿದೆ. ಆಕೆಯನ್ನು ಇನ್ನಾರು ತಡೆಯ ಬಲ್ಲವರಿಲ್ಲ; ಇನ್ನಾಕೆಯು ನಿದ್ದೆಮಾಡುವುದಿಲ್ಲ. ಯಾವ ಶಕ್ತಿಯೂ ಆಕೆಯನ್ನು ಬಗ್ಗಿಸಲಾರದು. ಏಕೆಂದರೆ ಅದೋ ನೋಡಿ! ಮಹಾಕಾಳಿಯು ಮತ್ತೊಮ್ಮೆ ಎಚ್ಚೆತ್ತು ಮೈಕೊಡವಿ ಉಸಿರೆಳೆದು ನಿಲ್ಲುತ್ತಿದ್ದಾಳೆ!.....

–ಕುವೆಂಪು

ನೌಖಾಲಿಯ ಅಗ್ನಿಕುಂಡದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ

-ಸುರೇಂದ್ರ ಕೌಲಗಿ

ಭಾರತದ ಸ್ವಾತಂತ್ರ್ಯದ ಇತಿಹಾಸ ಪ್ರಪಂಚದ ಸಾಮಾನ್ಯ ಇತಿಹಾಸದಲ್ಲಿ ಅಸಾಮಾನ್ಯವಾಗಿ, ಸಾಧಾರಣ ಇತಿಹಾಸದಲ್ಲಿ ಅಸಾಧಾರಣವಾಗಿ, ಅನೇಕ ಇತಿಹಾಸಗಳಲ್ಲಿ ಅದ್ವಿತೀಯವಾಗಿ ಹೊರ ಹೊಮ್ಮಿದೆ. ಸ್ವಾತಂತ್ರ್ಯ ಚಳುವಳಿ ದೇಶದ ಎಲ್ಲೆಡೆಯಲ್ಲಿ ನಡೆಯಿತಾದರೂ ಚಳುವಳಿಯ ನಿರ್ಣಾಯಕ ಘಟ್ಟ ಬಂಗಾಳದ ನೌಖಾಲಿಯಲ್ಲಿ ನಡೆಯಿತು. ಅಲ್ಲಿ ಆ ಚಳುವಳಿ ತನ್ನ ಚರಮ ಸೀಮೆಯನ್ನು ಮುಟ್ಟಿತ್ತು. ಸ್ವಾತಂತ್ರ್ಯಕ್ಕಾಗಿ "ಹೋರಾಟ ಮಾಡು ಇಲ್ಲವೆ ಮಡಿ" ಎಂಬ ಉದ್ಘೋಷ ನೌಖಾಲಿಯ ಸೌಮ್ಯ ಪ್ರಕೃತಿಯಲ್ಲೂ ಗುಡುಗಿತ್ತು. ದೇಶದ ಉಳಿದೆಡೆ ನಡೆದ ಚಳುವಳಿ ಪ್ರಮುಖವಾಗಿ ರಾಜಕೀಯವಾಗಿತ್ತು; ಇಂಗ್ಲಿಷರ ರಾಜ್ಯವನ್ನು ಕೊನೆಗೊಳಿಸಿ ಸ್ವರಾಜ್ಯವನ್ನು ತರುವ ಉದ್ದೇಶ್ಯ ಆ ಚಳುವಳಿಯದಾಗಿತ್ತು; ದಿಲ್ಲಿಯ ಕೆಂಪುಕೋಟೆಯ ಮೇಲೆ ಹಾರುತ್ತಿದ್ದ ಯೂನಿಯನ್ ಜಾಕ್ ಧ್ವಜವನ್ನು ಇಳಿಸಿ ಅದರ ಸ್ಥಾನದಲ್ಲಿ ಅಶೋಕ ಚಕ್ರವುಳ್ಳ ತ್ರಿವರ್ಣ ಧ್ವಜವನ್ನುಹಾರಿಸುವ ಹೆಬ್ಬಯಕೆಯನ್ನು ಹೊಂದಿತ್ತು.

ನೌಖಾಲಿಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಉದ್ದೇಶ್ಯ ಭಾರತದ ಎರಡು ಪ್ರಮುಖ ಧರ್ಮೀಯರಲ್ಲಿ ಉಂಟಾಗಿದ್ದ ಒಡಕನ್ನು ಒಂದುಗೂಡಿಸುವುದಾಗಿತ್ತು; ದೇಶದ ಎಲ್ಲ ಧರ್ಮೀಯರಿಗೆ ಧರ್ಮಗಳ ನಿಜಾರ್ಥವನ್ನು, ಅವುಗಳ ಅಂತರಾರ್ಥವನ್ನು ತಿಳಿಸುವುದಾಗಿತ್ತು. ಮುಂದೆ ಸ್ವತಂತ್ರ ಭಾರತವು ಕಟ್ಟಲುಬಯಸಿದ್ದ ಧರ್ಮ ನಿರಪೇಕ್ಷಿತ ರಾಷ್ಟ್ರದ ಅಡಿಪಾಯವನ್ನು ಹಾಕುವುದೇ ಆಗಿತ್ತು.

ಯಾವುದೇ ದೇಶದ ರಾಜಕೀಯಸ್ವಾತಂತ್ರ್ಯ ಉಳಿದು-ಬೆಳೆದು-ಅರಳಬೇಕಾದರೆ ಆ ದೇಶದ ಜೀವನದಲ್ಲಿ ರಾಜಕಾರಣಕ್ಕೂ ಮಿಗಿಲಾದ, ಸರ್ಕಾರದ ಅಧಿಕಾರಕ್ಕೂ ಮಿಗಿಲಾದ, ಸೈನ್ಯಶಕ್ತಿಗೂ ಮಿಗಿಲಾದ ಇನ್ನೊಂದು ಪ್ರಕಾರದ ಶಕ್ತಿ ಅಲ್ಲಿಯ ಜನತೆಯಲ್ಲಿ ಸಂಚರಿಸಬೇಕಾಗುತ್ತದೆ. ಅಂಥ ಶಕ್ತಿಯನ್ನು ತಾರದೆ ದೇಶದ ಸ್ವಾತಂತ್ರ್ಯ ಯಾವಾಗಲೂ ಒಂದಲ್ಲ ಒಂದು ಪ್ರಕಾರದ ಕಂಟಕಕ್ಕೆ ಒಳಗಾಗುವ ಸಾಧ್ಯತೆಯಿರುತ್ತದೆ. ೧೯೪೨ ರಿಂದ ೧೯೪೭ರ ವರೆಗೆ ನಡೆದ ಚಳುವಳಿಗಳು ಸಹ ಜನರ ಮಾನಸದಲ್ಲಿರಬೇಕಾದ ಮೌಲ್ಯಗಳ ವರ್ಧನೆಗಾಗಿ ನಡೆದಂಥವೇ ಆಗಿದ್ದವು. ಅದು ಖಾದಿ ಪುನಶ್ಚೇತನ ಚಳುವಳಿಯಾಗಿದ್ದಿರಬಹುದು, ಅಸ್ಪೃಶ್ಯತಾ ನಿವಾರಣಾ ಚಳುವಳಿಯಾಗಿದ್ದಿರಬಹುದು, ಈ ಎಲ್ಲ ಪ್ರಕಾರದ ಚಳುವಳಿಗಳ ಉದ್ದೇಶ್ಯ ಭಾರತೀಯರ ನೈತಿಕತೆಯ ಪುನರುತ್ಥಾನ ಆಗಿದ್ದಿತು. ಈ ಎಲ್ಲ ಆಂದೋಲನಗಳ ನೇತಾರರಾಗಿದ್ದವರು ಮಹಾತ್ಮಗಾಂಧೀ. ದಕ್ಷಿಣ ಆಫ್ರಿಕಾದ ತಮ್ಮ ೨೦ ವರ್ಷಗಳ ಸಾರ್ವಜನಿಕ

ಜೀವನದಲ್ಲಿಯೂ ಸಹ ಸತ್ಯ-ಅಹಿಂಸೆ-ಬ್ರಹ್ಮಚರ್ಯೆಯಂಥ ಮೂಲ ಮೌಲ್ಯಗಳ ಸ್ಥಾಪನೆಗಾಗಿ ಪ್ರಯತ್ನಿಸಿದ್ದರು. ೧೯೪೬ನೇ ಇಸ್ವಿ ಆಗಸ್ಟ್ ಮಾಹೆಯಿಂದ ೧೯೪೭ನೇ ಇಸ್ವಿ ಆಗಸ್ಟ್ ೧೫ನೇ ತಾರೀಖಿನ ವರೆಗೆ ಒಟ್ಟು ೧೨ ತಿಂಗಳ ಅವಧಿಯಲ್ಲಿ ಗಾಂಧೀಯವರು ನೌಖಾಲಿಯಲ್ಲಿ ಸ್ವಾತಂತ್ರ್ಯ ಆಂದೋಲನಕ್ಕೆ ಪೂರಕವಾಗಿ ನಡೆಸಿದ ಕೋಮು ಸೌಹಾರ್ದತಾ ಚಳುವಳಿ ಎಲ್ಲ ನಿಜ ಅರ್ಥದಲ್ಲಿ ಅಗ್ನಿ ಕುಂಡದಲ್ಲಿ ನಡೆಸಿದ ಸ್ವಾತಂತ್ರ್ಯ ಚಳುವಳಿಯಾಗಿತ್ತು.

ಈ ಸ್ವಾತಂತ್ರ್ಯ ಚಳುವಳಿಯ ಹೆಚ್ಚಿನ ವಿಶೇಷತೆಯೇನೆಂದರೆ ಈ ಚಳುವಳಿಯಲ್ಲಿ ಭಾಗವಹಿಸಿದ ಭಾರತೀಯ ಒಬ್ಬನೇ. ಇನ್ನಾವ ಪ್ರದೇಶದ ಭಾರತೀಯರು ಅಲ್ಲಿಗೆ ಹೋಗುವ ಸಾಹಸ ಮಾಡಲಿಲ್ಲ. ಏಕೆಂದರೆ ನೌಖಾಲಿಯ ಸುತ್ತಮುತ್ತಲಿನ ಪ್ರದೇಶವೆಲ್ಲ ಕೋಮುದ್ವೇಷದಿಂದ ಹೊತ್ತಿ ಉರಿಯುತ್ತಿತ್ತು, ರಕ್ತದ ಓಕುಳಿಯ ಹುಚ್ಚಾಟ ನಡೆಯುತ್ತಿತ್ತು, ಮಹಿಳೆಯರ ಮೇಲೆ ದೌರ್ಜನ್ಯದ ಅಟ್ಟಹಾಸ ನಡೆಯುತ್ತಿತ್ತು.

ಆಗ ಇನ್ನೂ ಇದ್ದ ಇಂಗ್ಲಿಷ್ ಸರ್ಕಾರದ ಪೋಲಿಸ್‌ದಳ, ಸೈನ್ಯ ಕೂಡ ನೌಖಾಲಿಯಲ್ಲಿ ನಡೆಯುತ್ತಿದ್ದ ಭೀಕರ ಮಾನವ ಹತ್ಯಾಕಾಂಡವನ್ನು ತಡೆಯಲು ಅಸಮರ್ಥವಾಗಿದ್ದವು. ಆಗ ಅಲ್ಲಿ ಮಾನವನ ರಾಕ್ಷಸೀ ಮನೋವೃತ್ತಿ ತನ್ನ ನಗ್ನರೂಪದಲ್ಲಿ ಕುಣಿಯುತ್ತಿತ್ತು. ಅಂಥ ಒಂದು ಉದಾಹರಣೆಯನ್ನು ಇಲ್ಲಿ ಓದಬಹುದು :-

ನೋವಾಖೋಲ ಹಳ್ಳಿಯ ಒಂದು ಪ್ರತಿಷ್ಠಿತ ಸಂಸಾರದ ಚಿಕ್ಕ ಹುಡುಗಿ ರಾಮಗಂಜ್ ಪೋಲಿಸ್ ಸ್ಟೇಷನ್ನಲ್ಲಿ ಕೊಟ್ಟ ಹೇಳಿಕೆಯಿಂದ, ನಡೆದ ಅಮಾನುಷ ಕೃತ್ಯದ ಒಂದು ಮಾದರಿ ದೊರಕುತ್ತದೆ. ಅಕ್ಟೋಬರ್ ೧೧ರ ಬೆಳಿಗ್ಗೆ ಆ ಹಳ್ಳಿಯ ಒಂದು ಗುಂಪು ಅವರ ಮನೆಗೆ ಬಂದು ಆ ಮನೆಯವರು ಆ ಸ್ಥಳದ ಸಂಸ್ಥೆಯೊಂದರ ನಿಧಿಗೆ (ಮುಸ್ಲಿಂ ನಿಧಿಗೆ) ೫೦೦ರೂಪಾಯಿ ತಕ್ಷಣ ಕೊಡದಿದ್ದರೆ ಅವರನ್ನು ಕೊಲೆ ಮಾಡುವುದಾಗಿಯೂ ಅವರ ಆಸ್ತಿಯನ್ನು ಲೂಟಿ ಮಾಡುವುದಾಗಿಯೂ ಅವರ ಮನೆಯನ್ನು ಸುಡುವುದಾಗಿಯೂ ಬೆದರಿಕೆ ಹಾಕಿತು. ಹಣವನ್ನು ತತ್‌ಕ್ಷಣ ಕೊಡಲಾಯಿತು. ಅದಾದ ಸ್ವಲ್ಪ ಹೊತ್ತಿನ ಮೇಲೆ ಒಂದು ಡೊಡ್ಡ ಪುಂಡರ ಗುಂಪು ಮನೆಯನ್ನು ಸುತ್ತುವರಿಯಿತು. ಆ ಮನೆಯಲ್ಲಿದ್ದವರ ಪೈಕಿ ಒಬ್ಬರು ಗುಂಪನ್ನು ಸಮಾಧಾನ ಪಡಿಸಲು ಪ್ರಯತ್ನ ಮಾಡಿದರು. ಅವನು ಒಂದು ಶಬ್ದವನ್ನು ಹೇಳುವಷ್ಟರಲ್ಲಿ ಪುಂಡರು ಅವನನ್ನು ಚಾಕುವಿನಿಂದ ತಿವಿದು ಕೊಂದರು. ಆ ಮೇಲೆ ಆ ಪುಂಡರ ಗುಂಪು ಆ ಮನೆಯಲ್ಲಿ ಅತ್ಯಂತ ಹಿರಿಯವನಾಗಿದ್ದವನ ಮೇಲೆ ಎರಗಿದರು. ಅವನನ್ನು ಕತ್ತರಿಸಿ ತುಂಡು ಮಾಡಿದ ಮೇಲೆ ಆ ಪುಂಡರು ಅವನ ಎರಡನೆಯ ಮಗನನ್ನು ಹಿಡಿದು ತಂದೆಯ ಮೃತದೇಹದ ಮೇಲೆ ಬಲತ್ಕಾರವಾಗಿ ಇಟ್ಟರು. ತಾಯಿ ಮಗನ ಮೇಲೆ ಬಿದ್ದುಕೊಂಡು ಅವನನ್ನು ಕೊಲ್ಲಬಾರದೆಂದು ಬೇಡಿಕೊಂಡಳು. ಈ

ಅಡಚಣೆಯಿಂದ ರೋಸಿದ ಪುಂಡರು ಅವಳನ್ನು ಲಾಠಿಯಿಂದ ಬಡಿದು, ಪ್ರಜ್ಞೆತಪ್ಪಿದ ಅವಳನ್ನು ಬೇರೆ ಸ್ಥಳಕ್ಕೆ ಸಾಗಿಸಿದರು. ತಾವು ಆಕ್ರಮಣ ಮಾಡಿದ್ದವನ ಮೇಲೆ ಹಿಂದಿನಂತೆಯೆ ವರ್ತಿಸಿ, ಆ ಪುಂಡರು ತಮ್ಮ ಗಮನವನ್ನು (ಹುಡುಗಿಯ) ತಂದೆಯ ಕಡೆಗೆ ಹರಿಸಿದರು. ಹುಡುಗಿ ತಾನು ಅವಿತು ಕುಳಿತಿದ್ದ ಮನೆಯಿಂದ ಹೊರಗೆ ಓಡಿಬಂದು ತಮ್ಮ ತಂದೆಯನ್ನು ಕೊಲೆ ಮಾಡಲಿದ್ದವನಿಗೆ ತಮ್ಮ ತಂದೆಯನ್ನು ಉಳಿಸುವುದಕ್ಕಾಗಿ ಕೆಲವು ಒಡವೆಗಳನ್ನೂ ೪೦೦ರೂಪಾಯಿಗಳನ್ನೂ ಕೊಟ್ಟಳು, ಆ ಪುಂಡ ಹಣ ಮತ್ತು ಒಡವೆಗಳನ್ನು ಎಡಗೈಯಿಂದ ತೆಗೆದುಕೊಂಡು ಅವಳ ತಂದೆ ಸಾಯುವಂತೆ ಬಲಗೈಯಿಂದ ಹೊಡೆದನು'.

ನೌಖಾಲಿಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಉದ್ದೇಶ ಭಾರತಕ್ಕೆ ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ತಂದು ಕೊಡುವುದಾಗಿರಲಿಲ್ಲ ೧೮೫೭ ರಲ್ಲಿ ನಡೆದ ಸಿಪಾಯಿದಂಗೆಯಿಂದ ಹಿಡಿದು ೧೯೪೨ರ ''ಭಾರತ ಬಿಟ್ಟು ತೊಲಗಿ'' ಆಂದೋಲನದವರೆಗೆ ಸುಮಾರು ೮೫ ವರ್ಷಗಳ ಕಾಲ ನಡೆದ ಸ್ವಾತಂತ್ರ್ಯ ಹೋರಾಟ ಪ್ರಧಾನವಾಗಿ ರಾಜಕೀಯ ಉದ್ದೇಶ್ಯವನ್ನೇ ಹೊಂದಿತ್ತೇ ಹೊರತು ಅತ್ಯಂತ ಪುರಾತನವಾದ ತನ್ನ ನಾಗರಿಕತೆಯ ಗರ್ಭದಲ್ಲಿ ಭಾರತ ಇರಿಸಿಕೊಂಡು ಬಂದಿದ್ದ ಮೌಲ್ಯಗಳ ಸ್ಥಾಪನೆಗಾಗಿ ನಡೆದಿರಲಿಲ್ಲ ''ಸ್ವಾತಂತ್ರ್ಯ ಬೇಕು'' ಎಂದು ೧೮೮೫ರಲ್ಲಿ ಮೊಟ್ಟ ಮೊದಲಬಾರಿಗೆ ವಿಚಾರ ಬಂದದ್ದು ಸಹ ರಾಜಕೀಯ ಉದ್ದೇಶದಿಂದಲೆ. ಆನಂತರದಿಂದ ೧೯೧೫ ರಲ್ಲಿ ಗಾಂಧೀಜಿ ಅಹಮದಬಾದ್‌ನಲ್ಲಿ ಸತ್ಯಾಗ್ರಹ ಆಶ್ರಮ ಸ್ಥಾಪಿಸುವವರೆಗೂ ಭಾರತದ ಸ್ವಾತಂತ್ರ್ಯ ಚಳುವಳಿಗೆ ಕೇವಲ ರಾಜಕೀಯ ಹಲ್ಲು ಮಾತ್ರ ಇತ್ತು. ಆನಂತರದಿಂದ ಭಾರತದ ಸ್ವಾತಂತ್ರ್ಯ ಚಳುವಳಿಗೆ ರಾಜಕೀಯ ವಿಚಾರಗಳೊಂದಿಗೆ ಸಮಾನತೆ, ಸಹೋದರತ್ವದಂಥ ವಿಚಾರಗಳು ಸೇರಿದುವಲ್ಲದೆ ಸತ್ಯ, ಅಹಿಂಸೆಗಳ ವಿಚಾರವೂ ಸೇರಿಕೊಂಡು ಹೊಸ ಅರ್ಥಬಂತು, ಹೊಸ ತಿರುವು ಸಿಕ್ಕಿತು. ಚಳುವಳಿಯ ವೈಚಾರಿಕ ಬೆಳವಣಿಗೆ ಇಷ್ಟಕ್ಕೆ ನಿಲ್ಲಲಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಾಧನ ಶುದ್ಧಿಯಂಥ ಅಪೂರ್ವವಾದ ವಿಚಾರವನ್ನು ಹೊಂದಿಸಿಕೊಂಡು ಮುನ್ನಡೆಯಿತು. ಗುರಿಗಿಂತಲೂ ಗುರಿಯನ್ನು ಸಾಧಿಸಲು ಬೇಕಾದ ಸಾಧನ ಹೆಚ್ಚು ಶುದ್ಧವಾಗಿರಬೇಕೆಂಬ ನೀತಿಯನ್ನು ಸ್ವಾತಂತ್ರ್ಯ ಚಳುವಳಿ ಮುಂದಿರಿಸಿಕೊಂಡು ೧೯೪೨ರವರೆಗೂ ಬಿರುಸಾಗಿ ನಡೆಯಿತು.

೧೯೪೨ರ ನಂತರ ಸ್ವಾತಂತ್ರ್ಯ ಚಳುವಳಿ ತನ್ನ ಮೌಲ್ಯಗಳನ್ನು, ಆದರ್ಶಗಳನ್ನು ಕಳೆದುಕೊಳ್ಳುತ್ತಾ ಬಂತು. ಚಳುವಳಿಯ ಮೌಲ್ಯ ಭೂಮಿಗಿಳಿಯಿತು. ದೇಶಕ್ಕೆ ಸ್ವಾತಂತ್ರ್ಯ ಬಂದರೂ ದೇಶ ಒಂದಾಗಿ ಉಳಿಯುವುದಿಲ್ಲವಷ್ಟೆ ಅಲ್ಲ ಸ್ವತಂತ್ರ ಭಾರತದ ರಾಜಕಾರಣ ಅನೀತಿಯುತವಾಗಿಯೂ ಭ್ರಷ್ಟತೆಯಿಂದಲೂ ಕೂಡಿದುದಾಗಿರುವುದರ ಜೊತೆಗೆ ಅದರ ಆರ್ಥಿಕ ನೀತಿ ಪಾಶ್ಚಿಮಾತ್ಯದೇಶಗಳ ಆದೇಶದಂತೆ ಭೀತಿಯು ಸಹ ಆಗಲೆ ಭಾರತದ ಕ್ಷಿತಿಜದಲ್ಲಿ ಕಾಣಲಾರಂಭಿಸಿದವು. ಆದರೆ ಆ ವೇಳೆಗಾಗಲೆ ಇಂಗ್ಲಿಷ್ ಸರ್ಕಾರ

ಭಾರತಕ್ಕೆ ಸ್ವಾತಂತ್ರ್ಯಕೊಡಲು ತೀರ್ಮಾನಿಸಿತ್ತು. ಇಂಗ್ಲಿಷ್ ಸರ್ಕಾರದ ಈ ಘೋಷಣೆ ೧೯೪೭ ಜುಲೈ ೧೮ರಂದು ಹೊರ ಬಿದ್ದಿತ್ತು. ಆದರೆ ಸ್ವಾತಂತ್ರ್ಯವನ್ನು ಸ್ವೀಕರಿಸುವ ಸಿದ್ಧತೆ ಮಾತ್ರ ದೇಶದಲ್ಲಿರಲಿಲ್ಲ. ಹಸಿರು ಚಪ್ಪರ ಮುರಿದ ಮದುವೆ ಮನೆಯಂತಿತ್ತು ಭಾರತ. ಭಾರತದ ಎರಡು ಪ್ರಮುಖ ಧರ್ಮಗಳಾದ ಹಿಂದೂ ಮತ್ತು ಇಸ್ಲಾಂ ಎರಡೂ ಪರಸ್ಪರ ವಿರುದ್ಧಮುಖವಾಗಿ ನಿಂತುಕೊಂಡಿದ್ದವು. ಒಂದು ಧರ್ಮದವರು ಇನ್ನೊಂದು ಧರ್ಮದವರನ್ನು ಹೇಳ ಹೆಸರಿಲ್ಲದಂತೆ ಮಾಡಲು ಉದ್ಯುಕ್ತರಾಗಿದ್ದರು. ಭಾರತವು "ನಮ್ಮ ಮಾತೃಭೂಮಿ, ಹಿಂದುಗಳು ನಮ್ಮ ಸಹೋದರರು" ಎಂಬ ವಿಷಯವನ್ನೇ ಮುಸ್ಲಿಮರು ಮರೆತಿದ್ದರು; ಮುಸ್ಲಿಮರನ್ನು ನಮ್ಮ ವಿಶ್ವಾಸಕ್ಕೆ ತೆಗೆದು ಕೊಂಡು "ದೇಶ ಕಟ್ಟೋಣ" ಎಂಬ ವಿಚಾರವನ್ನು ಹಿಂದೂಗಳು ಮರೆತಿದ್ದರು. ಹೀಗಾಗಿ ಸ್ವಾತಂತ್ರ್ಯೋದಯದ ಬೆಳಕಿನಲ್ಲಿಯೂ ಭಾರತ ಕಗ್ಗತ್ತಲೆಯಲ್ಲಿ ನರಳುತ್ತಿತ್ತು. ಇದುವರೆಗೆ ನಡೆದ ಸ್ವಾತಂತ್ರ್ಯ ಚಳುವಳಿ ನಿರರ್ಥಕವಾಗುವಂಥ ಪರಿಸ್ಥಿತಿ ಬಂದೊದಗಿತ್ತು.

ಸತ್ತು ಹೋಗುತ್ತಿದ್ದ ಸ್ವಾತಂತ್ರ್ಯ ಚಳುವಳಿಗೆ ಹೊಸರಕ್ತ ಕೊಟ್ಟು ಅದನ್ನು ಪುನಶ್ಚೇತನಗೊಳಿಸಬೇಕಿತ್ತು. ಅಷ್ಟರಲ್ಲಿ ಕಲ್ಕತ್ತ, ದಿಲ್ಲಿ, ಬಿಹಾರ ಮತ್ತು ನೌಖಾಲಿಯಲ್ಲಿ ಕೋಮುದ್ವೇಷದ ಬೆಂಕಿ ಹೊತ್ತಿ ಉರಿಯಹತ್ತಿತ್ತು. ಭಾರತೀಯರಿಂದಲೆ ಭಾರತೀಯರ ಮಾರಣಹೋಮ ನಡೆಯುತ್ತಿತ್ತು. ಆ ಉರಿಯನ್ನು ಆರಿಸದೆ, ಆ ಮಾರಣಹೋಮವನ್ನು ನಿಲ್ಲಿಸದೆ ಭಾರತಕ್ಕೆ ಸ್ವಾತಂತ್ರ್ಯ ಎಲ್ಲಿ? ಬಂದರೂ ಬೆಲೆ ಎಲ್ಲಿ? ಆದ್ದರಿಂದ ಸ್ವಾತಂತ್ರ್ಯದ ಎರಡನೆ ಹಾಗೂ ನಿರ್ಣಾಯಕ ಚಳುವಳಿಯನ್ನು ನಡೆಸಬೇಕಾದುದು ಅಗತ್ಯವಾಯಿತು. ಆ ಚಳುವಳಿ ನೌಖಾಲಿಯ ಅಗ್ನಿಕುಂಡದಲ್ಲಿ ನಡೆಯಬೇಕಾಗಿ ಬಂತು. ಆ ನಿರ್ಣಾಯಕ ಸ್ವಾತಂತ್ರ್ಯ ಚಳುವಳಿಯನ್ನು ಧಗಧಗಿಸುವ ಆ ಕೋಮುಗಲಭೆಯ ಜ್ವಾಲೆಯಲ್ಲಿ ಮುನ್ನಡೆಸುವ ಧೀರರು ಬೇಕಲ್ಲವೆ? ಆ ಜ್ವಾಲೆ ಎಷ್ಟು ಪ್ರಖರವಾಗಿತ್ತೆಂದರೆ ಸೈನ್ಯವಾಗಲಿ, ಪೋಲಿಸರಾಗಲಿ ಪರಿಸ್ಥಿತಿಯನ್ನು ನಿಯಂತ್ರಿಸಲು ಸಾಧ್ಯವಿರಲಿಲ್ಲ. ಅದೇ ರೀತಿ ಈ ಮೊದಲು ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿದ್ದ ಯಾವ ಪ್ರಮುಖ ನಾಯಕನ ಸಾಮರ್ಥ್ಯವೂ ಸಾಕಾಗುವಂತಿರಲಿಲ್ಲ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತರಬಹುದಾದ ಮತ್ತು ಭಾರತವನ್ನು ಉಳಿಸಬಹುದಾದ ಏಕೈಕ ನಾಯಕನಾಗಿ ಗಾಂಧೀಜಿ ಇದ್ದರು. ಕಲ್ಕತ್ತೆಯಲ್ಲಿ, ದಿಲ್ಲಿಯಲ್ಲಿ ಅವರು ಮಾಡಿದ ಉಪವಾಸವಾಗಲಿ, ನೌಖಾಲಿಯಲ್ಲಿ ನಡೆಸಿದ ರಚನಾತ್ಮಕ ಕ್ರಿಯೆಯಾಗಲಿ ಸ್ವಾತಂತ್ರ್ಯತರುವುದಕ್ಕಿಂತ ಮಿಗಿಲಾಗಿ ಸ್ವಾತಂತ್ರ್ಯಾನಂತರದ ಭಾರತದ ನಿರ್ಮಾಣ ಕುರಿತೇ ಆಗಿದ್ದಿತ್ತು ಎಂದು ಹೇಳಬಹುದು. ಜಗತ್ತಿನ ಇತಿಹಾಸ ಕಂಡರಿಯದೆ ಇದ್ದಂತಹ ಮಾನವ ಜನಾಂಗದ ತುಮುಲದ ಸಂದರ್ಭದಲ್ಲಿ ಗಾಂಧೀ ಬರೆದ ಲೇಖನಗಳು, ಮಾಡಿದ ಭಾಷಣಗಳು, ನಡೆಸಿದ ಸಂವಾದಗಳೆಲ್ಲವು ನೌಖಾಲಿಯಲ್ಲಿ ಶಾಂತಿ ಸ್ಥಾಪಿಸುವ ಪ್ರಯತ್ನದ ಜೊತೆಗೆ ಉದಯಿಸಲಿರುವ ಸ್ವತಂತ್ರ ಭಾರತದ

ನಿರ್ಮಾಣವನ್ನು ಕುರಿತೂ ಹೇಳಿದಂಥವಾಗಿದ್ದವು. ನೌಖಾಲಿಯಲ್ಲಿಯ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಆಗಿನ ಹಿರಿಯ ನಾಯಕ ಜವಾಹರಲಾಲ್ ನೆಹರುರವರ ಈ ಮಾತುಗಳು ಗಾಂಧೀಜಿ ನೌಖಾಲಿಯಲ್ಲಿಯ ಚಳುವಳಿಯ ಗುರಿಯನ್ನು ಎಷ್ಟು ವಿಸ್ತರಿಸಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ. "ಮಹಾತ್ಮಗಾಂಧಿ ನಮ್ಮ ಮಧ್ಯೆ ಈ ಸಂಕಟಮಯ ಸಮಯದಲ್ಲಿ ಉಪಸ್ಥಿತರಿದ್ದುದು ಎಂಥ ಅದ್ಭುತಭಾಗ್ಯ ಎನ್ನುವುದನ್ನು ನೀವೇನು ಬಲ್ಲಿರಿ? ಅವರ ಅತ್ಯಂತ ಮಹತ್ವವೂ ಭವ್ಯವೂ ಆದ ಸೇವೆ ಭಾರತಕ್ಕೆ ಈ ಪರ್ವ ಸಮಯದಲ್ಲಿ ಅಮೋಘವಾದುದಾಯಿತು. ಕಳೆದ ಅರ್ಧಶತಮಾನಕ್ಕೂ ಮೀರಿ ಅವರು ದೇಶಕ್ಕಾಗಿ ಮಾಡಿದ, ನೀಡಿದ ಸೇವೆ ನಮ್ಮ ಸ್ವಾತಂತ್ರ್ಯಕ್ಕೆ ಕಾರಣವಾಯಿತು. ಅದಕ್ಕಿಂತ ಮಿಗಿಲಾಗಿ ಈ ನಾಲ್ಕು ತಿಂಗಳಲ್ಲಿ ಅವರೆಸಗುತ್ತಿರುವ ಮಹತ್ತರ ಸೇವೆ ಅತ್ಯದ್ಭುತವಾದುದು; ಎಲ್ಲಕ್ಕಿಂತ ಮಿಗಿಲಾದ ಸಾಧನೆ. ಮುಳುಗಿ ಹೋಗುತ್ತಿದ್ದ ನಮ್ಮ ಸುತ್ತಲಿನ ಜಗತ್ತಿನಲ್ಲಿ ಗಾಂಧೀಜಿ ಅಬೇಧ್ಯ ಶಿಲಾಸ್ತಂಭದಂತೆ ನಿಂತು ಸತ್ಯದ ಏಕೈಕ ಮಹಾಜ್ಯೋತಿಯಾಗಿ ಬೆಳಗಿದ್ದಾರೆ".

ಕೋಮು ಸೌಹಾರ್ದತೆಗೆ ಸ್ವಾತಂತ್ರ್ಯಕ್ಕಿಂಲೂ ಮೊದಲು ಎಷ್ಟು ಮಹತ್ವ ಇತ್ತೋ ಅಷ್ಟೇ ಮಹತ್ವ ಸ್ವತಂತ್ರ ಭಾರತದಲ್ಲೂ ಇದೆ ಮತ್ತು ಇರಬೇಕು ಎಂಬ ಮಾತನ್ನು ಸಹ ಗಾಂಧೀಜಿ ಆಗ ಹೇಳಿದ್ದರು. ಅವರು ಆ ಕುರಿತು ಹೀಗೆ ಹೇಳಿದ್ದರು: "ಹೃದಯ ಹೃದಯಗಳನ್ನು ನಿರ್ಮಲಗೊಳಿಸಿ ದೇಶ ಬಾಂಧವರನ್ನು ಒಗ್ಗೂಡಿಸುವ ಏಕೈಕ ಹಂಬಲದಿಂದ ಈ ಆಧ್ಯಾತ್ಮಿಕ ಉಪವಾಸ ವ್ರತವನ್ನು ಕೈಗೊಂಡಿರುವುದಾಗಿ ಬಿನ್ನವಿಸಿಕೊಳ್ಳುತ್ತೇನೆ. ಕೇವಲ ನನ್ನನ್ನುಳಿಸಿಕೊಳ್ಳುವ ದೃಷ್ಟಿಯಿಂದ ನನ್ನಲ್ಲಿ ಮೊರೆಯಿಡುವುದಾದರೆ ನನಗೆ ಅದರಿಂದ ಸಮಾಧಾನವಾಗದು. ಆತ್ಮಶುದ್ಧಿಗಾಗಿ ಕೈಗೊಂಡಿರುವ ಈ ಉಪವಾಸವ್ರತ ನನ್ನಲ್ಲಿ ಆನಂದದ ಮಹಾಪೂರವನ್ನೇ ಹರಿಸಿದೆ. ಈ ಸ್ಥಿತಿ ನನಗೆ ಅಗತ್ಯವೆನಿಸಿದೆ. ಅದನ್ನು ಭಂಗಪಡಿಸಬೇಡಿ. ನೀವೇ ಹೃತ್ಪೂರ್ವಕವಾಗಿ ನನ್ನೊಡನೆ ಪರಿವರ್ತಿತಗೊಂಡು ಈಗ ಕವಿದಿರುವ ಆಸುರೀ ಪ್ರವೃತ್ತಿಗಳಿಂದ ದೈವೀಪ್ರವೃತ್ತಿಗಳೆಡೆಗೆ ಸಾಗಿದರೆ ಮಾತ್ರವೇ ನನಗೆ ಆತ್ಮತೃಪ್ತಿ ದೊರೆತೀತು".

ಇಂಥ ಉನ್ನತ ಉದ್ದೇಶ್ಯಗಳನ್ನು ಹೊಂದಿದ ನಿಜವಾದ ಸ್ವಾತಂತ್ರ್ಯಚಳುವಳಿ ನಡೆದದು ನೌಖಾಲಿಯ ಅಗ್ನಿಕುಂಡದಲ್ಲಿ ಎಂಬುದು ಗಾಂಧೀಜಿಯವರ ಆ ದಿನಗಳಲ್ಲಿಯ ಕೆಲಸ ಮತ್ತು ಮಾತುಗಳನ್ನು ಗಮನಿಸಿದಾಗ ಗೊತ್ತಾಗುತ್ತದೆ.

ತಮ್ಮ ಅಂತಿಮ ದಿನದ ಹಿಂದಿನ ದಿನ ಅಂದರೆ ಜನವರಿ ೨೯ರಂದು ಬರೆದ ಈ ಮಾತು ಇಂದಿಗೂ ಅನ್ವಯಿಸುತ್ತದೆ. "ನಾನು ಸೇವಾಗ್ರಾಮಕ್ಕೆ ಬರುವುದು ಇನ್ನೂ ಇತ್ಯರ್ಥವಾಗಿಲ್ಲ. ಇಲ್ಲಿ ದೆಹಲಿಯಲ್ಲಿ ನಾನು ನನ್ನ ಕೆಲಸ ಮಾಡಿ ಮುಗಿಸಿದ್ದೇನೆ ಎಂದಾದರೆ ಮಾತ್ರ ಹೊರಡಬಲ್ಲೆ. ನಾನು ಇಲ್ಲಿದ್ದು ಮಾಡು ಇಲ್ಲವೆ ಮಡಿ ಪ್ರತಿಜ್ಞೆ ಈಡೇರುವುದನ್ನು ಕಾಯಬೇಕಾದುದಿಲ್ಲ. ಇಲ್ಲಿಯ ಜನ ಅದನ್ನು ಇನ್ನೂ ನನಗೆ ಮನದಟ್ಟುಮಾಡಿಕೊಡಬೇಕಾಗಿದೆ. ಬಹುಶಃ ಇದು ನಾಳೆ ಇತ್ಯರ್ಥವಾಗಬಹುದು".

***

ಬಾಳಿಗೆ ಫಲಜ್ಯೋತಿಷ ಬೆಳಕೇ ?

- **ಜಿ.ಟಿ.ನಾರಾಯಣರಾವ್**

ಫಲಜ್ಯೋತಿಷಕ್ಕೆ ಇಂಗ್ಲಿಷಿನಲ್ಲಿ Astrology ಎಂದೂ ಜ್ಯೋತಿಶ್ಶಾಸ್ತ್ರಕ್ಕೆ Astronomy ಎಂದೂ ಹೆಸರು. Astronomyಗೆ ಕನ್ನಡದಲ್ಲಿ ಖಗೋಳ ವಿಜ್ಞಾನವೆಂಬ ಪದ ರೂಢಿಯಲ್ಲಿದೆ. ಬೆಳಕನ್ನು ಬೀರುತ್ತ ನಿತ್ಯ ಸಂಚಾರಿಗಳಾಗಿರುವ ಸೂರ್ಯ, ಚಂದ್ರ, ಮತ್ತು ಐದು ಗೋಚರ ಗ್ರಹಗಳ ಮತ್ತು ಸ್ಥಿರ ನಕ್ಷತ್ರಗಳ ಒಟ್ಟು ಹೆಸರು ಜ್ಯೋತಿರಾಶಿ. ಫಲಜ್ಯೋತಿಷವೂ ಖಗೋಳವಿಜ್ಞಾನವೂ ನಾಗರಿಕತೆಯ ಆರಂಭ ದಿನಗಳಂದು ಮೈದಳೆದು ಜೊತೆ ಜೊತೆಯಾಗಿ ಬೆಳೆದುವು.

ಅಂದಿನ ಜನರ ನಂಬಿಕೆ ಪ್ರಕಾರ ಸೃಷ್ಟಿಕರ್ತನ ನೆಲೆ ಆಕಾಶದ ಆಚೆಗಿದೆ, ಆತ ನಮಗೆ ಅಗೋಚರ, ಸೂರ್ಯ-ಚಂದ್ರರು ಆತನ ಕಣ್ಣುಗಳು, ಗ್ರಹಗಳ ಮೂಲಕ ಆತ ಲೋಕಕ್ಕೆ ತನ್ನ ಇಂಗಿತಗಳನ್ನು ಸೂಚಿಸುತ್ತಾನೆ ಇತ್ಯಾದಿ. ಹೀಗೆ ಫಲಜ್ಯೋತಿಷದ ಮೊದಲ ಸೆಲೆ ಜಿನುಗಿತು. ಇಲ್ಲಿ ನಂಬಿಕೆಗಳ ಕಲ್ಪನೇದೇ ಪ್ರಧಾನ ಪಾತ್ರ, ತರ್ಕ ಅಥವಾ ಪ್ರಯೋಗದ್ದು ಅಲ್ಲ.

ಖಗೋಳವಿಜ್ಞಾನ ಸ್ವತಂತ್ರವಾಗಿ ಬೆಳೆಯಿತು: ಸ್ಥಿರ ನಕ್ಷತ್ರ ಪರದೆಯ ಮೇಲೆ ೭ ಗೋಚರಕಾಯಗಳ (ಸೂರ್ಯ, ಚಂದ್ರ, ಮತ್ತು ೫ ಗ್ರಹಗಳು) ಚಲನವಲನಗಳನ್ನೂ ಸಾಪೇಕ್ಷ ವಿನ್ಯಾಸಗಳನ್ನೂ ಅಳೆದು ಹಿನ್ನೆಲೆಯ ನಿಯಮಗಳನ್ನು ಅರಿಯಲು ಪ್ರಯತ್ನಿಸುವ ವಿಜ್ಞಾನವಿಭಾಗವಿದು. ಇದರಲ್ಲಿ ಪ್ರತ್ಯಕ್ಷಪ್ರಮಾಣವೇ ಆಧಾರ, ಕಲ್ಪನೆಗೆ ಅವಕಾಶವಿಲ್ಲ.

ಫಲಜ್ಯೋತಿಷ ತನ್ನ ಅತಾರ್ಕಿಕ ಮತ್ತು ಅಸಂಗತ ಊಹಾಪೋಹಗಳಿಗೆ ಸೈದ್ಧಾಂತಿಕ ಸಮರ್ಥನೆ ಕೊಡುವ ಸಲುವಾಗಿ ಖಗೋಳವಿಜ್ಞಾನ ದಾಖಲಿಸಿದ ಮಾಹಿತಿಗಳನ್ನು ಬಳಸಿಕೊಳ್ಳಲು ಆರಂಭಿಸಿತು. ಅಂದಿನ ಮಟ್ಟಿಗೆ ಇದರ ಅರ್ಥ: ಖಗೋಳವಿಜ್ಞಾನದ ಭದ್ರಪಾಯದ ಮೇಲೆ ಫಲಜ್ಯೋತಿಷದ ಅಭದ್ರ ಸೌಧ ಏಳತೊಡಗಿತು. ಇಂದು ಫಲಜ್ಯೋತಿಷವನ್ನು ಖಗೋಳವಿಜ್ಞಾನದ ಅನೌರಸ ಸಂತಾನ ಎನ್ನುವುದುಂಟು, ಸಕಾರಣವಾಗಿ.

ಕಾಲ ಸಂದಂತೆ ಆಕಾಶದ ಸಾಂಕೇತಿಕ ಚಿತ್ರವಾಗಿ ಜಾತಕ ತಲೆಹಾಕಿತು. ಇದರ ಬಾಹ್ಯರೂಪವನ್ನು ಚಿತ್ರದಲ್ಲಿ ಕಾಣಿಸಿದೆ. ಸುಮಾರು ೧೨ ಮಾಸಗಳ (ಚಂದ್ರ ಇಲ್ಲಿಯ ಗೋಚರಮಾನಕ)ಅವಧಿಯಲ್ಲಿ ಒಂದು ವರ್ಷ(ಸೂರ್ಯ ಇಲ್ಲಿಯ ಗೋಚರಮಾನಕ) ಸಂದುಹೋಗುವುದು ಬಾನಿನಲ್ಲಿ ನಕ್ಷತ್ರಚಿತ್ರಗಳಿಂದ ಮತ್ತು ಬುವಿಯಲ್ಲಿ ಋತುಚಕ್ರದ ಉರುಳುವಿಕೆಯಿಂದ ವ್ಯಕ್ತವಾಯಿತು. ಹೀಗಾಗಿ ಸಂಖ್ಯೆ

೧೨ಕ್ಕೆ ಪ್ರಾಮುಖ್ಯ ಬಂತು. ಅಲ್ಲದೇ ಸೂರ್ಯ, ಚಂದ್ರ ಮತ್ತು ಗ್ರಹಗಳು ಆಕಾಶದ ಒಂದು ಇಕ್ಕಟ್ಟು ಪಟ್ಟಿಗೇ ಸೀಮಿತವಾಗಿದ್ದುದನ್ನು ಅಂದಿನವರು ಗುರುತಿಸಿದ್ದರು. ಇದು ರಾಶಿಚಕ್ರ. ವೀಕ್ಷಣೆ ಮತ್ತು ಗಣನೆ ಸಲುವಾಗಿ ಇದನ್ನು ೧೨ ಸಮವಿಭಾಗಿಸಿದರು; ಇವೇ ಮೇಷದಿಂದ ಮೀನದ ವರೆಗಿನ ದ್ವಾದಶರಾಶಿಗಳು. ಪ್ರತಿಯೊಂದರ ವ್ಯಾಪ್ತಿ ೩೦ ಡಿಗ್ರಿಗಳು. ವರ್ಷದಲ್ಲಿ ಸುಮಾರು ೩೬೦ ದಿವಸಗಳಿವೆಯೆಂದು ತಿಳಿದಿತ್ತು. ರಾಶಿಚಕ್ರದ ಮೇಲೆ ಸೂರ್ಯಚಂದ್ರರ ಚಲನೆ ಸದಾ ಪಶ್ಚಿಮ–ಪೂರ್ವ. ಎಂದೇ ಜಾತಕದಲ್ಲಿ ಅವನ್ನು ನಮ್ಮ ಸೌಕರ್ಯಾರ್ಥ ಪ್ರದಕ್ಷಿಣದಿಶೆಯಲ್ಲಿ ಗುರುತಿಸುವುದು ರೂಢಿಗೆ ಬಂತು. ಪ್ರದಕ್ಷಿಣೆಯ ತಳದಲ್ಲಿರುವ ಧಾರ್ಮಿಕ ನಂಬಿಕೆ ಪ್ರಾಯಶಃ ಈ ಸಂಪ್ರದಾಯದ ಕಾರಣ.

ಶಿಶುವಿನ ಜನನಕ್ಷಣಸ್ಥಳ ಗೊತ್ತಿದ್ದಾಗ ಅದರ ಜಾತಕ ರಚಿಸುವುದು ಒಂದು ವೃತ್ತಿಯಾಗಿ ಬೆಳೆಯಿತು. ಕ್ರಮೇಣ ಇದಕ್ಕೆ ವಿಶಿಷ್ಟ ವೈಜ್ಞಾನಿಕಆಧ್ಯಾತ್ಮಿಕ ಕ್ರಿಯೆಯೆಂಬ ಉತ್ಪ್ರೇಕ್ಷಿತ ಅಂತಸ್ತು ಕೂಡ ಪ್ರಾಪ್ತವಾಯಿತು! ಏಕೆಂದರೆ ಆ ಮಗುವಿನ ಭೂತವರ್ತಮಾನಭವಿಷ್ಯ ಸಮಸ್ತವೂ ಅದರ ಜಾತಕದಲ್ಲಿ ಗರ್ಭಿತವಾಗಿವೆ ಎಂಬುದು ನಂಬಿಕೆ. ಜಾತಕವನ್ನು ರಚಿಸುವ ಮತ್ತು ಅದನ್ನು ವಾಚಿಸುವವ(ಫಲವನ್ನು ಹೇಳುವಾತ) ದೇವಾಂಶಸಂಭೂತನೆಂದು ಮುಗ್ಧಜನ ಭಾವಿಸಿದರು–ಈತ ಸೃಷ್ಟಿಕರ್ತನ ಸಾಕ್ಷಾತ್ ಮುಖವಾಣಿ!

೧೨ ಮೀನ	೧ ಮೇಷ	೨ ವೃಷಭ	೩ ಮಿಥುನ
೧೧ ಕುಂಭ	ಜಾತಕದ ಬಾಹ್ಯ ರೂಪ		೪ ಕರ್ಕಾಟಕ
೧೦ ಮಕರ			೫ ಸಿಂಹ
೯ ಧನು	೮ ವೃಶ್ಚಿಕ	೭ ತುಲಾ	೬ ಕನ್ಯಾ

ಸೂರ್ಯ ನಮ್ಮ ಸುತ್ತ ಸುತ್ತುತ್ತಿರುವಂತೆ ಭಾಸವಾಗುತ್ತದೆ. ಇದು ಮಿಥ್ಯಾಚಿತ್ರವೆಂಬ ಭೌತಸತ್ಯ ೧೫ನೆಯ ಶತಮಾನದಿಂದಲೇ ತಿಳಿದಿದೆ. ಆಗಲೇ ಫಲಜ್ಯೋತಿಷದ ಸಮಾಧಿ ಆಗಬೇಕಿತ್ತು. ಆಗಲಿಲ್ಲ. ಏಕೆಂದರೆ ಬಹುಸಂಖ್ಯಾತರ ಪ್ರಪಂಚಕ್ಕೆ ಇಂದಿನಂತೆ ಅಂದು ಕೂಡ ವಿಜ್ಞಾನದ ಅಮೂರ್ತ ತೀರ್ಮಾನಗಳು ಇಳಿಯಲಿಲ್ಲ! ಪ್ರಾಚೀನರ ದೃಷ್ಟಿಯಲ್ಲಿ ಕಂಡದ್ದೆಲ್ಲವೂ ವಾಸ್ತವ ಎಂದಿತ್ತು. ವರ್ತಮಾನ ದೃಷ್ಟಿ ಹೇಗಿದೆ? ಮೂಢನಂಬಿಕೆಗಳ ಆಡುಂಬೊಲವಾಗಿದೆ!

ಸೂರ್ಯನ ಕಕ್ಷೆಗೆ ಕ್ರಾಂತಿವೃತ್ತ ಎಂದು ಹೆಸರು. ಚಂದ್ರ ನಮ್ಮ ಉಪಗ್ರಹ,

ವಾಸ್ತವವಾಗಿ ನಮ್ಮ ಸುತ್ತ ಸುತ್ತುತ್ತಿದೆ. ಇದರದು ಚಾಂದ್ರಕಕ್ಷೆ. ನಮ್ಮ ನೆಲೆ ಇವೆರಡು ವೃತ್ತಗಳ ಕೇಂದ್ರ. ಇವು ಪರಸ್ಪರ ತುಸುವೇ ಬಾಗಿಕೊಂಡಿರುವುದರಿಂದ ಎರಡು ಎದುರುಬದಿರು ಬಿಂದುಗಳಲ್ಲಿ ಛೇದಿಸುವಂತೆ ಭಾಸವಾಗುತ್ತದೆ. ಛೇದನಬಿಂದುಗಳಿಗೆ ಭೌತ ಅಸ್ತಿತ್ವ ಇಲ್ಲವಾದರೂ ಯಾವುದೇ ಒಂದರ ತೀರ ಸನಿಹದಲ್ಲಿ ಅಥವಾ ಒಂದೊಂದರಲ್ಲಿ ಒಂದರಂತೆ ಸೂರ್ಯ ಮತ್ತು ಚಂದ್ರ ಬಂದಾಗ ಗ್ರಹಣವೆಂಬ ವಿಚಿತ್ರ 'ದುರ್ಘಟನೆ' ಸಂಭವಿಸುವುದು ಅಂದಿನವರ ತೀವ್ರ ಗಮನ ಸೆಳೆಯಿತು; ಭಗವಂತನ ಕೋಪ ಅಥವಾ ಸದ್ಯೋಭವಿಷ್ಯದಲ್ಲಿ ನಡೆಯಲಿರುವ ಘೋರ ವಿಪತ್ತಿನ ಪೂರ್ವ ಸೂಚನೆ ಇದೆಂದು ಈ ನೈಸರ್ಗಿಕ ಘಟನೆಯನ್ನು ವ್ಯಾಖ್ಯಾನಿಸಲಾಯಿತು. ಗ್ರಹಣ ಸಂಭವಿಸುವ ಬಿಂದುಗಳಲ್ಲಿ ಸೂರ್ಯ ಚಂದ್ರ ಎಂಬ ದೇವತೆಗಳನ್ನು ನುಂಗುವ ರಾಹು ಮತ್ತು ಕೇತು ಎಂಬ ರಾಕ್ಷಸರನ್ನು ಕೂರಿಸಲಾಯಿತು. ಗ್ರಹಣದ ತುಸು ಹಿಂದೆಮುಂದೆ ನಡೆದ ಉತ್ಪಾತಗಳು ರಾಹು-ಕೇತುಗಳ ಪ್ರಭಾವ ಎಂದು ನಂಬಿದರು. ಈ ತೆರನಾಗಿ ಕಲ್ಪನೆಯ ಲಂಗುಲಗಾಮಿಲ್ಲದ ಲಹರಿಗಳು ಪ್ರವಹಿಸುತ್ತ ಯುಗಗಳು ಸಂದಂತೆ ಪ್ರಪಂಚಾದ್ಯಂತ ಫಲಜ್ಯೋತಿಷ ಸರ್ವವ್ಯಾಪಿಯಾಗಿ ಇದರ ಅಧಿಕೃತ ವಾಚಕನಾದ(?) ಜೋಯಿಸನಿಗೆ ಅತಿಶಯ ಪ್ರಾಮುಖ್ಯ ಲಭಿಸಿತು. ಇದು ಒಂದು ವಿಜ್ಞಾನಪ್ರಕಾರ, ಆದ್ದರಿಂದ ಸಂಪೂರ್ಣ ವಿಶ್ವಾಸಾರ್ಹ ಜನರ ಒಳಿತೇ ಇದರ ಲಕ್ಷ್ಯ, ದೇವಚಿಂತನೆಯನ್ನು ಪೂರ್ವಭಾವಿಯಾಗಿ ಅರಿತುಕೊಂಡು ವ್ಯಕ್ತಿ, ಸಮಾಜ, ರಾಷ್ಟ್ರ ಎಲ್ಲವೂ ಅನುಸರಿಸಬೇಕಾದ ಶ್ರೀರಕ್ಷೆಯಿದು ಮುಂತಾದ ಊಹೆಗಳು ಜನಿಸಿ ಜನಮನದ ಅವಿಭಾಜ್ಯ ಅಂಗಗಳೇ ಆದುವು. ವರ್ತಮಾನಯುಗದಲ್ಲಿ(೨೧ನೆಯ ಶತಮಾನ) ಗಣಕತಂತ್ರಗಳು ಮತ್ತು ಮಾಧ್ಯಮ ಪ್ರಸಾರಗಳು ಫಲಜ್ಯೋತಿಷದ ಗಣನೆ ಮತ್ತು ಊಹೆಗಳಿಗೆ ಸಹಾಯಕಗಳಾಗಿ ನಿಂತು ಮುಗ್ಧರ ಮೇಲೆ ಮೋಡಿಯ ಮುಸುಕನ್ನೇ ಎಳೆದುಬಿಟ್ಟಿವೆ! "ದುಡ್ಡು ಕೆಟ್ಟದ್ದು ನೋಡಣ್ಣಾ" ಎಂದಿದ್ದಾರೆ ಶಿಶುನಾಳ ಶರೀಫರು.

ವಸ್ತುಸ್ಥಿತಿ ಏನು? ಫಲಜ್ಯೋತಿಷವೆಂಬುದು ಬುರುಡೆಗಳ ಸರಮಾಲೆ, ಅರ್ಥರಿಕ್ತ ಕಲ್ಪನೆಗಳ ಕೊಳಕು ರೊಚ್ಚೆ, ಪಲಾಯನವಾದಿಗಳ ಮೊದಲ ಆಸರೆ ಮತ್ತು ಜಗತ್ತಿನ ದಂದುಗ ಕೋಟಲೆಗಳನ್ನು ಧೈರ್ಯವಾಗಿ ಮತ್ತು ಪ್ರಾಮಾಣಿಕವಾಗಿ ಸ್ವೀಕರಿಸಿ ಪರಿಹರಿಸುವ ತಾಕತ್ತು ಇಲ್ಲದವರ ಮಾನಸಿಕ ವಿಭ್ರಮೆ. ಏಕೆಂದರೆ-
೧. ಖಗೋಳಕ್ಕೆ ಕೇಂದ್ರವೇ ಇಲ್ಲ! ಫಲಜ್ಯೋತಿಷದ ಆಧಾರಶಿಲೆ ಭೂಕೇಂದ್ರಸಿದ್ಧಾಂತ- ಇದೊಂದು ಮಿಥ್ಯಾಚಮತ್ಕಾರ, ವಿಜ್ಞಾನ ಅಲ್ಲ. ೨. ರಾಶಿಚಕ್ರ, ಕ್ರಾಂತಿವೃತ್ತ, ಚಾಂದ್ರಕಕ್ಷೆ, ದ್ವಾದಶರಾಶಿಗಳು, ರಾಹು ಕೇತು ಮುಂತಾಗಿ ನಮಗೆ ಭಾಸವಾಗುವ ಯಾವುದಕ್ಕೂ ಭೌತ ಅಸ್ತಿತ್ವವಿಲ್ಲ. ೩. ಶನಿ,ಕುಜ,ರಾಹು ಮತ್ತು ಕೇತು ಸಾಧಾರಣವಾಗಿ ದುಷ್ಟ ಗ್ರಹಗಳು, ಅಂತೆಯೇ ರವಿ,ಚಂದ್ರ, ಬುಧ,ಗುರು, ಮತ್ತು ಶುಕ್ರ ಸಾಧಾರಣವಾಗಿ ಶಿಷ್ಟಗ್ರಹಗಳು ಎಂಬ ಜನಜನಿತ ನಂಬಿಕೆಗೆ ಯಾವುದೇ ಆಧಾರವಿಲ್ಲ. ನಿಜಕ್ಕೂ ಈ ಜೀವರಹಿತ ಕಾಯಗಳಿಗೆ ಮಾನವೀಯ ರಾಗಭಾವಗಳನ್ನು ಆರೋಪಿಸುವುದು

ಬುದ್ಧಿಶೂನ್ಯತೆಯ ಪರಾಕಾಷ್ಠೆ. ೪. ಮಹಾಗಾತ್ರ ಸೂರ್ಯನ ಸುತ್ತ ನಮ್ಮ ಭೂಮಿ ಅತಿದೂರದಲ್ಲಿ ಅನಾದಿಕಾಲದಿಂದಲೂ ಕಕ್ಷಿಸುತ್ತಿರುವ ಒಂದು ದೂಳ ಕಣ ಮಾತ್ರ. ಹಾಗಾದರೆ ಈ ಅಗಾಧತೆಯಲ್ಲಿ ಕ್ಷುದ್ರ ಬಿಡಿ ವ್ಯಕ್ತಿಗಳ ಸ್ಥಾನ, ಬೆಲೆ, ಆಯುಷ್ಯ, ಆಶೋತ್ತರಗಳು ಇತ್ಯಾದಿಗಳ ಮಹತ್ತ್ವವೇನು? ಏನೂ ಇಲ್ಲ! ೫. ಖಗೋಳವಿಜ್ಞಾನದ ಜೊತೆಗೇ ಹುಟ್ಟಿ ಇಷ್ಟು ಕಾಲ ಚಲಾವಣೆಯಲ್ಲಿ ಬಂದಿರುವ ಫಲಜ್ಯೋತಿಷದಲ್ಲಿ ಸ್ವಲ್ಪವಾದರೂ ಹುರುಳಿರಬೇಕಲ್ಲವೇ ? ಇಲ್ಲವಾಗಿದ್ದರೆ ಇಷ್ಟೊಂದು ಮಂದಿ ಇಷ್ಟೊಂದು ವರ್ಷ ಅದನ್ನು ಅನುಸರಿಸುತ್ತ ಬರುತ್ತಿದ್ದರೇ? ಆಧುನಿಕ ವಿಜ್ಞಾನದ ವಿಧಾನಗಳನ್ನು ನ್ನು ಸುಧಾರಿಸಬಹುದಲ್ಲ?

ಈ ಕೊನೆಯದಕ್ಕೆ ಉತ್ತರವಿದು. ಸದಾ ಮಾನವನ ಸಂಗಾತಿಯಾಗಿ ಬರುತ್ತಿರುವ ಎರಡು ಜಾಡ್ಯಗಳಿವೆ: ವ್ಯಭಿಚಾರ–ಇದು ದೇಹಕ್ಕೆ ಅಂಟಿರುವ ಬೇನೆ; ಫಲಜ್ಯೋತಿಷ–ಇದು ಬುದ್ಧಿಗೆ ಬಡಿದಿರುವ ಪಿಡುಗು. ಇವುಗಳ ಸಾರ್ವತ್ರಿಕತೆ ಅಥವಾ ಸಾರ್ವಕಾಲಿಕತೆ ಅಪ್ರಸ್ತುತ. ಈ ಮಾನವವಿನಾಶಕಗಳ ಆಮೂಲಾಗ್ರ ಉತ್ಪಾಟನೆಯೊಂದೇ ಸರಿಯಾದ ಹಾದಿ. ಡಿವಿಜಿಯವರ ನುಡಿ ಗಮನಿಸಬೇಕು:

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?
ವಿಹಿತಮಾಗಿಹುದದರ ಗತಿ ಸೃಷ್ಟಿವಿಧಿಯಿಂ
ಸಹಿಸಿದಲ್ಲದೆ ನಿಲ್ಲದಾವ ದಶೆ ಬಂದೊಡಂ
ಸಹನೆ ವಜ್ರದ ಕವಚ ಮಂಕುತಿಮ್ಮ

ಇದರ ಜೊತೆಗೆ ಈ ಮುಂದಿನ ಅನುಭವವಾಣಿಯನ್ನೂ ಅರ್ಥಮಾಡಿಕೊಂಡರೆ ಬದುಕು ಬಂಗಾರವಾಗದಿರದು:

ವಾಸ್ತವದ ನೈಜತೆಗೆ ಕುರುಡಾದ ಮೂರ್ಖರಿಗೆ
ಉತ್ತರಕುಮಾರ ಗೋತ್ರದ ನುಡಿಕನಸಿಗರಿಗೆ
ಸತ್ಯವನ್ನೆದುರಿಸುವ ಕೆಚ್ಚಿರದ ಹೇಡಿಗಳಿ–
ಗುತ್ತಮ ಶ್ರೀರಕ್ಷೆ ಜಾತಕವೊ ಅತ್ರಿಸೂನು

ಫಲಜ್ಯೋತಿಷ ಕುರಿತಂತೆ ಸ್ವಾಮಿ ವಿವೇಕಾನಂದರ ಆಕ್ರೋಶವಾಣಿ ಮನನೀಯವಾಗಿದೆ: 'ನಾಡಿನ ದೊರೆಯಲ್ಲಿಗೆ ಒಬ್ಬ ಜೋಯಿಸ ಹೋಗಿ, 'ಇನ್ನು ಆರು ತಿಂಗಳ ಒಳಗೆ ನೀನು ಮಡಿಯಲಿರುವೆ' ಎಂದ. ಸಹಜವಾಗಿಯೇ ಅರಸ ಭಯವಿಹ್ವಲನಾದ–ಆ ಗಳಿಗೆಯೇ ಸತ್ತುಹೋಗುವನೋ ಎಂಬ ಪ್ರಕೋಪ ಸ್ಥಿತಿ. ಈತನ ಬುದ್ಧಿವಂತ ಸಚಿವ, ಫಲಜ್ಯೋತಿಷಿಗಳೆಲ್ಲರೂ ಮುಠ್ಠಾಳರೆಂದು ಘೋಷಿಸಿದರೂ ರಾಜನಲ್ಲಿ ಸ್ವಾಸ್ಥ್ಯ ಮೂಡಲಿಲ್ಲ. ಇನ್ನೇನು ಹಾದಿ ಎಂದು ಯೋಚಿಸಿದ ಮಂತ್ರಿ ಆ ಜೋಯಿಸನನ್ನು ಅರಮನೆಗೆ ಮರುಕರೆಸಿ ಪ್ರಶ್ನಿಸಿದ, 'ನಿನ್ನ ಗಣನೆಗಳೆಲ್ಲವೂ ನಿಷ್ಕೃಷ್ಟವಾಗಿವೆಯೇ?' ಜೋಯಿಸ, 'ಹೌದು ಇಲ್ಲಿ ಯಾವ ದೋಷವೂ ನುಸುಳಿರಲು ಸಾಧ್ಯವಿಲ್ಲ.' ಆದರೂ ಮಂತ್ರಿಯ ಸಮಾಧಾನಾರ್ಥ ಆ ಗಣನೆಗಳನ್ನು ಮಗುದೊಮ್ಮೆ

ಮಾಡಿ, 'ಗಣನೆಗಳು ಸರಿಯಾಗಿವೆ.ಭವಿಷ್ಯವಾಚನ ಕರಾರುವಾಕ್ಕಾಗಿದೆ' ಎಂದು ದೃಢೀಕರಿಸಿದ. ಅರಸನ ಮುಖ ಬಿಳಿಚಿಕೊಂಡಿತು. ಜೋಯಿಸನಿಗೆ ಮಂತ್ರಿ ಸವಾಲೆಸೆದ, 'ನಿನ್ನ ಮರಣ ಎಂದು ಸಂಭವಿಸಲಿದೆ ಎಂಬುದನ್ನು ಗಣಿಸಿರುವೆಯಾ?' 'ಹೌದು, ಇನ್ನು ಹನ್ನೆರಡು ವರ್ಷಗಳಲ್ಲಿ.' ಆಕ್ಷಣ ಮಂತ್ರಿ ತನ್ನ ಕರವಾಲ ಹಿರಿದು ಜೋಯಿಸನ ತಲೆ ತರಿದು ಅರಸನಿಗೆ ಉಸುರಿದ, 'ಈ ಸುಳ್ಳನನ್ನು ನೋಡಿದೆಯಾ? ಈ ಗಳಿಗೆಯೇ ಈತ ಸತ್ತು ಉರುಳಿದ್ದಾನೆ!'

"ನಮ್ಮ ರಾಷ್ಟ್ರ ನಳನಳಿಸಬೇಕಾದರೆ ಈ ಎಲ್ಲ ಮೌಢ್ಯಗಳಿಂದ ನಾವೂ ದೂರವಾಗಿರಬೇಕು. ನಮ್ಮನ್ನು ಬಲಿಷ್ಠರಾಗಿ ಬೆಳೆಸುವಂಥವು ಮಾತ್ರ ಒಳ್ಳೆಯ ವಿಷಯಗಳು. ಇವು ನಮ್ಮ ಬಲವನ್ನು ಸಂವರ್ಧಿಸುವುವೇ ಎಂಬುದು ಮಾತ್ರ ಇವನ್ನು ಕುರಿತ ಏಕೈಕ ಪರೀಕ್ಷೆ. ವಾಸ್ತವವಾಗಿ ಒಳಿತೇ ಬದುಕು, ಕೆಡುಕೇ ಸಾವು."

ಆದ್ದರಿಂದ ಶೀರ್ಷಿಕೆಯಲ್ಲಿ ಎತ್ತಿದ ಪ್ರಶ್ನೆಗೆ ಖಚಿತ ಉತ್ತರ: ಬಾಳಿಗೆ ಫಲಜ್ಯೋತಿಷ ಖಂಡಿತ ಬೆಳಕಲ್ಲ, ತದ್ವಿರುದ್ಧವಾಗಿ ಕತ್ತಲೆ, ಬುದ್ಧ್ಯಂಧತೆ. ಮೂರ್ಖರು ಮಾತ್ರ ಇದರತ್ತ ದೌಡಾಯಿಸುತ್ತಾರೆ, ವಿವೇಕಿಗಳಾದರೋ ಇದರಿಂದ ದೂರವಿದ್ದು ಋಜು ಜೀವನ ಬಾಳುವುದರಿಂದ ಲಭಿಸುವ ಶುದ್ಧ ಮನಸ್ಸಾಕ್ಷಿಯನ್ನು ಅನುಸರಿಸುತ್ತಾರೆ; ವ್ಯಕ್ತಿಯ ಬಾಳನ್ನು ನಿರ್ದೇಶಿಸುವ ಯಾವ ಅಲೌಕಿಕ ಪ್ರಭಾವವೂ ಇಲ್ಲ. ದಾಸರು ಎಂದೋ ಹಾಡಿರುವಂತೆ, "ಸತ್ಯವಂತರ ಸಂಗವಿರಲು ತೀರ್ಥವೇತಕೆ?" ಮತ್ತು "ಮಾನವ ಜನುಮ ದೊಡ್ಡದು, ಇದ ಹಾನಿಮಾಡಿಕೊಳ್ಳಲು ಬೇಡಿ ಹುಚ್ಚಪ್ಪಗಳಿರಾ!"

ಜಿ.ಟಿ. ನಾರಾಯಣರಾವ್
೮ ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ,
ಮೈಸೂರು-೫೭೦ ೦೦೯
☎: ೨೫೪೫೩೭೫೯

ಅಮೆರಿಕಾ : ಜಗತ್ತಿನ ನಂ ೧ ಭಯೋತ್ಪಾದಕ !

-ಜಗನ್ನಾಥ. ಅ. ಸಣ್ಣೂರ

ಜಗತ್ತಿನಿಂದ ಭಯೋತ್ಪಾದನೆ ನಿರ್ಮೂಲನೆ ಮಾಡುವುದೇ ನನ್ನ ಗುರಿ ಎಂದು ಅಮೆರಿಕಾ ಸಾರಿಸಾರಿ ಹೇಳುತ್ತಿದೆ. ವಾಸ್ತವದಲ್ಲಿ ವಿಚಾರ ಮಾಡಿದಾಗ ಅಮೆರಿಕಾವೇ ಜಗತ್ತಿನ ನಂಬರ್ ಒನ್ ಭಯೋತ್ಪಾದಕ ರಾಷ್ಟ್ರ ಎಂಬ ಸತ್ಯ ಅರಿವಾಗುತ್ತದೆ.ಭಯೋತ್ಪಾದನೆಯ ನಿರ್ಮೂಲನೆ ಎಂಬ ನೆಪದಲ್ಲಿ ಅಮೆರಿಕಾ ಈಗಾಗಲೇ ಅಪಘಾನಿಸ್ತಾನ ಹಾಗೂ ಇರಾಕ್ ಮೇಲೆ ದಾಳಿ ಮಾಡಿದ್ದು ಭಯೋತ್ಪಾದನೆಯ ಮತ್ತೊಂದು ಕರಾಳ ಮುಖವಾಗಿದೆ.

ಒಸಮಾ ಬಿನ್ ಲಾಡೆನ್ ಹಾಗೂ ಸದ್ದಾಂ ಹುಸೇನ್ ಈ ಇಬ್ಬರು ಭಯೋತ್ಪಾದಕರು ಎಂದು ಅಮೆರಿಕಾ ಹೇಳಿದೆ. ಆದರೆ ಒಂದು ಕಾಲದಲ್ಲಿ ಅವರಿಬ್ಬರನ್ನೂ ಬೆಳಸಿದ್ದು ಇದೇ ಅಮೆರಿಕಾ.

ವಾಷಿಂಗ್‌ಟನ್, ಕ್ಯಾಲಿಫೋರ್ನೀಯಾ ಹಾಗೂ ದಕ್ಷಿಣ ಡಕೋಟಾಗಳಲ್ಲಿ ಶಸ್ತ್ರಾಸ್ತ್ರ, ಬಂದೂಕು, ಮದ್ದುಗುಂಡುಗಳು, ಕ್ಷಿಪಣಿಗಳು, ಅತ್ಯಾಧುನಿಕ ಫೈಟರ್ ವಿಮಾನಗಳು, ಇತ್ಯಾದಿ ಸಮೂಹನಾಶಕ ಅಸ್ತ್ರಗಳನ್ನು ತಯಾರಿಸುವ ದೊಡ್ಡ ದೊಡ್ಡ ಕಂಪನಿಗಳಿವೆ. ಇಂತಹ ಕೋಟ್ಯಂತರ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮಾರಾಟವಾಗಬೇಕಾದರೆ ಅಮೆರಿಕಾ ಅನೇಕ ದೇಶಗಳ ನಡುವೆ ಜಗಳ ಜರುಗುವಂತೆ ಮಾಡುತ್ತದೆ! ಎರಡು ದೇಶಗಳ ನಡುವೆ ಯುದ್ಧದಂತಹ ಪರಿಸ್ಥಿತಿಗೆ ತಲುಪಿದಾಗ ಆ ದೇಶಗಳಿಗೆ ತನ್ನ ಯುದ್ಧ-ಸಾಮಗ್ರಿಗಳನ್ನು ಮಾರಾಟ ಮಾಡಿ ದೊಡ್ಡ ಲಾಭಗಳಿಸುವುದೇ ಅಮೇರಿಕಾದ ಮೊದಲ ಕುಟಿಲ ನೀತಿಯಾಗಿದೆ. ಇದಕ್ಕೆ ಉದಾಹರಣೆಗಳೆಂದರೆ ಇರಾನ್-ಇರಾಕ್ ಹಾಗೂ ಉತ್ತರಕೊರಿಯಾ-ದಕ್ಷಿಣಕೊರಿಯಾ.

ಇಲ್ಲಿ ಗಮನಿಸಬೇಕಾದಂತಹ ಅತಿ ಮುಖ್ಯ ಅಂಶ ಎಂದರೆ ಇರಾಕ್ ಸಮೂಹ ನಾಶಕ ಅಸ್ತ್ರಗಳನ್ನು ತಯಾರಿಸುತ್ತದೆ ಎಂಬ ಸುಳ್ಳು ನೆಪ ಹೇಳಿ ಅಮೆರಿಕಾ ಇರಾಕ್ ಮೇಲೆ ದಾಳಿ ಮಾಡಿತು. ಆದರೆ ನಿಜ ಹೇಳಬೇಕಾದರೆ ಸಮೂಹ ನಾಶಕ ಅಸ್ತ್ರಗಳಾದ ಅಣುಬಾಂಬ್, ಹೈಡ್ರೋಜನ್ ಬಾಂಬ್, ಖಂಡಾಂತರ ಕ್ಷಿಪಣಿಗಳು, ಜಲಾಂತರಗಾಮಿಗಳು, ರಾಸಾಯನಿಕ-ಜೈವಿಕ ಅಸ್ತ್ರಗಳನ್ನು ಕಂಡುಹಿಡಿದು ಜಗತ್ತಿಗೆ ಮೊದಲು ಪರಿಚಯ ಮಾಡಿಕೊಟ್ಟದ್ದು ಇದೇ ಅಮೇರಿಕಾ!

ಸೆಪ್ಟೆಂಬರ್ ೧೧ ರ ವಿಶ್ವ ವಾಣಿಜ್ಯ ಕಟ್ಟಡಗಳ ಮೇಲಿನ ದಾಳಿಯ ಬಗ್ಗೆ ತನ್ನ ನಾಗರಿಕರು ಸತ್ತಿರುವ ಬಗ್ಗೆ ನಂಬಿಕೆ ಬರಲಿ ಎಂಬ ಉದ್ದೇಶದಿಂದ ಆ ಭೀಕರ

ಘಟನೆಯನ್ನು ಇಡೀ ಜಗತ್ತಿಗೆ ಅಮೆರಿಕಾ ನೇರ ಪ್ರಸಾರ ಮಾಡಿತು!

ಆ ಭೀಕರ ದಾಳಿಯನ್ನು ನೋಡಿದ ಜಗತ್ತಿನ ಜನರು ಅಯ್ಯೋ ಪಾಪ ಎಂದರು! ಆದರೆ ಅಮೆರಿಕಾ, ವಿಯೆಟ್ನಾಂ, ಕ್ಯೂಬಾ, ಜಪಾನ್, ಅಪಘಾನಿಸ್ಥಾನ್, ಇರಾಕ್‌ಗಳ ಮೇಲೆ ಅಂಥದೇ ಭೀಕರ ದಾಳಿ ಮಾಡಿ ಸಾವಿರಾರು ಜನರನ್ನು ಕೊಂದಿದೆ ಹಾಗೂ ಅಮಾನುಷವಾಗಿ ಹಿಂಸಿಸಿ ರಕ್ತ ಹೀರಿದೆ!

ಹಿರೋಷಿಮಾ ಹಾಗೂ ನಾಗಸಾಕಿ ಮೇಲೆ ಭೀಕರ ಅಣುಬಾಂಬ್ ಹಾಕಿದಾಗ ಲಕ್ಷಾಂತರ ಜನ ಸಾವಿಗೀಡಾದರು. ಅದರ ಘೋರ ಪರಿಣಾಮ ಇನ್ನೂ ಮುಂದುವರೆದಿದೆ. ವಾಸ್ತವದಲ್ಲಿ ವಿಚಾರ ಮಾಡಿದರೆ ಜಗತ್ತಿನ ಅತಿ ದೊಡ್ಡ ಭಯೋತ್ಪಾದಕ ಕೃತ್ಯ ಇದಾಗಿದೆ. ಇದರ ಮೂಲ ರೂವಾರಿ ಅಮೆರಿಕಾ.

ಜಮ್ಮು ಕಾಶ್ಮೀರದ ಸಮಸ್ಯೆಯಲ್ಲಿ ಪಾಕಿಸ್ತಾನದ ತಪ್ಪು ದೊಡ್ಡದಾಗಿದ್ದರೂ, ಪಾಕಿಸ್ತಾನಕ್ಕೆ ಅಮೆರಿಕಾ ಒಂದು ಮಾತೂ ತಿಳಿಹೇಳದೆ ಅದರ ಬದಲಾಗಿ ತಾಳ್ಮೆಯಿಂದ ಇರಿ ಎಂದು ಭಾರತಕ್ಕೆ ಬುದ್ಧಿವಾದ ಹೇಳುತ್ತದೆ!

ಅರಬ್ ರಾಷ್ಟ್ರಗಳಲ್ಲಿ ಇಸ್ರೇಲ್ ಎಂಬ ರಾಷ್ಟ್ರವನ್ನು ಹುಟ್ಟುಹಾಕಿ ಅದರಿಂದ ಹಲವಾರು ಪೈಶಾಚಿಕ ಭಯೋತ್ಪಾದನೆಗಳನ್ನು ಮಾಡಿಸುವಲ್ಲಿ ಅಮೆರಿಕಾ ಯಶಸ್ವಿಯಾಗಿದೆ.

ಪ್ರಿಯ ಓದುಗರೇ......ಒಸಮಾ ಬಿನ್ ಲಾಡೆನ್ ಎಲ್ಲಾ ದೇಶಗಳನ್ನು ಬಿಟ್ಟು ಕೇವಲ ಅಮೆರಿಕಾ ಮೇಲೇಕೆ ಭೀಕರ ದಾಳಿ ಮಾಡಿದ ಎಂಬ ಪ್ರಶ್ನೆ ಎದುರಿಗಿಟ್ಟುಕೊಂಡು ವಿಚಾರ ಮಾಡಿ, ಆಗ ಉತ್ತರ ತನ್ನಿಂದ ತಾನೇ ಸಿಗುತ್ತದೆ. ಅಮೆರಿಕಾದ ತಪ್ಪುಗಳು ಸಾಲುಸಾಲಾಗಿ ಕಣ್ಮುಂದೆ ಬಂದು ನಿಲ್ಲುತ್ತವೆ.

ಜಗತ್ತಿನಿಂದ ಭಯೋತ್ಪಾದನೆ ನಿರ್ಮೂಲನೆ ಎಂಬ ಅಮೆರಿಕಾದ ಮಾತು ಶುದ್ಧ ಸುಳ್ಳು ಮತ್ತು ಮೋಸದಿಂದ ಕೂಡಿದೆ. ಜಗತ್ತಿನಲ್ಲಿ ಭಯೋತ್ಪಾದನೆ ಇದ್ದಷ್ಟೂ ಅಮೆರಿಕಾಕ್ಕೆ ಲಾಭ ಮತ್ತು ಅದಕ್ಕೊಂದು ಬೆಲೆ. ವಿಶ್ವಸಂಸ್ಥೆ ಎಂಬುದು ಹಲ್ಲುಕಿತ್ತ ಹಾವಿನಂತಾಗಿದೆ. ಅಮೆರಿಕಾವನ್ನು ಎದುರು ಹಾಕಿಕೊಳ್ಳಲು ತಾಕತ್ತು ಯಾವ ರಾಷ್ಟ್ರಕ್ಕೂ ಇಲ್ಲ.

ಬೇರೆಯವರ ಮನೆಗೆ ಬೆಂಕಿ ಹಚ್ಚಿದಾಗ ಮುಂದೊಂದು ದಿನ ತನ್ನ ಮನೆಗೂ ಬೆಂಕಿ ತಗಲುವುದು ಎಂಬ ಮಾತು ಧೂರ್ತ ಅಮೆರಿಕಾಕ್ಕೆ ಬೇಗ ತಿಳಿದರೆ ಅಮೆರಿಕಕ್ಕೂ ಒಳ್ಳೆಯದು ಹಾಗೂ ವಿಶ್ವಕ್ಕೂ ಒಳ್ಳೆಯದು. ಅಮೆರಿಕಾದ ಕಪಟ ನೀತಿಗಳಿಗೆ ಧಿಕ್ಕಾರವಿರಲಿ.

***

ಅಪಾಯದಲ್ಲಿ ಭಾರತದ ಕೃಷಿರಂಗ

ಅಮೆರಿಕಾ ಅಥವಾ ಯುರೋಪುಗಳಿಂದ ಯಾವುದೇ ಮಹನೀಯರು ಬರಲಿ "ನಿಮ್ಮ ಕೃಷಿಗಿರುವ ಸುರಕ್ಷಾನೀತಿಗಳನ್ನೆಲ್ಲ ಕಿತ್ತುಹಾಕಿ" ಎಂಬುದೊಂದೇ ಉಪದೇಶ. ಯಾವೊಂದು ರಕ್ಷಣಾಕವಚವಿಲ್ಲದೆ ಬೆತ್ತಲೆಯಾಗಿ ಬಟಾಬಯಲಲ್ಲಿ ನಿಂತಿದ್ದಾನೆ ನಮ್ಮ ರೈತ. ಕಳಚಲು ಇನ್ನು ಉಳಿದಿರುವುದಾದರೂ ಏನು?

ಅಮೆರಿಕಾದ ರಾಜ್ಯಕಾರ್ಯದರ್ಶಿ ಕಾಲಿನ್ ಪಾವೆಲ್‌ರು ಹಿಂದಿನಬಾರಿ ಭಾರತಕ್ಕೆ ಬಂದಿದ್ದಾಗ ಭಾರತಕ್ಕೆ ಕೊಟ್ಟಿದ್ದ ಸಾಫ್ಟ್‌ವೇರ್ ಕಾಂಟ್ರ್ಯಾಕ್ಟ್‌ಗಳನ್ನೆಲ್ಲ ಅಮೆರಿಕಾ ಹಿಂತೆಗೆದುಕೊಳ್ಳುತ್ತಿರುವುದೇಕೆ ಎಂದು ಪ್ರಶ್ನಿಸಲಾಗಿತ್ತು. ಆ ಪ್ರಶ್ನೆಗೆ ಪಾವೆಲ್ ರ ಉತ್ತರ ತೀರಾ ಹಾರಿಕೆಯದಾಗಿತ್ತು. ಭಾರತೀಯರಿಗೆ ಜಾಬ್ ಕಾಂಟ್ರ್ಯಾಕ್ಟ್ ಕೊಟ್ಟಿದ್ದಕ್ಕೆ ನಮ್ಮಲ್ಲಿ ಬಹಳಷ್ಟು ನಿರುದ್ಯೋಗ ಸೃಷ್ಟಿಯಾಗುತ್ತಿದೆ. ಅದಕ್ಕೆ ನೀವು ನಿಮ್ಮ ಕೃಷಿ ನೀತಿಯನ್ನು ಇನ್ನೂ ಸಡಿಲಗೊಳಿಸಿ ನಮ್ಮ ರೈತರಿಗೆ ಬದುಕಲು ಅವಕಾಶ ಕೊಡಬೇಕು! ಪ್ರಶ್ನೆ ಏನೋ, ಉತ್ತರ ಯಾವುದೋ! ಅದಕ್ಕಿಂತ ಒಂದು ತಿಂಗಳ ಹಿಂದೆ ಅಮೆರಿಕಾದ ವ್ಯಾಪಾರ ಪ್ರತಿನಿಧಿ ಝೋಲಿಕ್ ಭಾರತಕ್ಕೆ ಬಂದಿದ್ದಾಗಲೂ ನಿಮ್ಮ ಕೃಷಿ ಆಮದು ನೀತಿಯನ್ನು ಇನ್ನು ಸಡಿಲಗೊಳಿಸಿ ಎಂದಿದ್ದಾರೆ. ಅದಕ್ಕೆ ಮೊದಲು ಯುರೋಪಿಯನ್ ಕಮಿಷನ್ನಿನ ಪಾಸ್ಕಾಲ್ ಲ್ಯಾಮಿ ಭಾರತಕ್ಕೆ ಬಂದಿದ್ದಾಗಲೂ ಇದೇ ಮಾತು: ಕೃಷಿ ವಸ್ತುಗಳ ಮೇಲಿನ ಸುಂಕ ಕಡಿಮೆ ಮಾಡಿ ಎಂದು.

ಯಾರೂ ಬಂದರೂ ಅದೇ ಮಾತು. ಎಲ್ಲರ ಕಣ್ಣು ಅದರ ಮೇಲೆಯೇ! ಏಕೆಂದರೆ ಭಾರತೀಯ ಕೃಷಿಕನ ಮೈಮೇಲೆ ಈಗ ಇರುವ ಬಟ್ಟೆ ಅದೊಂದೆ. ಕೃಷಿ ವಸ್ತುಗಳ ಆಮದಿನ ಮೇಲಿನ ಸುಂಕ! ಇನ್ನೆಲ್ಲಾ ರಕ್ಷಣಾ ಕವಚಗಳನ್ನೂ ಒಂದೊಂದಾಗಿ ಬಿಚ್ಚಿಡಲಾಗಿದೆ. ಈ ವರೆಗೆ ಎಲ್ಲಾ ಆಮದುಗಳ ಮೇಲಿನ ಸುಂಕಗಳನ್ನೂ ಭಾರತವು ತೆಗೆದುಹಾಕುವಂತೆ ೨೦೦೧ ರೊಳಗೆ (ಅಮೆರಿಕಾ ಮತ್ತಿತರ ದೇಶಗಳ ಆಣತಿಯಂತೆ) ಮಾಡಲಾಗಿದೆ. ಈಗ ಕಸ್ಟಂ ಡ್ಯೂಟಿ–ಈ ದೇಶದ ಬಾಗಿಲಿಗೆ ಬಂದಾಗ ಕೊಡಬೇಕಾದ ಸುಂಕವೊಂದೇ ನಮ್ಮ ಕೈಗಾರಿಕೆ ಮತ್ತು ಕೃಷಿಯನ್ನು ಉಳಿಸಿಕೊಳ್ಳಲು ಉಳಿದಿರುವುದು. ಅದನ್ನೂ ತೆಗೆದವೆಂದರೆ ವಿದೇಶಿ ಮೂಲಗಳು, ವಿದೇಶಿ ಧಾನ್ಯಗಳು ತಮ್ಮ ಪ್ರಚಾರ ಚಾತುರ್ಯದಿಂದ, ತಮ್ಮ ಮಾರುಕಟ್ಟೆ ಮೋಡಿಗಳಿಂದ ನಮ್ಮ ಮಾರುಕಟ್ಟೆಯಲ್ಲಿ ತುಂಬಿ ತುಳುಕಿಯಾವು ನಮ್ಮ ವಸ್ತುಗಳನ್ನು ಮೂಲೆಗೊತ್ತಿ!

ತಮ್ಮ ಮಾತನ್ನೇ ಸಾಧಿಸಿಕೊಳ್ಳಲು, ತಮ್ಮ ಲಾಭವೊಂದನ್ನೇ ನೋಡಿಕೊಳ್ಳುವುದರಲ್ಲಿ ಈ ಮುಂದುವರೆದ ದೇಶಗಳು ಯಾವ ಮಟ್ಟಕ್ಕೆ ಹೋಗಬಹುದೆನ್ನಲಿಕ್ಕೆ ಇದೊಂದು ಉದಾಹರಣೆ ಮಾತ್ರ.

ಭಾರತದಂತ ಕೃಷಿಪ್ರಧಾನ ದೇಶಕ್ಕೆ ಇರುವ ಒಂದೇ ರಕ್ಷಾಕವಚವನ್ನು ಕಳಚಲು ಹೇಳುವ ಅಮೆರಿಕಾ ಮತ್ತು ಇನ್ನಿತರ ದೇಶಗಳು ತಾವು ಮಾತ್ರ ಕಲ್ಪನಾತಿತವಾದ ಸಬ್ಸಿಡಿಗಳನ್ನು ಮತ್ತೂ ಕೊಡುತ್ತಲೇ ಹೊರಟಿವೆ.

ಕೈಗಾರಿಕೆಯೇ ಪ್ರಧಾನವಾಗಿರುವ ಆ ದೇಶಗಳಲ್ಲಿ ಕೃಷಿ ಅತಿ ಚಿಕ್ಕ ರಂಗ. ಕೃಷಿ ಅವಲಂಬಿತರ ಸಂಖ್ಯೆಯೂ ಅತ್ಯಲ್ಪ, ಅವರೂ ಎಲ್ಲಿ ಕೃಷಿಯನ್ನು ಬಿಟ್ಟೇ ಹೋದಾರೋ ಎಂದು ಅಮೆರಿಕೆಯು ಅವರನ್ನು ಅಲ್ಲಿ ಇಡಲಿಕ್ಕಾಗಿ ಮಾತ್ರ ಸಬ್ಸಿಡಿ ಕೊಡುತ್ತಿದೆ.ಕೊಟ್ಟು ಸಲಹುತ್ತಿದೆ. ಆದರೆ ಆಫ್ರಿಕಾ, ಏಷಿಯಾಗಳಲ್ಲಿ ಕೃಷಿಯು ಜೀವನಾಧಾರ. ಇದನ್ನು ಬಿಟ್ಟರೆ ಇನ್ನೊಂದಿಲ್ಲ. ಕೈಗಾರಿಕೆ ಬೆಳೆಯಲು ಬೇಕಾದಷ್ಟು ಬಂಡವಾಳ, ಸಂಪನ್ಮೂಲ ಸಾಕಷ್ಟಿಲ್ಲದಿರುವಾಗ ಅತಿಹೆಚ್ಚು ಜನರನ್ನು ಪೋಷಿಸುತ್ತಿರುವುದು ಕೃಷಿ. ಹೀಗಿರುವಾಗ ಜಾಗತಿಕ ವ್ಯಾಪಾರನೀತಿಗಳು ವಿಶ್ವವ್ಯಾಪಾರ ಸಂಘಟನೆಯ ನಿಯಮಗಳು ಮುಂದುವರೆದ ದೇಶಗಳಿಗೆ ಇನ್ನಷ್ಟು ರಿಯಾಯಿತಿ ತೋರಿಸುತ್ತಿರುವುದು ಅಕ್ಷಮ್ಯ.

ಈಗ ಅಮೆರಿಕಾದಲ್ಲೇ ನೋಡಿ, ಒಂದು ಉತ್ಪನ್ನದ ಬೆಲೆಯ ೪೦% ರಷ್ಟನ್ನು ಸರಕಾರವೂ ಸಬ್ಸಿಡಿಯಾಗಿ ನೀಡುತ್ತದೆ. ಪ್ರತಿವರ್ಷ ಅಮೆರಿಕಾದಲ್ಲಿ ಕೃಷಿ ಸಹಾಯಧನದ ಮೊತ್ತ ವರ್ಷಕ್ಕೆ ೩೦೦ ಬಿಲಿಯನ್ ಡಾಲರ್‌ನ್ನು ಮೀರುತ್ತದೆ. ಯಾವುದೇ ದೇಶವು ಕೃಷಿಯಲ್ಲಿ ಕೊಡುವ ಸಹಾಯಧನವನ್ನು ಎರಡು ಭಾಗಗಳಾಗಿ ಮಾಡುತ್ತದೆ. ಒಂದು, ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡುತ್ತ ಹೋಗಬೇಕಾದ ಸಬ್ಸಿಡಿ, ಮತ್ತೊಂದು ಮುಂದುವರೆಸಿಕೊಂಡು ಹೋಗಬಹುದಾದ ಧನಸಹಾಯ. ಮುಂದುವರೆದ ದೇಶಗಳಲ್ಲಿ ಎರಡನೇ ಗುಂಪಿನಲ್ಲಿಯೇ ತಮ್ಮ ಎಲ್ಲಾ ಸಬ್ಸಿಡಿಗಳನ್ನು ಹಾಕಲಾಗಿದೆ. ಮೊದಲನೇ ಗುಂಪಿನಲ್ಲಿ ಹೇಳಿಕೊಳ್ಳುವಂತ ಸಬ್ಸಿಡಿ ಇಲ್ಲವೇ ಇಲ್ಲ. ಹೆಚ್ಚಿನ ಮೊತ್ತದ್ದೂ ಇಲ್ಲ, ಹೀಗಾಗಿ ಡಬ್ಲ್ಯು. ಟಿ. ಓ. ಹೇಳಿಕೆಯಂತೆ ಮೊದಲಗುಂಪಿನ ಸಬ್ಸಿಡಿಗಳನ್ನು ಆರಾಮವಾಗಿ ಕಡಿಮೆ ಮಾಡುತ್ತ ಬಂದರು, ಅತ್ತ ಎರಡನೇ ಗುಂಪಿನಲ್ಲಿ ಹೆಚ್ಚೆಚ್ಚು ಸಬ್ಸಿಡಿಗಳನ್ನು ಸೇರಿಸುತ್ತ ಬಂದರು. ಒಂದು ಅಧ್ಯಯನದ ಪ್ರಕಾರ ಮುಂದುವರೆದ ದೇಶಗಳಲ್ಲಿ ಸಬ್ಸಿಡಿಯು ೧೯೮೬-೮೮ ರಿಂದ ೧೯೯೯ ರವರೆಗೆ ೨೭೬ಬಿಲಿಯನ್ ನಿಂದ ೩೨೬ಬಿಲಿಯನ್ ಡಾಲರಿಗೇರಿತು.

ಹಿಂದುಳಿದ ದೇಶಗಳಲ್ಲಿ ಸಬ್ಸಿಡಿ ಕೊಡುವ ಪದ್ಧತಿಯೇ ಇರಲಿಲ್ಲ. ಜೀವನವೇ ಅದಾಗಿದ್ದರಿಂದ ಅದಕ್ಕೆ ಧನ ಸಹಾಯವಿಟ್ಟು ಜನರು ಅದಕ್ಕೆ ಅಂಟಿಕೊಂಡಿರುವಂತೆ ಮಾಡುವ ಪರಿಸ್ಥಿತಿ ಇಲ್ಲಿ ಇಲ್ಲ. ಜೊತೆಗೆ ಕೋಟಿಗಟ್ಟಲೆ ರೈತರಿಗೆ ಹೆಚ್ಚೆಚ್ಚು ಸಹಾಯಧನ ಕೊಡಲು ಹಣ ಸಂಪನ್ಮೂಲವಾದರೂ ಬೇಕಲ್ಲ?

ವ್ಯಾಪಾರಕ್ಕೆ ಧಕ್ಕೆ ತರುವಂಥ ವಸ್ತುಗಳಿಗೆ ಅಥವಾ ವ್ಯವಸಾಯಕ್ಕೆ ಸಹಾಯಧನ ಕಡಿಮೆ ಮಾಡಬೇಕೆಂದರು.ಆದರೆ ನೀವು ಯಾವ ಗುಂಪಿನ ಸಹಾಯಧನವನ್ನೇ ಕೊಡಿ. ಅದು ಆ ವ್ಯವಸಾಯದ ಅವಲಂಬಿತರನ್ನು ಗಟ್ಟಿ ಮಾಡುತ್ತದೆ. ಮುಂದುವರೆದ ದೇಶಗಳ ರೈತರು ಈ ರೀತಿಯಾಗಿ ಗಟ್ಟಿಯಾದರೆ ಅವರು ಯಾವ ಕೃಷಿಯನ್ನೇ ಮಾಡಲಿ ಬೆಲೆ ನಿರ್ಧಾರಮಾಡುವ ಸ್ಥಾನದಲ್ಲಿರುತ್ತಾರೆ. ಮಾರುಕಟ್ಟೆಯ ಏರಿಳಿತದ ಬಿಸಿ ಅವರಿಗೆ ತಟ್ಟದು. ಬೆಲೆಕುಸಿತಕ್ಕೆ ಹೆದರಿ ನೇಣಿಗೆ ಗೋಣು ಕೊಡಬೇಕಾಗಿಲ್ಲ. ಆದರೆ ಇತ್ತ ಕೃಷಿಯೇ ಜೀವನವಾಗಿರುವ ನಮ್ಮ ರೈತರಿಗೆ ಸಹಾಯಧನದ ಬೆಂಬಲ ಇರದಿದ್ದಾಗ ಅವರು ಮಾರುಕಟ್ಟೆಯ ಏರಿಳಿತಕ್ಕೆ ಕುಸಿಯುತ್ತಾರೆ. ಅವರು ಬೆಲೆ ನಿರ್ಧರಿಸುವ ಸ್ಥಾನದಲ್ಲಿರುವುದಿಲ್ಲ.ಇದು ವ್ಯಪಾರಕ್ಕೆ ಧಕ್ಕೆ ಆದಂತೆಯೇ ಅಲ್ಲವೇ?

ಸರಕಾರವು ಸಹಾಯಧನ ಕೊಡುವುದರಿಂದ ಆ ರೈತರು ಉತ್ಪಾದನೆಗೆ ಹಾಕುವ ಬಂಡವಾಳಕ್ಕಿಂತ ಕಡಿಮೆ ಬೆಲೆಗೂ ಮಾರಬಲ್ಲವರಾಗುತ್ತಾರೆ. ಆ್ಯಕ್ಷನ್ ಏಡ್ ಮಾಡಿದ ಒಂದು ಅಧ್ಯಯನದ ಪ್ರಕಾರ ಇಂಗ್ಲೆಡಿನಲ್ಲಿ ಗೋಧಿಯನ್ನು ಬೆಳೆಯಲು ಟನ್ನಿಗೆ ೧೧೩ ಪೌಂಡ್ ಖರ್ಚಾಗಿದ್ದರೂ ಅದು ೭೦ ಪೌಂಡಿಗೆ ಗೋಧಿಯನ್ನು ಮಾರುತ್ತದೆ. ಹೀಗೆ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆ ಬಹಳ ತಗ್ಗಿದಾಗ ಹಾಗೆ ಮಾಡಲಾಗದ ಆ ಬೆಲೆಗೆ ತನ್ನ ಉತ್ಪನ್ನಗಳನ್ನು ಕೊಡಲೇಬೇಕಾದಾಗ ನಮ್ಮ ರೈತರು ಸೋಲುತ್ತಾರೆ.

ಯುರೋಪ್ರ ತನ್ನ ರೈತರಿಗೆ ರಫ್ತು ಬೆಂಬಲಬೆಲೆಯನ್ನೂ ಕೊಡುತ್ತದೆ. ವರ್ಷದಿಂದ ವರ್ಷಕ್ಕೆ ಇದನ್ನು ಕಡಿಮೆ ಮಾಡುತ್ತಿದ್ದರೂ ಇನ್ನೂ ವರ್ಷಕ್ಕದು ೭ಬಿಲಿಯನ್ ಡಾಲರ್ ನಷ್ಟಾಗುತ್ತದೆ. ಅಮೆರಿಕಾ ರಫ್ತು ಸಬ್ಸಿಡಿ ತೆಗೆದುಹಾಕಿದೆ ನಿಜ, ಅದರೆ ಅದರ ಬದಲಿಗೆ ರಫ್ತಿಗಾಗಿ ಸಾಲ ಕೊಡುತ್ತದೆ. ಡಬ್ಲ್ಯು. ಟಿ. ಓ. ಇದರ ಬಗ್ಗೆ ಏನೂ ಮಾತಾಡುವಂತಿಲ್ಲ. ರೈತರಿಗೆ ಎಲ್ಲಾ ರೀತಿಯ ಸಹಾಯಧನ ಕೊಟ್ಟೂ ಮತ್ತೆ ರಫ್ತು ಸಬ್ಸಿಡಿ ಕೊಡುವುದು ಏನೇನೂ ನ್ಯಾಯವಲ್ಲದ ತೀರ್ಮಾನ. ತಮ್ಮ ಈ ಸಹಾಯಧನಗಳು ಬಡದೇಶದ ರೈತರ ಕತ್ತನ್ನೇ ಹಿಚುಕುತ್ತದೆ ಎಂದು ಗೊತ್ತಿದ್ದರೂ ಧನಸಹಾಯ ಮುಂದುವರೆಸಿರುವುದು ಮಾತ್ರ ಘೋರ ಅನ್ಯಾಯ.

ಇವೇ ದೇಶಗಳು ನಮ್ಮ ಸರ್ಕಾರಗಳಿಗೆ ಷರತ್ತು ಹಾಕುತ್ತವೆ. “ಇರುವ ಒಂದೊಂದು ಸಹಾಯ ಹಸ್ತವನ್ನು ತೆಗೆಯಿರಿ” ಎಂದು. ಅಷ್ಟೇ ಸಾಲದೆಂದು ಆಮದು ಸುಂಕವನ್ನೂ ತೆಗೆಯಿರಿ ಎಂದು. ರಫ್ತು ಸಬ್ಸಿಡಿಯಿಂದ ಆಮದು ಸುಂಕ ತೆಗೆಯುವುದರಿಂದ ಆ ಹೆದ್ದಾರಿಯನ್ನು ಇನ್ನಷ್ಟು ನುಣುಪು, ಇಳಿಜಾರು ಮಾಡಿದಂತಾಗುತ್ತದೆ.

ಇಳಿಜಾರಾದ ನುಣುಪು ಹೆದ್ದಾರಿಯಲ್ಲಿ ವೇಗವಾಗಿ ಬರುವ ಆ ಧಾನ್ಯದ ಟ್ರಕ್ಕುಗಳು ನಮ್ಮ ಕೃಷಿಕನ ಪುಟ್ಟ ಎತ್ತಿನಗಾಡಿಯನ್ನು ಎತ್ತಿ ಒಗೆಯುವುದರಲ್ಲೇನಿದೆ ಆಶ್ಚರ್ಯ? ಇವರಿಗೆ ಮೊದಲು ಸರಕಾರ ಸಹಾಯಧನವನ್ನೂ ಕೊಟ್ಟಿಲ್ಲ. ಡಬ್ಲ್ಯು. ಟಿ. ಓ. ಬಂದಮೇಲಂತೂ ಕೊಡಬಾರದೆಂದೇ ನಿಯಮ ಬಂದು ಬಿಟ್ಟಿತು. ಅವಕಾಶವಿದ್ದರೂ ಕೊಡುತ್ತಿರಲಿಲ್ಲವೆಂಬುದು ಬೇರೆಯ ವಿಚಾರ.

ಅಕಸ್ಮಾತ್ ಹೊರಗಿನಿಂದ ಧಾನ್ಯ ಬಹಳ ಆಮದಾಗಿಬಿಟ್ಟರೆ ಮತ್ತು ಆ ಕಾರಣದಿಂದ ಬೆಲೆಗಳು ಇಳಿಯಲಾರಂಭಿಸಿದರೆ ಪರಿಹಾರವಾಗಿ ಮುಂದುವರಿದ ದೇಶಗಳಲ್ಲಿ ರೈತರಿಗೆ ವಿಶೇಷ ಸಂರಕ್ಷಣಾ ಸಂಹಿತೆಯೊಂದು ಇದೆ. ವಿಶ್ವ ವಾಣಿಜ್ಯ ಸಂಘವು (ಡಬ್ಲು. ಟಿ. ಓ.) ಕೆಲವೇ ಶ್ರೀಮಂತ, ಮುಂದುವರೆದ ದೇಶಗಳಿಗೆ ಮಾತ್ರ ಈ ಸಂಹಿತೆಯನ್ನು ಉಪಯೋಗಿಸಲು ಅವಕಾಶ ಕೊಟ್ಟಿದೆ. ಭಾರತಕ್ಕೆಲ್ಲ ಅವಕಾಶ ಇಲ್ಲ. ಈ ಕ್ರಮವು ಕೂಡ ಅಮೆರಿಕಾ ರೈತ ಮತ್ತು ನಮ್ಮ ರೈತನ ಮಧ್ಯೆ ಅಸಮಾನ ಸ್ಪರ್ಧೆಯೇರಲು ಕಾರಣವಾಗುತ್ತದೆ. ಈಗಾಗಲೇ ಸಾಕಷ್ಟು ರಕ್ಷಣಾ ಕವಚಗಳನ್ನ ಹಾಕಿಕೊಂಡವರಿಗೆ ಇದು ಇನ್ನೊಂದು ಕವಚ.

ಮುಂದುವರೆದ ದೇಶಗಳಲ್ಲೇ ಇರುವ ಆಕ್ಸ್ ಫ್ಯಾಮ್. ಎಫ್.ಎ.ಓ. ಆಕ್ಷನ್ ಏಡ್, ಇಫ್ಪ್ರಿ ಮುಂತಾದ ಸಂಘಟನೆಗಳು 'ಮುಂದುವರೆದ ದೇಶಗಳ ನೀತಿಗಳು ಮತ್ತು ಬಡದೇಶಗಳ ಮೇಲೆ ಅದರಿಂದಾಗುವ ಪರಿಣಾಮಗಳ ಕುರಿತು ವಿವರವಾದ ಅಧ್ಯಯನವೊಂದನ್ನು ಮಾಡಿವೆ. ವಿಶ್ವಸಂಸ್ಥೆಯ ಮಾನವ ಹಕ್ಕು ಕಮಿಶನ್ ' ರೈಟ್ ಟು ಫುಡ್' ಮೇಲೆ ೨೦೦೪ರ ಮಾರ್ಚ್‌ನಲ್ಲಿ ವರದಿಯೊಂದನ್ನು ಹೊರ ತಂದಿದೆ. ಮುಂದುವರೆದ ದೇಶಗಳ ಸಬ್ಸಿಡಿಯು ಹಿಂದುಳಿದ ದೇಶಗಳ ರೈತರನ್ನು ನಿರ್ವಸಿತರನ್ನಾಗಿ ಮಾಡುತ್ತದೆ ಎನ್ನುತ್ತದೆ ಈ ವರದಿ.

ಇಂಥ ಒಂದು ಅಸಮಾನತೆ, ಮೇಲು ಕೀಳು ಭಾವದ ಹಿನ್ನೆಲೆಯಲ್ಲೂ ಶ್ರೀಮಂತ ದೇಶಗಳಿಂದ ಮತ್ತದೇ ಮಾತು, ಮತ್ತದೇ ಬೇಡಿಕೆ, ನಮ್ಮ ಸರಕಾರಗಳ ಮೇಲೆ ಒತ್ತಡ, ಷರತ್ತುಗಳು. ಹಿಂದುಳಿದ ದೇಶಗಳು ಒಂದಾಗಿ ಇದನ್ನು ವಿರೋಧಿಸದೇ ಬೇರೆ ದಾರಿಯೇ ಇಲ್ಲ.

ಅಮೆರಿಕಾ ಮತ್ತು ಯೂರೊಪಿನ ಒಕ್ಕೂಟಗಳ ಮಧ್ಯೆ 'ಪರಸ್ಪರ ಕ್ಷಮಿಸುವ ಒಪ್ಪಂದ ವಿದೆಯೇನೊ ಎಂಬಂಥ ಧೋರಣೆ. ಇದು ಮಾಡಿದ್ದಕ್ಕೆಲ್ಲ ಅದರ 'ಸಮ್ಮತಿ, ಅದು ಮಾಡಿದ್ದಕ್ಕೆಲ್ಲ ಇದರ ಒಪ್ಪಿಗೆ' ಪ್ರಶ್ನೆಯೂ ಇಲ್ಲ, ಭಿನ್ನಾಬಿಪ್ರಾಯವೂ ಇಲ್ಲ, ವಾಗ್ವಾದವೂ ಇಲ್ಲ. ಇಬ್ಬರಿಂದಲೂ ಬಡದೇಶಗಳ ಮೇಲೆ ಪ್ರಹಾರ. ಈಗ ಬ್ರೆಜಿಲ್, ಅರ್ಜೆಂಟಿನಾ, ಭಾರತ, ಚೀನಾ, ಇಂಡೋನೇಶಿಯಾ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳು ಸೇರಿ ಅವರ ಜಿ–೮ ನಂತೆಯೇ ಜಿ–೨೦ ಎಂಬ ಕೂಟವನ್ನು ರಚಿಸಿಕೊಂಡಿವೆ. ಎಲ್ಲವೂ ಒಂದಾಗಿ ನಿಮ್ಮ ಸಬ್ಸಿಡಿಯನ್ನು ಕಡಿಮೆ ಮಾಡಿ ಎಂದು ಮುಂದುವರೆದ ದೇಶಗಳಿಗೆ ಕೇಳುತ್ತಿವೆ. ಇನ್ನು ೩೭ ದೇಶಗಳ ಬೇರೆಯೇ ಗುಂಪು ರಚನೆಯಾಗಿದ್ದು ಬಡದೇಶಗಳ ಕೃಷಿವಿಷಯವನ್ನೇ ಬೇರೆಯಾಗಿ ನೋಡಬೇಕು ಎಂದು ಕೇಳುತ್ತಿವೆ. ಆಹಾರ ಉತ್ಪಾದನೆ, ಚಿಕ್ಕ ಹಿಡುವಳಿದಾರರು ಮತ್ತು ಹಳ್ಳಿಯ ಆರ್ಥಿಕತೆಗಳ ಬೆನ್ನೆಲುಬಾದ ಕೃಷಿಯ ನೀತಿಸಂಹಿತೆಯನ್ನು ಮಾಡಿಕೊಳ್ಳಲು ಆಯಾ ದೇಶಕ್ಕೆ ಅದರದೇ ಸ್ವಾತಂತ್ರ್ಯ ಇರಬೇಕೆಂದು ಪ್ರತಿಪಾದಿಸುತ್ತಿವೆ.ಮಾತುಕತೆಗಳು ನಡೆದಿದ್ದರೂ ಇನ್ನೂವರೆಗೆ ಶ್ರೀಮಂತ ದೇಶಗಳು ಯಾವುದೇ ರೀತಿಯ ಒಲವನ್ನು ತೋರಿಸಿಲ್ಲ.

***

ರಾಜಕಾರಣ ಮತ್ತು ಅಪರಾಧೀಕರಣ

-ಮ.ಶ್ರೀ. ಮುರುಳಿಕೃಷ್ಣ.

ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ಜನರು ' ನಾಮುಂದು ತಾ ಮುಂದು ಎಂದು ಸಾರ್ವಜನಿಕ ಜೀವನದಲ್ಲಿ ಪಾಲ್ಗೊಳ್ಳಲು ಮುಂದಾಗುತ್ತಿದ್ದರು. ತ್ಯಾಗ, ಬಲಿದಾನಗಳನ್ನು ಮಾಡಲು ಸಿದ್ಧರಿರುತ್ತಿದ್ದರು. ಅನೇಕರು ಯಾವ ಬಗೆಯ ಫಲಾಪೇಕ್ಷೆಯನ್ನೂ ಬಯಸದೆ ಆಸ್ತಿಪಾಸ್ತಿಗಳನ್ನು ಕಳೆದುಕೊಂಡರು. ಶ್ರೀಮಂತಿಕೆಯಲ್ಲಿ ಮೆರೆಯಬಹುದಾದ ಸಂದರ್ಭಗಳಿದ್ದರೂ ಅವುಗಳನ್ನು ಬದಿಗೊತ್ತಿ ಸಮಷ್ಟಿಯ ಹಿತಕ್ಕಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು.

ಸ್ವಾತಂತ್ರ್ಯ ಗಳಿಸಿದ ಒಂದೆರಡು ದಶಕಗಳವರೆಗೆ ಮೇಲೆ ತಿಳಿಸಿರುವಂಥ ಜನರು ಸಾರ್ವಜನಿಕ ಜೀವನದಲ್ಲಿ ಕಂಡು ಬರುತ್ತಿದ್ದರು. ಜನಪ್ರತಿನಿಧಿಗಳಾಗಿ ಸಂಸತ್ತು, ವಿಧಾನಸಭೆಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದರು. ಬರಬರುತ್ತಾ ಜನಪ್ರತಿನಿಧಿಗಳಾಗುವವರಲ್ಲಿ ಮೌಲ್ಯಗಳ ಕುಸಿತ ಕಾಣತೊಡಗಿತು. ಇಡೀ ರಾಷ್ಟ್ರದಲ್ಲಿ ರಾಜಕಾರಣ ರಾಡಿಯಾಗ ತೊಡಗಿತು. ರಾಜಕಾರಣ ಮಾಡುವುದು ಹಣಗಳಿಸುವ ಒಂದು ದಂಧೆ ಎಂದು ಸಾಮಾನ್ಯ ಜನರಲ್ಲಿ ಭಾವನೆ ಮೂಡತೊಡಗಿತು.

ಪ್ರಸ್ತುತ ಪರಿಸ್ಥಿತಿಯಂತೂ ತೀರ ಕೆಟ್ಟದಾಗಿದೆ. ಸಂದೇಹಪೂರಿತ ಹಿನ್ನೆಲೆಯುಳ್ಳ ಅನೇಕರು ರಾಜಕೀಯಕ್ಕೆ ಧುಮುಕುತ್ತಿದ್ದಾರೆ. ಜನಪ್ರತಿನಿಧಿಗಳ ವೇಷ ತೊಟ್ಟು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಎಂ.ಪಿ, ಎಂ.ಎಲ್.ಎ. ಹಾಗೂ ಎಂ.ಎಲ್.ಸಿಗಳಾಗುವ ಅವರಿಗೆ ಗೌರವ ಸಿಗುತ್ತದೆ. ತಮ್ಮ ಸ್ಥಾನಮಾನಗಳನ್ನು ಬಳಸಿಕೊಂಡು ಕುಕೃತ್ಯಗಳನ್ನು ಮುಚ್ಚಿಹಾಕುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಚುನಾವಣ ರಂಗದಲ್ಲಿ ತೋಳ್ಬಲ ಹಾಗೂ ಹಣ ರಾರಾಜಿಸುತ್ತಿವೆ. ಇರುವವರದ್ದೇ ಮೇಲ್ಗೈ ಇಲ್ಲಿ. ಅಂಚಿನಲ್ಲಿರುವವರ ದನಿಗಳು ಇನ್ನಷ್ಟು ಅಂಚಿಗೆ ತಳ್ಳಲ್ಪಡುತ್ತಿವೆ. ಭಿನ್ನಮತದ ದನಿಗಳನ್ನು ಹತ್ತಿಕ್ಕಲಾಗುತ್ತಿದೆ.

ಒಂದು ಸರ್ವೇಕ್ಷಣೆಯ ಪ್ರಕಾರ ಹಿಂದಿನ ಲೋಕಸಭೆಯಲ್ಲಿ ಸುಮಾರು ೪೦ ಅಪರಾಧ ಹಿನ್ನೆಲೆಯುಳ್ಳ ಸಂಸದರಿದ್ದರು. ವಿಧಾನಸಭೆಗಳಲ್ಲಿ ಅಂಥವರ ಸಂಖ್ಯೆ ಸುಮಾರು ೭೦೦! ಇದು ನಿಜಕ್ಕೂ

ಧೃತಿಗೆಡಿಸುವ ವಿಚಾರ. ರಾಜಕೀಯ ಪಕ್ಷಗಳು ಈ ಋಣಾತ್ಮಕ ಬೆಳವಣಿಗೆಯ ಬಗ್ಗೆ ಅವಜ್ಞೆ ತೋರಿಸಿವೆ. ಕಳಂಕಿತ ವ್ಯಕ್ತಿಗಳಿಗೆ ಚುನಾವಣೆಗಳಲ್ಲಿ ಏಕೆ ಟಿಕೇಟುಗಳನ್ನು ನೀಡುವಿರಿ ಎಂದು ಪ್ರಶ್ನಿಸಿದಾಗ ನ್ಯಾಯಾಲಯಗಳಲ್ಲಿ ಅಂತಹವರ ಅಪರಾಧಗಳು ಸಾಬೀತಾಗುವವರೆಗೆ ಅವರು ನಿರ್ದೋಷಿಗಳು ಎಂಬ ಹಾರಿಕೆಯ ಉತ್ತರ ನೀಡುತ್ತಾರೆ ರಾಜಕೀಯ ಧುರೀಣರು.

ಕಳೆದ ೧೦–೧೫ ವರ್ಷಗಳಿಂದ ನಮ್ಮ ರಾಷ್ಟ್ರದಲ್ಲಿ ಎಲ್ಲಾ ರಂಗಗಳಲ್ಲಿ ಸುಧಾರಣೆಗಳು ಬೇಕು ಎಂಬ ಬಲವಾದ ವಾದವನ್ನು ಮುಂದಿಡಲಾಗುತ್ತಿದೆ. ಯಾವುದೇ ಸುಧಾರಣೆಯು ಸಾಮಾನ್ಯ ಜನರ ಜೀವನ ಮಟ್ಟವನ್ನು ಸುಧಾರಿಸಬೇಕು. ಆದರೆ ಈಗ ಕಾಣುತ್ತಿರುವ ಸುಧಾರಣೆಗಳು ಯಾವ ಜನವರ್ಗಕ್ಕೆ ತಲುಪುತ್ತಿವೆ ಎಂಬುದು ಗಮನೀಯ ವಿಚಾರ. ಮಾತೆತ್ತಿದರೆ ಸುಧಾರಣೆಗಳ ಜಪ ಮಾಡುವ ರಾಜಕಾರಣಿಗಳು ರಾಜಕೀಯ ರಂಗದ ಸುಧಾರಣೆಗಳ ಬಗ್ಗೆ ಮಾತ್ರ ಸ್ಪಂದಿಸುತ್ತಿಲ್ಲ. ಆದರೆ ಈ ಕ್ಷೇತ್ರದಲ್ಲೂ ಸುಧಾರಣೆಗಳನ್ನೂ ತರಬೇಕೆಂಬ ದಿಸೆಯಲ್ಲಿ ಪ್ರಯತ್ನಗಳು ಸಾಗಿವೆ. ಹಿಂದೆ ವೋರಾ ಹಾಗೂ ಗೋಸ್ವಾಮಿಯವರ ನೇತೃತ್ವವಿದ್ದ ಸಮಿತಿಗಳು ಈ ವಿಷಯದ ಬಗ್ಗೆ ವರದಿಗಳನ್ನು ಸಲ್ಲಿಸಿದ್ದವು. ಆದರೆ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಸರ್ಕಾರಗಳು ಆ ಸಮಿತಿಗಳ ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಇಚ್ಛಾಶಕ್ತಿಯನ್ನು ಹೊಂದಿರಲಿಲ್ಲ. ನಂತರ ೧೯೯೯ ರಲ್ಲಿ ೧೭೦ ನೇ ಕಾನೂನು ಅಯೋಗವೂ ಇದರ ಬಗ್ಗೆ ವರದಿ ನೀಡಿತು.ಆದರೆ ಅದೂ ನೆನೆಗುದಿಗೆ ಬಿದ್ದಿತು. ಸಂಸತ್ತು ಸಹ ಮೌನ ವಹಿಸಿತು ಆದರೆ ಮೇ ೨೦೦೨ ರಲ್ಲಿ ಸರ್ವೋಚ್ಛ ನ್ಯಾಯಾಲಯ ಈ ವಿಚಾರದ ಬಗ್ಗೆ ತೀರ್ಪನ್ನು ನೀಡಿತು. ಅದರ ಆಧಾರದ ಮೇಲೆ ಚುನಾವಣಾ ಆಯೋಗ ಕೆಲವು ಆದೇಶಗಳನ್ನು ನೀಡಿತು. ಅದರಂತೆ ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರತಿಯೊಬ್ಬ ಉಮೇದುವಾರನೂ ಅವನ/ಅವಳ ಶಿಕ್ಷಣದ ವಿವರಗಳು, ಆಸ್ತಿ, ಹಾಗೂ ಸಾಲಗಳ, ಕ್ರಿಮಿನಲ್ ಹಿನ್ನೆಲೆಗಳ ಬಗ್ಗೆ ವಿವರಗಳನ್ನು ತಿಳಿಸಬೇಕಾಯಿತು. ಈ ಗಂಭೀರ ವಿಷಯದ ಬಗ್ಗೆ ಚರ್ಚೆ ಮಾಡಲು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸರ್ವ ಪಕ್ಷಗಳ ಸಭೆಯನ್ನು ಕರೆದರು. ಆದರೆ ಎಲ್ಲ ರಾಜಕೀಯ ಪಕ್ಷಗಳು ಚುನಾವಣಾ ಆಯೋಗದ ಈ ಆದೇಶಗಳು ಶಾಸನಾಧಿಕಾರ ಹಾಗೂ ಹಕ್ಕುಗಳನ್ನು ಭಂಗ ಮಾಡುತ್ತವೆಯೆಂದು ಒಕ್ಕೊರಳಿನಲ್ಲಿ ಸಾರಿದವು.

ಆದರೆ ಈ ಆದೇಶಗಳು ಕಳೆದ ಲೋಕಸಭೆ, ವಿಧಾನಸಭೆ ಹಾಗೂ ಇತರ ಚುನಾವಣೆಗಳಲ್ಲಿ ಜಾರಿಗೆ ಬಂದದ್ದು ಒಂದು ಚಾರಿತ್ರಿಕ

ಬೆಳವಣಿಗೆಯೆನ್ನಬಹುದು. ಈ ದಿಶೆಯಲ್ಲಿ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಪ್ರಗತಿಪರರು ಅಪಾರ ಶ್ರಮ ವಹಿಸಿದರು. ಈ ಚಳುವಳಿಯಲ್ಲಿ ಶ್ರೀ ಜಯಪ್ರಕಾಶ್‌ನಾರಾಯಣ್ (ಮಾಜಿ ಐ.ಎ.ಎಸ್.ಅಧಿಕಾರಿ) ನೇತೃತ್ವದ ಲೋಕಸತ್ತಾ ಹಾಗೂ ಬೆಂಗಳೂರಿನ ಐ. ಡಿ.ಎಂ ನಲ್ಲಿ ಕೆಲಸಮಾಡುತ್ತಿರುವ ಪ್ರೋ. ತ್ರಿಲೋಚನ್ ಶಾಸ್ತ್ರಿ ಯವರ ಅಸೋಸಿಯೇಷನ್ ಫಾರ್ ಡೆಮೊಕ್ರೆಟಿಕ್ ರೈಟ್ಸ್ ಸಂಸ್ಥೆಗಳು ಮುಂಚೂಣಿಯಲ್ಲಿದ್ದವು.

ಕಳೆದ ಚುನಾವಣೆಯಲ್ಲಿ ಪ್ರತಿ ರಾಜ್ಯದಲ್ಲೂ ಈ ವಿಷಯದಲ್ಲಿ ನಿಗಾ ವಹಿಸಲು ರಾಜ್ಯ ಚುನಾವಣಾ ಆಯೋಗದ ಸಹಯೋಗದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಸಾರ್ವಜನಿಕ ಜೀವನದ ವಿವಿಧ ಸ್ತರಗಳಲ್ಲಿ ಹೆಸರುವಾಸಿಯಾಗಿರುವ ಕೆಲವು ಗಣ್ಯ ವ್ಯಕ್ತಿಗಳನ್ನು ಈ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಯಿತು. ಕರ್ನಾಟಕದಲ್ಲೂ 'ಕರ್ನಾಟಕ ಎಲೆಕ್ಷನ್ ವಾಚ್' ಎಂಬ ಹೆಸರಿನಲ್ಲಿ ಸ್ಥಾಪನೆಗೊಂಡ ಸಮಿತಿ ಉಮೇದುವಾರರು ಸಲ್ಲಿಸಿದ್ದ ಪ್ರಮಾಣ ಪತ್ರಗಳನ್ನು ಪರಾಂಬರಿಸಿ ರಾಜಕೀಯ ಪಕ್ಷಗಳು ಚುನಾವಣಾಕಣಕ್ಕಿಳಿಸಿದ ಕೆಲವು ಕಳಂಕಿತ ವ್ಯಕ್ತಿಗಳ ಬಗ್ಗೆ ವಿಷಯಗಳನ್ನು ಬಹಿರಂಗಗೊಳಿಸಿತು. ಈ ದಿಸೆಯಲ್ಲಿ ಅದರ ಕೊಡುಗೆ ಶ್ಲಾಘನೀಯ.

ಚುನಾವಣೆಗಳಲ್ಲಿ ಹಣದ ಹೊಳೆಂಯೇ ಹರಿಯುತ್ತದೆ. ಸ್ಪರ್ಧಿಸುವ ಅಭ್ಯರ್ಥಿಗಳು ಅನೇಕ ವಾಮ ಮಾರ್ಗಗಳನ್ನು ಬಳಸುತ್ತಾರೆ. ರಾಜಕೀಯ ರಂಗದಲ್ಲಿ ಸುಧಾರಣಾ ಗಾಳಿ ಬಲವಾಗಿ ಬೀಸಬೇಕಾದರೆ ಪ್ರಭುತ್ವವೇ ಚುನಾವಣಾ ವೆಚ್ಚಗಳಿಗಾಗಿ ನಿಗದಿತ ಮೊತ್ತವನ್ನು ಉಮೇದುವಾರರಿಗೆ ನೀಡಬೇಕೆಂದು ಕೆಲವು ವಿಶೇಷ್ಞರ ಅಭಿಮತ. ಆದರೆ ಈ ರಂಗದಲ್ಲಿ ಸಮಗ್ರವಾಗಿ ಶುದ್ಧೀಕರಣ ಕಾರ್ಯ ಜರುಗಬೇಕಾದರೆ ಜನರೇ ಸಾಮಾಜಿಕ ಚಳುವಳಿಯನ್ನು ರೂಢಿಸಬೇಕು. ಸರ್ಕಾರಗಳು, ರಾಜಕೀಯ ಪಕ್ಷಗಳು, ಪ್ರಗತಿಪರ ಗುಂಪುಗಳು, ಪ್ರಜಾಸತ್ತಾತ್ಮಕ ಸಂಸ್ಥೆಗಳು, ಜನಪರ ಸಂಘಟನೆಗಳು ಹಾಗೂ ಪುರೋಗಾಮಿ ದೃಷ್ಟಿಕೋನವುಳ್ಳ ಜನರು ಕೈ ಜೋಡಿಸಿದಾಗ ಮಾತ್ರ ರಾಜಕೀಯ ರಂಗದಲ್ಲಿ ಕಾಣುತ್ತಿರುವ ನ್ಯೂನತೆಗಳನ್ನು ಶಮನಮಾಡಬಹುದು.

***

ಭಾರತ ಇಂದು ಮತ್ತು ನಾಳೆ

-ಜವಹರಲಾಲ್ ನೆಹರು

ಇಂದಿನ ಭಾರತವನ್ನು ವರ್ಣಿಸುವ ಮತ್ತು ಅದನ್ನು ತಿಳಿಯುವ ಪ್ರಯತ್ನ ಓರ್ವ ಸಾಹಸಿ ಮನುಷ್ಯನ ಕೆಲಸವೆಂದೇಹೇಳಬೇಕು; ನಾಳೆಯ ಭಾರತದ ಬಗ್ಗೆ ಹೇಳುವುದು ದುಡುಕುತನವೆಂದೆನಿಸುತ್ತದೆ. ಪ್ರಪಂಚದ ಯಾವುದೇ ದೇಶದ ಭವಿಷ್ಯವನ್ನುಕುರಿತು ನುಡಿಯುವುದು ಬಹಳ ಕಷ್ಟದ ಕೆಲಸ.

ಇಂದಿನ ಭಾರತ ಗತಕಾಲದ ಫಲಿತಾಂಶವಷ್ಟೇ ಅಲ್ಲ, ಸಾವಿರಾರು ವರ್ಷಗಳ ದೀರ್ಘ ಇತಿಹಾಸದ ಫಲವೂ ಆಗಿದೆ. ವಿಚಾರದ, ಅನುಭವದ ಮತ್ತು ಕ್ರಿಯಾಶೀಲತೆಯ ಅನೇಕ ಹಂತಗಳು ನಮ್ಮನ್ನು ರೂಪಿಸಿವೆ; ನಮ್ಮ ಇಂದಿನ ಅಭಿವ್ಯಕ್ತಿಗೆ ಕಾರಣವಾಗಿವೆ. ಭಾರತದಲ್ಲಿಯ ನನ್ನ ತಲೆಮಾರಿನ ಜನರು ಇತಿಹಾಸದಲ್ಲಿ ಇನ್ನೊಮ್ಮೆ ಮರುಕಳಿಸದಂಥ ಘಟನಾವಳಿಗಳಿಂದ ಪ್ರಭಾವಿತರಾಗಿದ್ದಾರೆ. ನಮ್ಮನ್ನು ಪೂರ್ಣವಾಗಿ ಆಘಾತಕ್ಕೆ ಒಳಗಾಗಿಸಿದಂಥ ಮಹಾನ್ ವ್ಯಕ್ತಿಯ ಜೊತೆ ನಮ್ಮ ಸಂಬಂಧವೇರ್ಪಟ್ಟಿತ್ತು. ಅವನು ನಮ್ಮ ಬದುಕನ್ನೇ ಬಹುವಾಗಿ ಅಲ್ಲಾಡಿಸಿದನಲ್ಲದೆ ಬದುಕಿನ ಸಾಮಾನ್ಯ ಚರ್ಯೆಯಿಂದಲೂ ಹೊರಗೆಳೆದ. ನಾವು ಐತಿಹಾಸಿಕವಾಗಿ ಮಹತ್ವ ಪಡೆದ ಘಟನಾವಳಿಗಳಿಗೆ ಸಾಕ್ಷಿಯಾಗಿದ್ದುದಷ್ಟೆ ಅಲ್ಲ, ಅವುಗಳಲ್ಲಿ ಭಾಗವಹಿಸಿದ್ದೆವು ಕೂಡ. ನಾವು ಆಗಾಗ್ಗೆ ತೀವ್ರತಮವಾದ ಉದ್ವೇಗಗವನ್ನು ಅನುಭವಿಸಿದೆವಲ್ಲದೆ ಭಾವನಾತ್ಮಕ ತೀವ್ರತೆಯನ್ನೂ ಅನುಭವಿಸಿದೆವು. ಅನೇಕ ಸಲ ಈ ಪರಿಸ್ಥಿತಿಯ ಪ್ರತಿಕ್ರಿಯೆಯಾಗಿ ನಿರಾಸೆಯನ್ನೂ ಅನುಭವಿಸಿದೆವು. ಆದರೂ ಇದೆಲ್ಲವ್ರ ಪೂರ್ಣವಾಗಿ ಸರಿಯಾದುದೆಂದಲ್ಲ. ಏಕೆಂದರೆ ಇಂಥ ಯಾವುದೇ ತೀವ್ರತಮವಾದ ಉದ್ರಿಕ್ತ ಪರಿಸ್ಥಿತಿಯಲ್ಲಿ ಉಂಟಾಗುವ ಮಾನಸಿಕ ಮತ್ತು ದೈಹಿಕ ಅವನತಿಯಿಂದ ಪಾರಾಗಿದ್ದೆವು. ಆ ಮಹಾನ್ ವ್ಯಕ್ತಿಯನ್ನು ನಾವು ಅನುಸರಿಸಲು ಅನಿವಾರ್ಯವಾದಂಥ ಕೆಲವು ಗುಣಗಳು ಅವನಲ್ಲಿದ್ದವು. ಆ ನಾಯಕ ಶಿಲೆಯಂತೆಯೂ, ದೀಪಸ್ತಂಭದಂತೆಯೂ ಇದ್ದ! ಅವನಿಂದ ಚಾಲಿತಗೊಂಡ ಚಳುವಳಿ ನಮ್ಮನ್ನು ಪುಳಕಿತಗೊಳಿಸಿತ್ತು. ಜೊತೆಗೆ ನಮ್ಮಲ್ಲಿಯ ಅತ್ಯುತ್ತಮವಾದುದನ್ನು ಹೊರಗೆಳೆದಿತ್ತು. ಅನೇಕ ಸಂದರ್ಭದಲ್ಲಿ ಸಮಯದ ಆ ಗಳಿಗೆಗಳು ಸಂತೋಷವಾಗೇನೂ ಇರುತ್ತಿರಲಿಲ್ಲ. ಅನೇಕ ಸಲ ದುಃಖಮಯವೂ ಆಗಿರುತ್ತಿದ್ದವು. ಹೀಗಿದ್ದರೂ ಸಂತೃಪ್ತಿಯ ಮನೋಭಾವ ನಮ್ಮಲ್ಲಿರುತ್ತಿತ್ತು. ಮಹತ್ತರವಾದ ಕಾರ್ಯದಲ್ಲಿ ನಾವು ತೊಡಗಿರುವೆವೆಂದೂ, ಇತಿಹಾಸದ ಗತಿಯೊಂದಿಗೆ ಹೆಜ್ಜೆ ಇಡುತ್ತಿದ್ದೇವೆಂದೂ ಅನಿಸುತ್ತಿತ್ತು. ಆಚಾರ ಮತ್ತು ವಿಚಾರ ಜೊತೆಗೂಡಿ ಸಾಗುತ್ತಿದ್ದವು. ಅದರಿಂದಾಗಿ ಪರಿಪೂರ್ಣ ಜೀವನದ ಭಾವನೆ

ನಮ್ಮಲ್ಲಿ ಮೂಡುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮನ್ನು ಕಾಪಾಡಿದ ನಂಬಿಕೆಯೊಂದಿತ್ತು. ಅದು ನಾವು ನೈತಿಕತೆಯಿಂದ ಕೂಡಿದವರಾಗಿಯೂ, ಉನ್ನತ ಆದರ್ಶಗಳನ್ನು ಹೊಂದಿದವರಾಗಿಯೂ ರಾಜಕೀಯ ವಿಷಯದಲ್ಲಿ ಕ್ರಿಯಾನ್ವಿತರಾಗಿದ್ದೆವೆಂಬುದು! ರಾಷ್ಟ್ರೀಯ ಹೋರಾಟಗಳಲ್ಲಿ ಸಾಮಾನ್ಯವಾಗಿ ಉದ್ಭವವಾಗುವ ದ್ವೇಷಾಸೂಯೆಗಳು ನಮ್ಮನ್ನು ಆವರಿಸಿಕೊಂಡಿರಲಿಲ್ಲ.

ನಮ್ಮ ಮುಂದೆ ಮತ್ತು ಮನಸ್ಸಿನಲ್ಲಿ ಯಾವಾಗಲೂ ಗಾಂಧೀ ಇದ್ದರು. ಬೇರೆಯವರೂ ಇದ್ದರು. ಅವರೆಲ್ಲರು ಮಾನವ ಸಮುದಾಯದ ಅಸಾಧಾರಣ ವ್ಯಕ್ತಿಗಳಾಗಿದ್ದರು. ಉದಾತ್ತ ಧ್ಯೇಯೋದ್ದೇಶಗಳೊಂದಿಗೆ ಮತ್ತು ಮಹಾನ್ ನಾಯಕನೊಂದಿಗೆ ಸಂಬಂಧ ಹೊಂದಿದ್ದರಿಂದ ಅವರೆಲ್ಲರ ವ್ಯಕ್ತಿತ್ವವೂ ಹಿರಿದಾಗಿತ್ತು. ಆ ಎಲ್ಲ ಮಹಾನ್ ಸ್ತ್ರೀ-ಪುರುಷರಲ್ಲಿ ಒಡನಾಡಿತನವಿತ್ತು. ಅವರು ತಮ್ಮೊಳಗೆ ಅನೇಕ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ ಎಲ್ಲರನ್ನೂ ಒಗ್ಗೂಡಿಸುವ ಶಕ್ತಿಶಾಲಿ ಸಂಬಂಧವೊಂದನ್ನು ಅವರು ಕಂಡು ಕೊಂಡದ್ದು ಆಶ್ಚರ್ಯಕರವಾದ ಸಂಗತಿಯಾಗಿತ್ತು. ಈ ಬಂಧ ಒಂದು ತಲೆಮಾರನ್ನೇ ಆವರಿಸಿತ್ತು.

ಭಾರತವೆಂದರೇನು- ಈ ಪ್ರಶ್ನೆ ನನ್ನ ಮನಸ್ಸನ್ನು ಬಹಳವಾಗಿ ಕಾಡಿದೆ. ಈ ಪ್ರಶ್ನೆಗೆ ನಾನು ನನ್ನದೇ ಆದ ಬಾಲಿಶ ರೀತಿಯಲ್ಲಿ ಭಾರತದ ಭೂತ ಮತ್ತು ವರ್ತಮಾನದಲ್ಲಿ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ನಮ್ಮ ಇತಿಹಾಸದ ಅತಿ ಪ್ರಾರಂಭಿಕ ಸಂಗತಿಗಳು ನನ್ನನ್ನು ಆಶ್ಚರ್ಯ ಚಕಿತನನ್ನಾಗಿ ಮಾಡಿದವು. ಆ ಕಾಲ ಪೌರುಷಯುಕ್ತ ಮತ್ತು ಸತ್ವಯುತ ಜನಾಂಗದ ಇತಿಹಾಸವಾಗಿದೆ. ಆ ಜನಾಂಗವು ಎಲ್ಲವನ್ನೂ ಪ್ರಶ್ನಿಸುವ ಚೈತನ್ಯವುಳ್ಳದ್ದಾಗಿತ್ತು, ಸ್ವತಂತ್ರವಾದ ಶೋಧನೆಯ ಒತ್ತಾಸೆಯನ್ನು ಹೊಂದಿತ್ತು. ನಮಗೆ ಗೊತ್ತಿರುವ ಅದರ ಅತ್ಯಂತ ಪೂರ್ವ ಅವಧಿಯಲ್ಲಿಯೂ ಕೂಡ ಅದು ಪ್ರೌಢ ಮತ್ತು ಸಹನಾಶೀಲ ನಾಗರಿಕತೆಯ ಕುರುಹುಗಳನ್ನು ಹೊಂದಿದಂಥದಾಗಿತ್ತು, ಜೀವನದ ಸಂತೋಷಗಳನ್ನೂ, ಕಷ್ಟಗಳನ್ನೂ ಸ್ವೀಕರಿಸುತ್ತ ಮೋಕ್ಷದ ಮತ್ತು ವಿಶ್ವದ ಹುಡುಕಾಟದಲ್ಲಿತ್ತು. ಅತ್ಯದ್ಭುತವಾದ ಭಾಷೆಯನ್ನೂ ರಚಿಸಿಕೊಂಡಿತ್ತು. ಅದು ಸಂಸ್ಕೃತ. ಈ ಭಾಷೆಯ ಮೂಲಕವೂ ಕಲೆ ಮತ್ತು ವಾಸ್ತುಶಿಲ್ಪಗಳ ಮೂಲಕವೂ ತನ್ನ ಹೃದಯವಂತಿಕೆಯ ಸಂದೇಶವನ್ನು ದೂರದ ದೇಶಗಳಿಗೆ ಕಳುಹಿಸಿತು. ಉಪನಿಷತ್‌ಗಳನ್ನೂ ಗೀತೆಯನ್ನೂ ಸೃಷ್ಠಿಸುವುದರ ಜೊತೆಗೆ ಬುದ್ಧನನ್ನೂ ಸೃಷ್ಟಿಸಿತು. ಪ್ರಪಂಚದ ಇನ್ನು ಯಾವ ಭಾಷೆಯೂ ಅಂಥ ಮಹತ್ವದ ಪಾತ್ರವನ್ನು ಯಾವುದೇ ಜನಾಂಗದ ಇತಿಹಾಸದಲ್ಲಿ ವಹಿಸಿಲ್ಲ. ಆ ಭಾಷೆ ಶ್ರೇಷ್ಠ ವಿಚಾರ ಮತ್ತು ಉತ್ಕೃಷ್ಠ ಸಾಹಿತ್ಯದ ಮಾಧ್ಯಮವಾಗುವುದರ ಜೊತೆಗೆ ಭರತವರ್ಷವನ್ನು ಒಂದುಗೂಡಿಸುವ ಸಾಧನವೂ ಆಯಿತು. ಈ ಸಾಧನೆ ರಾಜಕೀಯ ವಿಭಜನೆಗಳ ಮಧ್ಯೆಯೂ ನಡೆಯಿತು. ಸಾವಿರಾರು ವರ್ಷಗಳ ತಲೆಮಾರುಗಳ ಕೋಟ್ಯವಧಿ ಜನರ ಬದುಕಿಗೆ ಸಂಬಂಧಿಸಿದಂತೆ ರಾಮಾಯಣ ಮತ್ತು

ಮಹಾಭಾರತಗಳು ರಚಿತಗೊಂಡವು. ನಮ್ಮ ಜನಾಂಗ ಬುದ್ಧನನ್ನೂ, ಉಪನಿಷತ್‌ಗಳನ್ನೂ, ಮಹಾಕಾವ್ಯಗಳನ್ನೂ ಮರೆತು ಬಿಟ್ಟರೆ ಯಾವ ರೀತಿ ಇರುವುದೆಂಬುದನ್ನು ಆಶ್ಚರ್ಯಭರಿತನಾಗಿ ನನ್ನನ್ನು ನಾನು ಕೇಳಿಕೊಂಡಿದ್ದೇನೆ. ಹಾಗಾಗಿದ್ದಲ್ಲಿ ಅದು ಬೇರು ಸಹಿತ ಕಿತ್ತು ಹೋದ ಜನಾಂಗವಾಗುವುದು ಮತ್ತು ಈ ದೀರ್ಘ ಅವಧಿಯಲ್ಲಿ ಅದಕ್ಕೆ ವೈಶಿಷ್ಟ್ಯತೆಯನ್ನು ತಂದುಕೊಟ್ಟ ಯಾವ ಮೂಲ ಗುಣಲಕ್ಷಣಗಳಿವೆಯೋ ಅವುಗಳನ್ನು ಅದು ಕಳೆದುಕೊಳ್ಳುವುದು. ಆಗ ಭಾರತ ಭಾರತವಾಗಿ ಉಳಿಯುವುದಿಲ್ಲ.

ಉನ್ನತ ವಿಚಾರದಲ್ಲಿ ನಿಧಾನವಾಗಿ ಅವನತಿ ಪ್ರಾರಂಭವಾಯಿತು. ವಿಚಾರವು ತನ್ನ ನಾವೀನ್ಯತೆಯನ್ನು ಕಳೆದುಕೊಂಡಿತು ಮತ್ತು ಹಳತಾಯಿತು. ತಾರುಣ್ಯದ ಕ್ರಿಯಾಶಿಲತೆ ಮತ್ತು ಲವಲವಿಕೆ ಮುಪ್ಪಿನಾ ನಿಷ್ಕ್ರಿಯತೆಗೆ ದಾರಿ ಮಾಡಿಕೊಟ್ಟವು. ಸಾಹಸಮಯ ಕ್ರಿಯಾ ವೃತ್ತಿಗೆ ಬದಲಾಗಿ ಜೀವಂತಿಕೆಯನ್ನು ಕಳೆದುಕೊಂಡ ಏಕತಾನತೆ ಕಾಣಿಸಿಕೊಂಡಿತು. ವಿಶಾಲ ಮತ್ತು ರೋಮಾಂಚಕರವಾದ ವಿಶ್ವ ಪರಿಕಲ್ಪನೆಯು ಸಂಕುಚಿತಗೊಂಡು ಜಾತಿ, ವಿಭಜನೆಗಳು, ಸೀಮಿತ ಸಾಮಾಜಿಕ ರೀತಿ ಮತ್ತು ಉತ್ಸವಗಳಿಗೆ ಬಂಧಿತವಾಯಿತು. ಆದಾಗ್ಯೂ ಭಾರತ ತನ್ನ ದೇಶದಲ್ಲಿದ್ದ ವಿಶಾಲ ಮಾನವ ಸಮುದಾಯದಲ್ಲಿ ಹೊರಗಿನಿಂದ ಹರಿದುಬಂದ ಜನಸ್ತೋಮವನ್ನು ತನ್ನದಾಗಿಸಿಕೊಳ್ಳುವ ಶಕ್ತಿಯನ್ನು ಪಡೆದಿತ್ತು. ಭಾರತ ಎಂದೂ ತನ್ನ ಯೌವನದ ಕಾಲದಲ್ಲಿದ್ದ ಸಹಜೀವನದ ಪ್ರೇರಣಾಯುಕ್ತ ಉತ್ತೇಜಕರವಾದ ವಿಚಾರಗಳನ್ನು ಮರೆತಿರಲಿಲ್ಲ. ಹಾಗಾಗಿ ಭಾರತ ಇಸ್ಲಾಂ ಧರ್ಮದಿಂದಲೂ, ಮುಸ್ಲಿಮರ ದಾಳಿಗಳಿಂದಲೂ ಪರಿಣಾಮಕಾರಿಯಾದ ರೀತಿಯಲ್ಲಿ ಅವುಗಳ ಪ್ರಭಾವಕ್ಕೆ ಒಳಗಾಯಿತು. ನಂತರ ಪಾಶ್ಚಿಮಾತ್ಯ ವಸಹಾತುಶಾಹಿಶಕ್ತಿಗಳು ಹಿಂಬಾಲಿಸಿದವು. ಅವು ಹೊಸಬಗೆಯ ಪ್ರಭುತ್ವವನ್ನೂ, ವಸಾಹತುಶಾಹಿಯನ್ನೂ ಕಂಡವು. ಆಗ ಯೂರೋಪಿನಲ್ಲಿ ಒಡಮೂಡುತ್ತಿದ್ದ ಹೊಸ ವಿಚಾರಗಳು, ಕೈಗಾರಿಕೆ, ನಾಗರಿಕತೆ ಮುಂತಾದವುಗಳ ಪ್ರಭಾವವುಂಟಾಯಿತು. ಈ ಅವಧಿಯಲ್ಲಿ ಉಂಟಾದ ಪ್ರಭಾವ ದೀರ್ಘಕಾಲೀನ ಹೋರಾಟದ ನಂತರ ಸ್ವಾತಂತ್ರ್ಯ ಪ್ರಾಪ್ತಿಯಲ್ಲಿ ಕೊನೆಗೊಂಡಿತು. ಈಗ ನಾವು ಗತಕಾಲದ ಎಲ್ಲ ಹೊರೆಯನ್ನು ಹೊತ್ತುಕೊಂಡು ಭವಿಷ್ಯವನ್ನು ಎದುರಿಸುತ್ತಿದ್ದೇವೆ. ಗತಕಾಲದ ಎಲ್ಲ ಯುಗಗಳು ನಮ್ಮ ಜನರಲ್ಲಿ ಮತ್ತು ನಮ್ಮ ದೇಶದಲ್ಲಿ ಪ್ರಾತಿನಿಧಿಕವಾಗಿ ನೆಲೆಯೂರಿವೆ. ಸುಸಂಘಟಿತ ಅಧಿಕಾರ ಮತ್ತು ಶಕ್ತಿ ಆಧುನಿಕ ಯುಗದ ಸಂಕೇತಗಳಾಗಿವೆ. ನಾವು ಭಾರತದಲ್ಲಿ ಪರಮಾಣು ವಿಜ್ಞಾನ ಮತ್ತು ಅಣುಶಕ್ತಿಯನ್ನು ಬೆಳೆಸಿಕೊಂಡಿದ್ದೇವೆ. ಅದೇ ಹೊತ್ತಿಗೆ ನಾವು ತೊಪ್ಪೆಯುಗ(Cowdung Age)ವನ್ನೂ ಹೊಂದಿದ್ದೇವೆ. ಹೀಗೆ ನಮ್ಮ ದೇಶದಲ್ಲಿ ಪ್ರತಿಯೊಂದು ಶತಮಾನದ ಪ್ರಾತಿನಿಧಿತ್ವವಿದೆ. ಜೊತೆಗೆ ಅಗಾಧವಾದ ಕಷ್ಟಗಳಲ್ಲಿಯೂ, ವಿಪತ್ತುಗಳಲ್ಲಿಯೂ ಅದು ಉಳಿದುಕೊಂಡು ಬಂದಿದೆ. ನಾವು ವಿಜ್ಞಾನ ಮತ್ತು

ತಂತ್ರಜ್ಞಾನದ ಯುಗಕ್ಕೆ ಧುಮುಕುತ್ತಿದ್ದೇವೆ. ಪ್ರಕೃತಿಯ ಶಕ್ತಿಗಳನ್ನು ನಿಯಂತ್ರಿಸಲು ಸಾಧ್ಯವಾಗುವಂತೆ ನಮ್ಮ ಜ್ಞಾನವನ್ನು ಸಂಘಟಿಸಿಕೊಳ್ಳುತ್ತಿದ್ದೇವೆ. ಆದರೆ ಬಡತನ ಮತ್ತು ಅಪೂರ್ಣವಾದ ಬೆಳವಣಿಗೆ ನಮ್ಮನ್ನು ಹಿಂದಕ್ಕೆಳೆಯುತ್ತಿವೆ. ಇವುಗಳ ಜೊತೆಗೆ ಉಳಿದುಕೊಂಡು ಬಂದಿರುವ ಗತಕಾಲದ ವಿಚಾರಗಳು ಮತ್ತು ರೀತಿ ನೀತಿಗಳು ಸಹ ಕೂಡಿಕೊಂಡಿವೆ. ವಿಜ್ಞಾನ ಮತ್ತು ತಂತ್ರಜ್ಞಾನವಿಲ್ಲದೆ ನಮಗೆ ಒಳ್ಳೆಯ ಭವಿಷ್ಯವಿಲ್ಲವಾದರೂ ನಾವು ನಮ್ಮ ಗತಕಾಲದ ವೈಭವವನ್ನು ಮರೆತುಬಿಟ್ಟೆವಾದರೆ ನಮ್ಮ ಭವಿಷ್ಯವು ಅರ್ಥವಿಹೀನವೂ ಶುಷ್ಕವೂ ಆಗುತ್ತದೆ. ಹೊಯ್ದಾಟ ಮತ್ತು ಭ್ರಮೆಯಿಂದ ಕೂಡಿದ ಇಂದಿನ ನಮ್ಮ ಕಾಲದಲ್ಲಿ ನಾವು ಎರಡು ದಿಕ್ಕಿನತ್ತ ಮುಖಮಾಡಿ ನಿಂತಿದ್ದೇವೆ. ಒಂದು ಮುಖ ಭವಿಷ್ಯತ್ತಿನತ್ತ ನೋಡುತ್ತಿದ್ದರೆ, ಇನ್ನೊಂದು ಮುಖ ಗತಕಾಲವನ್ನು ನೋಡುತ್ತಿದೆ. ಹೀಗೆ ನಾವು ಈ ಎರಡು ದಿಕ್ಕಿನತ್ತ ಎಳೆಯಲ್ಪಡುತ್ತಿದ್ದೇವೆ. ಈ ವೈರುಧ್ಯವನ್ನು ಪರಿಹರಿಸಿಕೊಂಡೂ, ನಮ್ಮ ಭೌತಿಕ ಅಗತ್ಯಗಳನ್ನು ಪೂರೈಸಿಕೊಂಡೂ, ಮನಸ್ಸನ್ನು ಮತ್ತು ಚೇತನವನ್ನು ಸುಸ್ಥಿರವಾಗಿಡಬಲ್ಲ ಒಂದು ವ್ಯವಸ್ಥೆಯನ್ನು ಹೇಗೆ ರೂಪಿಸಿಕೊಳ್ಳಬಲ್ಲೆವು ? ಯಾವ ಹೊಸ ಅಥವಾ ಹಳೆಯ ಆದರ್ಶಗಳನ್ನು ನಮ್ಮ ಜನರ ಮುಂದೆ ಇಡಬಲ್ಲೆವು? ಮತ್ತು ಅವರನ್ನು ಹೇಗೆ ಜಾಗೃತರನ್ನಾಗಿಯೂ ಮತ್ತು ಕ್ರಿಯಾಶೀಲರನ್ನಾಗಿಯೂ ಮಾಡಬಲ್ಲೆವು? ನಾವು ಭಾರತದಲ್ಲಿ ನಮ್ಮದೇ ಆದ ಸಮಸ್ಯೆಗಳನ್ನು ಹೊಂದಿದ್ದರೂ ವಿಶ್ವದ ಪ್ರಮುಖ ಸಮಸ್ಯೆಗಳನ್ನು ಕೂಡ ಹಂಚಿಕೊಳ್ಳುತ್ತೇವೆ. ಪ್ರಪಂಚ ತನ್ನ ಅತ್ಯದ್ಭುತವಾದ ಪ್ರಗತಿಯ ನಂತರವೂ ತನ್ನ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಿರುವಂತೆ ಅನಿಸುತ್ತಿದೆ. ವರ್ತಮಾನದಲ್ಲಿ ನಾವು ಸರಿಯಾದ ಕ್ರಮದಲ್ಲಿಯೆ ಆರ್ಥವ್ಯವಸ್ಥೆಯ ಉನ್ನತಿಯಲ್ಲಿ ಮಗ್ನರಾಗಿದ್ದೇವೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಮತ್ತು ಇತರ ತೀವ್ರತಮವಾದ ಪ್ರಯತ್ನಗಳ ಮೂಲಕ ನಮ್ಮ ಜನರ ಜೀವನಮಟ್ಟವನ್ನು ಮೇಲೆತ್ತಲು ತೊಡಗಿದ್ದೇವೆ. ಯಾವುದೇ ಬಗೆಯ ಪ್ರಗತಿಯನ್ನು ಸಾಧಿಸಬೇಕಾದರೆ ಈ ಪ್ರಕಾರದ ಆರ್ಥಿಕ ಪ್ರಗತಿಯು ಪೂರ್ವಭಾವಿ ಸಿದ್ಧತೆಯಾಗಿರುವುದರ ಜೊತೆಗೆ ಅಗತ್ಯವಾದ ಸಂಗತಿಯೂ ಆಗಿರುತ್ತದೆ. ಆದರೆ ಒಂದು ಸಂಶಯ ನಮ್ಮ ಮನಸ್ಸಿನಲ್ಲಿ ನುಗ್ಗುತ್ತದೆ. ಇದಿಷ್ಟೆ ಸಾಕೇ? ಅಥವಾ ಇದಕ್ಕೆ ಇನ್ನೇನನ್ನಾದರೂ ಸೇರಿಸಬೇಕೆ? ಕಲ್ಯಾಣಕಾರಿ ಸಮಾಜ ಒಂದು ಸುಯೋಗ್ಯ ಸಮಾಜವೇ ಆದರೂ ಅದು ನಿರ್ವಿಣ್ಣವೂ ಆಗಿರಲು ಸಾಧ್ಯವಿದೆ. ಯಾವ ದೇಶಗಳು ಕಲ್ಯಾಣಕಾರಿ ಸಮಾಜದ ಆದರ್ಶವನ್ನು ಸಾಧಿಸಿವೆಯೊ ಅಲ್ಲಿ ಹೊಸಬಗೆಯ ಸಮಸ್ಯೆಗಳೂ ಮತ್ತು ಕಷ್ಟಗಳೂ ಹುಟ್ಟಿಕೊಂಡಿರುವುದನ್ನು ನೋಡುತ್ತೇವೆ. ಆ ರೀತಿ ಹುಟ್ಟಿಕೊಂಡ ಸಮಸ್ಯೆಗಳನ್ನು ಕೇವಲ ಭೌತಿಕ ಪ್ರಗತಿಯಿಂದಾಗಲೀ ಯಾಂತ್ರಿಕವಾದ ನಾಗರಿಕತೆಯಿಂದಾಗಲೀ ಬಗೆಹರಿಸಲು ಸಾಧ್ಯವಿಲ್ಲ. ಮಾನವ ಸ್ವಭಾವದ ಕೆಲ ಅತ್ಯಗತ್ಯ ಬೇಡಿಕೆಗಳನ್ನು ಪೂರೈಸುವಲ್ಲಿ ಧರ್ಮ ಮಹತ್ತರ ಪಾತ್ರವನ್ನು ನಿರ್ವಹಿಸುತ್ತದೆ. ಆದರೆ ಆ ಪ್ರಕಾರದ ಧರ್ಮಗಳು

ತಮ್ಮ ಹಿಡಿತವನ್ನು ದುರ್ಬಲಗೊಳಿಸಿಕೊಂಡಿವೆ. ವಿಜ್ಞಾನ ಮತ್ತು ರಾಷ್ಟ್ರೀಯತೆಯ ಬೀಸನ್ನು ಎದುರಿಸುವಲ್ಲಿ ಅವು ಅಸಮರ್ಥವಾಗಿವೆ. ಧರ್ಮ ಅಗತ್ಯವಾಗಿದೆಯೆ ಇಲ್ಲವೇ ಎಂಬುದಕ್ಕಿಂತ ನಮ್ಮ ಬದುಕಿಗೆ ಅರ್ಥವನ್ನು ಕೊಡಲು ಮತ್ತು ನಮ್ಮೆಲ್ಲರನ್ನು ಒಗ್ಗೂಡಿಸಲು ಯೋಗ್ಯವಾದ ಆದರ್ಶವಂತೂ ಅಗತ್ಯವಿದೆ. ನಮ್ಮ ದೈನಂದಿನ ಮತ್ತು ಭೌತಿಕ ಜೀವನದ ಅಗತ್ಯಗಳ ಆಚೆಗೆ ಒಂದು ಧ್ಯೇಯೋದ್ದೇಶದ ಅನುಭೂತಿ ಅವಶ್ಯ.

ನಾವು ಭವಿಷ್ಯದತ್ತ ನೋಡಬೇಕು ಮತ್ತು ಅದರ ಈಡೇರಿಕೆಗಾಗಿ ಉದ್ದೇಶಪೂರ್ವಕವಾಗಿಯೇ ಕೆಲಸಮಾಡಬೇಕು. ಆ ಕೆಲಸವನ್ನು ಆತ್ಮ ವಿಶ್ವಾಸದಿಂದಲೂ, ಉತ್ಸಾಹಭರಿತವಾಗಿಯೂ ಮಾಡಬೇಕು. ಆಗಲೂ ಸಹ ನಮ್ಮ ಗತಕಾಲದ ಆನುವಂಶಿಕತೆಯನ್ನು ಕಾಪಾಡಿಕೊಂಡು ಬರಬೇಕು. ಅದರಿಂದ ಪೋಷಣೆಯನ್ನೂ ಪಡೆಯಬೇಕು. ಬದಲಾವಣೆ ಅತ್ಯಗತ್ಯವಾಗಿದ್ದರೂ ಅದರೊಂದಿಗೆ ಸಾತತ್ಯೆಯೂ ಕೂಡ ಅಗತ್ಯ. ಗತಕಾಲದಲ್ಲಿ ಹಾಗೂ ವರ್ತಮಾನದಲ್ಲಿ ಹಾಕಲಾಗಿರುವ ಅಡಿಪಾಯದ ಮೇಲೆ ಭವಿಷ್ಯವನ್ನು ರೂಪಿಸಬೇಕಾಗುತ್ತದೆ. ನಾವು ಗತಕಾಲವನ್ನು ನಿರಾಕರಿಸುವುದರಿಂದ ಹಾಗೂ ಅದರಿಂದ ಪೂರ್ಣವಾಗಿ ವಿಚ್ಛೇದಿತಗೊಳ್ಳುವುದರಿಂದ ನಮ್ಮನ್ನು ನಾವೇ ಉಚ್ಚಾಟಿತಗೊಳ್ಳುವುದರ ಜೊತೆಗೆ ನಿರ್ವೀರ್ಯಗೊಳ್ಳುತ್ತೇವೆ. ನಮ್ಮ ಜನಾಂಗ ಮತ್ತು ದೇಶ ಹೊಂದಿದ್ದ ಸಿರಿವಂತ ಪರಂಪರೆಗಳಲ್ಲಿ ತನ್ನ ಪಾದಗಳನ್ನು ಭದ್ರವಾಗಿ ನೆಲೆಯೂರಿಸಿಕೊಂಡು ಕ್ರಾಂತಿಕಾರಿಯಾಗಿ ಕೆಲಸಮಾಡುವ ವಿಶೇಷ ಗುಣ ಗಾಂಧೀಜಿಯವರದಾಗಿತ್ತು. ಅನೇಕ ಜನರು ಗಾಂಧೀಜಿಯನ್ನು ಟೀಕಿಸುತ್ತಿದ್ದರು. ಇದಕ್ಕೆ ಕಾರಣ ಗಾಂಧೀಜಿ ಇಟ್ಟುಕೊಂಡಿದ್ದ ಅಪ್ರಸ್ತುತವೆನಿಸುವ ಆರ್ಥಿಕ ಸಿದ್ಧಾಂತಗಳಿಗಾಗಿ, ಅವರು ಪರಂಪರೆಯನ್ನು ಬೆಂಬಲಿಸುತ್ತಿದ್ದುದಕ್ಕಾಗಿ, ಪ್ರತಿಗಾಮಿಶಕ್ತಿಗಳನ್ನು ಪ್ರೋತ್ಸಾಹಿಸುತ್ತಿದ್ದುದಕ್ಕಾಗಿ. ಆದಾಗ್ಯೂ ಅವರ ಕಾರ್ಯಚಟುವಟಿಕೆಗಳ ವಿಸ್ತಾರವನ್ನು ಪರೀಕ್ಷಿಸುವ ಯಾರೇ ಆಗಲಿ ಅವುಗಳ ಕ್ರಾಂತಿಕಾರಿ ಪರಿಣಾಮಗಳಿಂದ ಪ್ರಭಾವಿತರಾಗದೆ ಇರಲು ಸಾಧ್ಯವಾಗುತ್ತಿರಲಿಲ್ಲ. ಆ ಚಟುವಟಿಕೆಗಳು ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದ್ದಿರ ಬಹುದು, ಇಲ್ಲವೇ ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದ್ದಿರಬಹುದು, ಅದನ್ನು ಅರ್ಥ ಮಾಡಿಕೊಳ್ಳಲು ನಮಗೆ ಕಷ್ಟವೆನಿಸುತ್ತದೆ. ಏಕೆಂದರೆ ನಾವು ಪಾಶ್ಚಿಮಾತ್ಯ ಪರಂಪರೆಯ ಹೋರಾಟದ ವಾತಾವರಣದಲ್ಲಿ ಬೆಳೆದು ಬಂದವರಾಗಿದ್ದೇವೆ. ಯಾವದೇ ಒಂದು ನೈಜ ಕ್ರಾಂತಿ ಜನರಿಂದ ಹುಟ್ಟುತ್ತದೆಯೇ ಹೊರತು ನಿರ್ವಾತ ಪ್ರದೇಶದಲ್ಲಿ ಅಲ್ಲ. ಆ ಕ್ರಾಂತಿಯು ನೂರಕ್ಕೆ ನೂರು ಸಾಮಾಜಿಕವಾಗಿರಬೇಕೆಂದು ಗಾಂಧೀಜಿ ಅರಿತಿದ್ದರು. ಅವರಿಗಿಂತ ಮುನ್ನ ಅನೇಕ ಪ್ರಕಾಂಡ ಸಾಮಾಜಿಕ ಸುಧಾರಕರು ಬಂದಿದ್ದರು. ಕೆಲ ಸಣ್ಣ ಪುಟ್ಟ ಬದಲಾವಣೆಗಳನ್ನುಂಟು ಮಾಡಿದ್ದರು, ಹೊಸ ಪಂಥಗಳನ್ನು ಹುಟ್ಟುಹಾಕಿದರು. ಆದರೆ ಗಾಂಧಿ ಕೋಟಿ ಕೋಟಿ ಜನರಲ್ಲಿ ಅವರಿಗರಿವಿಲ್ಲದಂತೆಯೆ ಕ್ರಾಂತಿಯನ್ನುಂಟು ಮಾಡಿದರು.

ಅವರು ಜಾತಿಯನ್ನು ಒಟ್ಟಾರೆ ಖಂಡಿಸದಿದ್ದರೂ ತಮ್ಮ ನಂತರದ ದಿನಗಳಲ್ಲಿ

ಹಿಂದುಳಿದ ವರ್ಗಗಳ ಮತ್ತು ಅಸ್ಪೃಶ್ಯರ ಏಳಿಗೆಗಾಗಿ ಒತ್ತಾಯಿಸುವುದರ ಮೂಲಕ ಇಡೀ ಜಾತಿಪದ್ಧತಿಯನ್ನೇ ನಿಸ್ತೇಜಗೊಳಿಸಿದರು. ಇದನ್ನು ಅವರು ಉದ್ದೇಶಪೂರ್ವಕವಾಗಿಯೇ ಮಾಡಿದರು. ಅದರ ಪರಿಣಾಮಗಳನ್ನು ಅವರು ಅರಿತವರಾಗಿದ್ದರು. ತಮ್ಮ ರಾಜಕೀಯ ಕೃತಿಗಳ ಮೂಲಕ ಲಕ್ಷಾಂತರ ಜನರನ್ನು ಪ್ರಾಣಸಂಪನ್ನರನ್ನಾಗಿ ಮಾಡಿದರು. ಅವರನ್ನು ನಿರ್ಭೀತರನ್ನಾಗಿ ಮಾಡಿದರು. ಅವರಲ್ಲಿ ಆತ್ಮಗೌರವವನ್ನೂ, ಆತ್ಮನಿರ್ಭರತೆಯನ್ನೂ ತಂದರು. ಅವಕಾಶಹೀನರ ಮತ್ತು ಬಡವರ ಏಳ್ಗೆಯ ಬಗ್ಗೆ ಒತ್ತುಕೊಡುವುದರ ಮೂಲಕ ನಾವೆಲ್ಲ ಸಾಮಾಜಿಕ ನ್ಯಾಯ ದೃಷ್ಟಿಯಿಂದ ಆಲೋಚಿಸುವಂತೆ ಮಾಡಿದರು. ಅವರು ಇದೆಲ್ಲವನ್ನು ಶಾಂತಚಿತ್ತರಾಗಿಯೂ, ಅನುದ್ರಿಕ್ತರಾಗಿಯೂ, ಘರ್ಷಣಾಮನೋಭಾವವನ್ನು ತಪ್ಪಿಸುವದರ ಮೂಲಕವೂ ಇದೆಲ್ಲಕ್ಕಿಂತ ಹೆಚ್ಚಾಗಿ ಸತ್ಯ ಮತ್ತು ಶಾಂತಿಮಾರ್ಗಗಳಿಗೆ ಮಹತ್ವ ಕೊಡುವುದರ ಮೂಲಕವೂ ಮಾಡಿದರು.

ಸತ್ಯವೆಂಬುದು ಅವರ ಜೀವನದ ಒಂದು ಅಂಗವಾಗಿತ್ತು. ಅವರ ಪ್ರಖರಕ್ರಿಯೆ ಯಾವಾಗಲೂ ಸತ್ಯದೊಂದಿಗೆ ಸೇರಿರುತ್ತಿತ್ತು. ಹಾಗೆ ಮಾಡುವುದರ ಮೂಲಕ ನಮ್ಮ ಜನಾಂಗವನ್ನು ಶ್ರೀಮಂತಗೊಳಿಸಿದ್ದ ಮೂಲಭೂತ ತತ್ವಗಳ ಸ್ಮರಣೆಯನ್ನು ಪುನರುಜ್ಜೀವನಗೊಳಿಸುತ್ತಿದ್ದರು. ಹೀಗೆ ಹಳೆಯ ತಳಹದಿಯ ಮೇಲೆ ಕಟ್ಟಡವನ್ನು ನಿರ್ಮಿಸಿದರೂ ಅದು ಭವಿಷ್ಯತ್ತಿನತ್ತ ಮುಖ ಮಾಡಿರುವಂತೆ ಪ್ರಯತ್ನಿಸುತ್ತಿದ್ದರು. ಅವರ ಕೆಲವು ಆರ್ಥಿಕ ಮಾರ್ಗಗಳು ಆಧುನಿಕ ವಿಚಾರಗಳೊಂದಿಗೆ ಸರಿದೂಗದಿದ್ದರೂ, ಅವು ಕೇವಲ ತಾತ್ಕಾಲಿಕ ಮಹತ್ವದ್ದೆಂದೆನಿಸಿದರೂ ಅದ್ಯಾವುದರ ಬಗ್ಗೆ ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅವರು ಯಾವಾಗಲೂ ಬದಲಾಗುತ್ತಿರುವ ಪರಿಸ್ಥಿತಿಯೊಂದಿಗೆ ತಮ್ಮನ್ನು ಒಗ್ಗಿಸಿಕೊಳ್ಳುತ್ತಿದ್ದರು. ಹಾಗೆ ಮಾಡುವಾಗ ಮೂಲಸಂಗತಿ ವಿಶ್ವಾಸಾರ್ಹವಾಗಿದೆಯೆ ಎಂಬುದನ್ನು ಗಮನಿಸುತ್ತಿದ್ದರು. ನಾವು ಕೂಡ ಬದಲಾವಣೆಗೊಳ್ಳುತ್ತಿರುವ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳಬೇಕು. ಆದರೆ ಮೂಲತತ್ವಗಳು ನಮಗೆ ಮಾರ್ಗದರ್ಶಕವಾಗಿರಬೇಕು.

ಇಸ್ಲಾಂ ಧರ್ಮ ಭಾರತಕ್ಕೆ ಬಂದಾಗ ಅದು ರಾಜಕೀಯ ಮೇಲುಗೈಯೊಂದಿಗೆ ಬಂತು. ಘರ್ಷಣೆಯನ್ನೂ ತಂದಿತು. ಅದರಿಂದಾಗಿ ಎರಡು ಪ್ರಕಾರದ ಪರಿಣಾಮಗಳುಂಟಾದವು. ಒಂದು, ಹಿಂದೂ ಸಮಾಜವು ತನ್ನ ಚಿಪ್ಪಿನೊಳಗೆ ಮುದುಡಿಕುಳಿತುಕೊಳ್ಳುವಂತಾಯಿತು; ಇನ್ನೊಂದು, ಅದು ಹೊಸಗಾಳಿ ಮತ್ತು ಹೊಸ ವಿಚಾರಗಳನ್ನು ತಂದಿತು. ಒಂದು ರೀತಿಯ ಪುನಶ್ಚೇತನದ ಪ್ರಭಾವ ಉಂಟಾಯಿತು. ಹಿಂದೂ ಸಮಾಜವು ಇನ್ನೊಂದು ದೊಡ್ಡ ಧರ್ಮವಾದ ಬೌದ್ಧ ಧರ್ಮದಂತೆ ತನ್ನನ್ನು ತಾನು ಹೊರಜಗತ್ತಿನಿಂದ ಮುಚ್ಚಿಕೊಂಡ ಧರ್ಮವಾಗಿತ್ತು. ಬೌದ್ಧ ಧರ್ಮವು ಭಾರತೀಯ ವಿಚಾರದ ಉನ್ನತ ಫಲಿತಾಂಶವಾಗಿತ್ತು. ಹೊರಗಿನಿಂದ ಬಂದ ಮುಸ್ಲಿಮರು ಹೊರಜಗತ್ತಿನೊಂದಿಗೆ ಸಂಪರ್ಕಹೊಂದದೇ ಇದ್ದ ತಮ್ಮದೇ ಆದ ಪದ್ಧತಿಯನ್ನು

ತೆಗೆದುಕೊಂಡು ಬಂದರು. ಹೀಗೆ ಎರಡು ಸಂಕುಚಿತ ಪದ್ಧತಿಗಳು ಪರಸ್ಪರ ಭೇಟಿಗೊಂಡವು. ಅವುಗಳಲ್ಲಿ ಯಾವುದೊಂದೂ ಇನ್ನೊಂದನ್ನು ಕಿತ್ತುಹಾಕಲು ಅಥವಾ ಜಯಿಸಲು ಅಸಮರ್ಥವಾಗಿತ್ತು. ರಾಜಕೀಯ ಗೆಲವು ವೈಚಾರಿಕ, ನೈತಿಕ ಅಥವಾ ಧಾರ್ಮಿಕ ವಿಜಯಕ್ಕೆ ಕಾರಣವಾಗಲಿಲ್ಲ. ಪ್ರಾಚೀನ ಭಾರತೀಯ ಪರಂಪರೆ ಮತ್ತು ನಂಬಿಕೆ ಇನ್ನೂ ದೃಢವಾಗಿ ಮತ್ತು ಗಟ್ಟಿಯಾಗಿದ್ದುದರಿಂದ ಹೊಸ ಪ್ರಭಾವವನ್ನು ಅವು ತಡೆಯಲು ಸಮರ್ಥವಾಗಿದ್ದವು. ಮುಸ್ಲಿಮರು ತಮ್ಮದೇ ಆದ ಬಿರುಸಾದ ಸಂದೇಶದೊಂದಿಗೆ ಬಂದರು. ಆದ್ದರಿಂದ ಅವರನ್ನು ಸುಲಭವಾಗಿ ಭಾರತೀಯತೆಯೊಂದಿಗೆ ಸಮ್ಮಿಳಿತಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರಂತೆಯೇ ಈ ಮೊದಲು ಹೊರಗಿನಿಂದ ಬಂದಿದ್ದವರನ್ನು ಸಮ್ಮಿಳಿತಗೊಳಿಸಿಕೊಂಡಿತು. ಮುಸಲ್ಮಾನರು ಹಿಂದೂ ಸಮಾಜದೊಂದಿಗೆ ಸಮ್ಮಿಳಿತಗೊಳ್ಳಲು ಮತ್ತು ಭಾರತೀಯರ ಮೂಲಭೂತ ಚರ್ಯೆಯನ್ನು ಬದಲಾಯಿಸಲು ಅಸಮರ್ಥರಾದರು. ಆದ್ದರಿಂದ ಮಧ್ಯಕಾಲಿನ ಯುಗದಲ್ಲಿ ಉಂಟಾಗಿದ್ದ ಸಮಸ್ಯೆಯೆಂದರೆ ಎರಡು ಪ್ರಕಾರದ ಸಂಕುಚಿತ ಪದ್ಧತಿಗಳು ತಮ್ಮ ಬಲವಾದ ನೆಲೆಗಳೊಂದಿಗೆ ಆರೋಗ್ಯಕರವಾದ ಸಂಬಂಧವನ್ನು ಬೆಳೆಸಿಕೊಳ್ಳುವುದು ಹೇಗೆ ಎಂಬುದಾಗಿತ್ತು. ಐಕ್ಯತೆಯನ್ನು ಸಾಧಿಸುವುದರಲ್ಲಿಯೆ ಭವಿಷ್ಯವಿದೆಯೆಂದು ಅಕ್ಬರ್ ಮತ್ತು ಇತರರು ಅರ್ಥಮಾಡಿಕೊಂಡರು.

ಪ್ರಾಚೀನ ಹಿಂದೂಗಳ ತತ್ವಜ್ಞಾನ ಮತ್ತುಅವರ ಜಾಗತಿಕ ದೃಷ್ಟಿಕೋನ ಆಶ್ಚರ್ಯವೆನಿಸುವ ರೀತಿಯಲ್ಲಿ ಸಹನೆಯುಳ್ಳದ್ದಾಗಿತ್ತು. ಆದಾಗ್ಯೂ ಅವರು ಅನೇಕ ಪ್ರಕಾರದ ಜಾತಿಯಾಧಾರಿತ ಗುಂಪುಗಳಲ್ಲಿ ಮತ್ತು ಶ್ರೇಣೀಕೃತ ವರ್ಗಗಳಲ್ಲಿ ವಿಂಗಡಣೆಗೊಂಡಿದ್ದರು. ಮುಸ್ಲಿಮರು ಸಹ ಹೊಸ ಸಮಸ್ಯೆಯನ್ನು ಎದುರಿಸಬೇಕಾಯಿತು ಅದು ಬೇರೆಯುವರೊಂದಿಗೆ ಸರಿಸಮನಾಗಿ ಹೇಗೆ ಜೀವಿಸಬೇಕೆಂಬುದೇ ಆಗಿತ್ತು. ಬೇರೆ ಯಾವೆಲ್ಲಾ ದೇಶಗಳಿಗೆ ಮುಸ್ಲಿಮರು ಹೋಗಿದ್ದರೋ ಅಲ್ಲಿ ಇಂಥ ಪ್ರಶ್ನೆ ಹುಟ್ಟದೇ ಇರುವಷ್ಟರ ಮಟ್ಟಿಗೆ ಅವರು ಜಯಶೀಲರಾಗಿದ್ದರು. ಅವರು ಕ್ರಿಶ್ಚಿಯನ್ನರ ಸಾಮ್ರಾಜ್ಯದೊಂದಿಗೆ ಘರ್ಷಣೆಗಿಳಿಯಬೇಕಾಯಿತು. ಈ ಘರ್ಷಣೆ ನೂರಾರು ವರ್ಷಗಳವರೆಗೆ ನಡೆಯಿತಾದರೂ ಆ ಸಮಸ್ಯೆ ಪರಿಹಾರಗೊಳ್ಳಲಿಲ್ಲ. ಭಾರತದಲ್ಲಿ ನಿಧಾನವಾಗಿ ಒಂದು ಸಮನ್ವಯತೆ ರೂಪುಗೊಂಡಿತು. ಆದರೆ ಈ ಸಮನ್ವಯದ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಇನ್ನಿತರ ಪ್ರಭಾವಗಳೂ ಈ ಪ್ರಕ್ರಿಯೆಯಲ್ಲಿ ಸೇರಿಕೊಂಡವು. ಪಾಶ್ಚಿಮಾತ್ಯ ದೇಶಗಳು ಕೈಗಾರಿಕೀಕರಣದಿಂದಾಗಿ ಬಲಿಷ್ಠಗೊಳ್ಳುತ್ತಲಿದ್ದವು. ಆದ್ದರಿಂದ ತಾವು ಬೇರೆಯುವರಿಗಿಂತ ಶ್ರೇಷ್ಠರೆಂಬ ಭಾವನೆ ಅವುಗಳಲ್ಲಿ ಬೆಳೆಯಿತು. ಅವು ಪ್ರತ್ಯೇಕವಾಗಿರಲೂ ಸಾಧ್ಯವಾಯಿತು. ತಮ್ಮ ಆಳ್ವಿಕೆಗೆ ಒಳಪಟ್ಟವರನ್ನು ಕೀಳಾಗಿ ಭಾವಿಸಲು ಪ್ರಾರಂಭಿಸಿದವು. ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಇದ್ದಂತಹ ಅಂತರಕ್ಕಿಂತಲೂ ದೊಡ್ಡದಾದ ಅಂತರ ಪಾಶ್ಚಿಮಾತ್ಯ ದೇಶಗಳ ಮತ್ತು ಹಿಂದೂಗಳ

ಮಧ್ಯೆ ಉಂಟಾಯಿತು. ಮೊಟ್ಟಮೊದಲನೆಯ ಬಾರಿಗೆ ಭಾರತವು ವಸಾಹತುಶಾಹಿಗೂ ಮತ್ತು ದೂರದೊಂದು ದೇಶದ ಆಳ್ವಿಕೆಗೂ ಒಳಗಾಯಿತು. ಭಾರತದ ಮೇಲೆ ದಾಳಿ ಮಾಡಿದಂಥವರು ಮತ್ತು ಭಾರತವನ್ನು ಗೆದ್ದವರು ಭಾರತವನ್ನು ತಮ್ಮ ಮನೆಯನ್ನಾಗಿ ಮಾಡಿಕೊಂಡರು. ಬೇರೆ ಕಡೆ ತಮ್ಮ ದೃಷ್ಟಿಹಾಯಿಸಲಿಲ್ಲ. ಪೂರ್ಣತಃ ಅವರು ಭಾರತೀಯರಾದರು. ಆನಂತರ ಭಾರತದಲ್ಲಿ ತನ್ನ ಬೇರುಗಳನ್ನು ಬಿಡಲಾಗದಿದ್ದ ಒಂದು ಹೊಸ ಪ್ರಕಾರದ ಐರೋಪ್ಯರ ದಾಳಿ ಸಂಭವಿಸಿತು. ಈ ಹೊಸ ದಾಳಿಕಾರರಿಗೂ ಮತ್ತು ದೇಶದ ಜನತೆಗೂ ಮಧ್ಯೆ ಅಭೇದ್ಯವಾದ ಗೋಡೆಯುಂಟಾಯಿತು. ಆ ಜನತೆ ಹಿಂದೂಗಳಾಗಿರಬಹುದು, ಮುಸ್ಲಿಮರಾಗಿರಬಹುದು ಅಥವಾ ಬೇರೆಯಾರೇ ಆಗಿರಬಹುದು.

ಆದಾಗ್ಯೂ ಪಾಶ್ಚಿಮಾತ್ಯರ ಪ್ರಗತಿಪರ ವಿಚಾರಗಳು ಮತ್ತು ಕೈಗಾರಿಕಾ ಬೆಳವಣಿಗೆಗಳು ಭಾರತದ ಮಾನಸವನ್ನು ಮತ್ತು ಜೀವನವನ್ನು ಪ್ರಭಾವಿತಗೊಳಿಸಲು ಪ್ರಾರಂಭಿಸಿದವು. ಹೊಸ ಬಗೆಯ ರಾಷ್ಟ್ರೀಯತೆ ನಿರ್ಮಾಣ ಗೊಂಡಿತು. ಈ ರಾಷ್ಟ್ರೀಯತೆ ನಿಸ್ಸಂಶಯುವಾಗಿ ವಸಾಹತುಶಾಹಿಗೆ ವಿರೋಧವಾಗಿತ್ತು, ಸ್ವಾತಂತ್ರ್ಯವನ್ನು ಬಯಸುತ್ತಿತ್ತು. ಈ ಸಮಯದಲ್ಲಿ ಸ್ವಾತಂತ್ರ್ಯದ ವಿಚಾರ ಸಹ ಬಹಳವಾಗಿ ಹೊಸ ಕೈಗಾರಿಕಾ ಸಂಸ್ಕೃತಿ, ಭಾಷೆ, ಸಾಹಿತ್ಯ ಮತ್ತು ಪಾಶ್ಚಿಮಾತ್ಯ ರೀತಿ ನೀತಿಗಳಿಂದ ಪ್ರಭಾವಿತಗೊಂಡಿತು. ಈ ಪ್ರಭಾವವು ಜನತೆಯ ಮೇಲ್ವರ್ಗದ ಜನರಿಗೆ ಸೀಮಿತಗೊಂಡಿತು. ಇತರ ಜನಸಮೂಹವು ಹೆಚ್ಚೆಚ್ಚು ಬಡತನದಲ್ಲಿ ಮುಳುಗುತ್ತಿತ್ತು. ಇಂಥ ಸಮಯದಲ್ಲಿ ರಾಜಾ ರಾಮ್ ಮೋಹನ್‌ರಾಯ್ ಬಂದರು. ಅವರು ಪುರಾತನ ಭಾರತ ಮತ್ತು ಆಧುನಿಕ ಪ್ರವೃತ್ತಿಗಳ ಮಧ್ಯೆ ಒಂದು ಬಗೆಯ ಸಮನ್ವಯತೆಯನ್ನು ಸಾಧಿಸಲು ಪ್ರಯತ್ನಿಸಿದರು. ವಿವೇಕಾನಂದರು ಪ್ರಾಚೀನ ಭಾರತದ ವಿಚಾರಗಳನ್ನು ಸಮರ್ಥವಾಗಿ ಹೊರತಂದರು ಮತ್ತು ಆ ವಿಚಾರಗಳಿಗೆ ಆಧುನಿಕತೆಯ ಪೋಷಾಕನ್ನು ಹಾಕಿದರು. ರಾಜಕೀಯ ಮತ್ತು ಸಾಂಸ್ಕೃತಿಕ ಚಳುವಳಿಗಳು ಬೆಳೆದು ಬಂದವು. ಅವು ಗಾಂಧಿ ಮತ್ತುರವೀಂದ್ರನಾಥ ಠಾಗೋರ್‌ರಂಥವರಲ್ಲಿ ಉತ್ತುಂಗತೆಯನ್ನು ಕಂಡವು. ಹೀಗೆ ಆಧುನಿಕ ಜೀವನಸತ್ವ ಮತ್ತು ವಿಚಾರ ಯಾವುದೇ ಒಂದು ನಿರ್ದಿಷ್ಟ ಸಿದ್ಧಾಂತವಾಗಿರದೆ ಅದು ತಾಂತ್ರಿಕತೆಯ ಮುನ್ನಡೆಯಾಗಿತ್ತು. ಎಲ್ಲಿ ತಾಂತ್ರಿಕತೆಯ ಬದಲಾವಣೆ ನಿಧಾನವಾಗಿದೆಯೋ ಅಂಥಲ್ಲಿ ಹಳೆಯ ರೀತಿ ನೀತಿಗಳೆ ಮುಂದುವರಿಯುತ್ತವೆ. ಅಭಿವೃದ್ಧಿಹೊಂದದೆ ಇರುವ ಹಾಗೂ ಹಿಂದುಳಿದ ಸಮುದಾಯವು ಪುರಾತನವಾದ ರೀತಿ ನೀತಿಗಳನ್ನೇ, ಸಾಮಾಜಿಕ ರಚನೆಯನ್ನೇ ಹೊಂದಿರುತ್ತದೆ. ಅವು ಆಧುನಿಕ ಯುಗದೊಂದಿಗೆ ಸೇರಿಕೊಳ್ಳಲು ಅವಕಾಶ ಕೊಡುವುದಿಲ್ಲ. ಆದರೆ ಜೀವನದ ನಿಜಸಂಗತಿಗಳನ್ನು ನಿರಾಕರಿಸಲಾಗದು. ಬದಲಾವಣೆ ಉಂಟಾಗಲೇಬೇಕು; ಅದರೊಂದಿಗೆ ಬೇರೆ ಪ್ರಕಾರದ ಪರಿಣಾಮಗಳೂ ಆಗಲೇ ಬೇಕು. ಕೆಲವೊಂದು ಸಲ ಆ ಬದಲಾವಣೆ ದಿಢೀರ್‌ನೆ ಆಗುತ್ತವೆ ಮತ್ತು

ತಲೆಕೆಳಗಾಗಿರುವಂತಿರುತ್ತವೆ. ಆದಾಗ್ಯೂ ಆ ಬದಲಾವಣೆಗಳು ನಿಧಾನವಾಗಿಯಾದರೂ ಬಂದೇ ಬರುತ್ತವೆ. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಹೊಸ ಆಸೆ, ಪ್ರೇರಣೆ, ಕಷ್ಟಗಳ ನಿವಾರಣೆ ಇತ್ಯಾದಿಗಳ ಮೂಲಕ ಜನತೆಯನ್ನು ಹೆಚ್ಚು ಪ್ರಯತ್ನಶೀಲರನ್ನಾಗಿ ಮಾಡುವುದರ ಪ್ರಯತ್ನದ ಮೇಲೆಯೇ ಉಳಿದುದೆಲ್ಲ ಅವಲಂಬಿಸಿದೆ. ವಿಶ್ವದ ಹಿಂದುಳಿದ ಕೆಲ ರಾಷ್ಟ್ರಗಳಲ್ಲಿ ಭಾರತ ಹೆಚ್ಚು ಮುಂದುವರೆದಿದೆ. ಕಳೆದ ಹಲವಾರು ವರ್ಷಗಳಿಂದೀಚೆಗೆ ಕೈಗಾರಿಕೀರಣಕ್ಕಾಗಿ ಅಗತ್ಯವಾದ ಅಡಿಪಾಯವನ್ನು ಹಾಕುವುದರಲ್ಲಿ ಖಚಿತವಾದ ಪ್ರಗತಿಯಾಗಿದೆ; ವ್ಯವಸಾಯದಲ್ಲಿ ಸುಧಾರಣೆಯಾಗಿದೆ. ಶಿಕ್ಷಣ ಮತ್ತು ಆರೋಗ್ಯದಲ್ಲಿ ಮುನ್ನಡೆ ಉಂಟಾಗಿದೆ. ಇದಕ್ಕೆ ಮುಖ್ಯ ಕಾರಣ ಸ್ವಾತಂತ್ರ್ಯವನ್ನು ತಂದುಕೊಟ್ಟಂಥ ರಾಷ್ಟ್ರೀಯ ಚಳುವಳಿಯಲ್ಲಿದ್ದ ಆದರ್ಶ ಮತ್ತು ಉದ್ದೇಶ ಮತ್ತು ಶಿಸ್ತುಬದ್ಧತೆ.

ಏಷ್ಯಾಖಂಡದಲ್ಲಿ ಈಗಲೂ ರಾಷ್ಟ್ರೀಯತೆ ಬಲವಾದ ಶಕ್ತಿಯಾಗಿದೆ. ಏಷ್ಯಾದಲ್ಲಿ ರಾಷ್ಟ್ರೀಯತೆಯ ಈ ಬೆಳವಣಿಗೆಗೆ ಇರುವ ಕಾರಣ ಸ್ಪಷ್ಟವಾಗಿಯೇ ಇದೆ. ಯುರೋಪಿನಲ್ಲಿಯೂ ರಾಷ್ಟ್ರೀಯತೆ ಹೆಚ್ಚುಹೆಚ್ಚಾಗಿ ಹೊರಹೊಮ್ಮುತ್ತಿದೆ. ಯಾವ ದೇಶಗಳು ಇಂದಿಗೂ ವಿದೇಶಿ ಆಳ್ವಿಕೆಗೆ ಒಳಪಟ್ಟಿವೆಯೋ ಅಲ್ಲೆಲ್ಲಾ ರಾಷ್ಟ್ರೀಯತೆಯ ಇಚ್ಛೆ ಸ್ವಾತಂತ್ರ್ಯಾಂದೋಲನದ ರೂಪ ಧರಿಸುತ್ತದೆ. ಯಾವ ದೇಶಗಳು ಸ್ವತಂತ್ರಗೊಂಡಿವೆಯೋ ಮತ್ತು ಬಲಿಷ್ಠವಾಗಿವೆಯೋ ಆ ದೇಶಗಳಲ್ಲಿ ರಾಷ್ಟ್ರೀಯತೆ ರಾಜ್ಯ ವಿಸ್ತರಣಾ ಮನೋಭಾವವನ್ನು ಪಡೆಯುತ್ತದೆ. ಆದರೆ ಈ ವಿಸ್ತರಣಾವಾದ ವಿರೋಧವನ್ನು ಎದುರಿಸಬೇಕಾಗುತ್ತದೆ. ನಾವು ಇಂದು ಯುರೋಪ್ ಮತ್ತು ಇತರೆಡೆಯಲ್ಲಿ ಎರಡು ವಿರೋಧಾತ್ಮಕ ಪ್ರಚೋದನೆಗಳು ಕೆಲಸ ಮಾಡುತ್ತಿರುವುದನ್ನು ಕಾಣುತ್ತೇವೆ. ಒಂದು ವಿಸ್ತೃತವಾದ ಸಂಘಟನೆಗೆ ಸಂಬಂಧಿಸಿದೆಯಾದರೆ ಇನ್ನೊಂದು ಕೇಂದ್ರಾಪಗಾಮಿಯಾದ ತುಮುಲ. ಕೇಂದ್ರಾಪಗಾಮಿಯಾದ ತಮುಲವು ಸಾಮಾನ್ಯವಾಗಿ ಪರಂಪಾರನುಗತ ರಾಷ್ಟ್ರೀಯತೆಯನ್ನೇ ಪ್ರತಿನಿಧಿಸುತ್ತದೆ. ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರದಲ್ಲಿ ಮತ್ತು ವಿಶೇಷವಾಗಿ ಸಂಪರ್ಕಕ್ಷೇತ್ರದಲ್ಲಿ ಉಂಟಾಗಿರುವ ಬೃಹತ್ ಅಭಿವೃದ್ಧಿಯು ವಿಸ್ತೃತ ಸಂಘಟನೆಗಾಗಿಯೇ ಒತ್ತಾಯಿಸುತ್ತದೆ. ಬೇರೆ ಎಲ್ಲ ಕ್ಷೇತ್ರಗಳಲ್ಲಿ ಸಂಭವಿಸುವಂತೆ ಈ ಕ್ಷೇತ್ರದಲ್ಲಿಯೂ ಆಧುನಿಕ ಜೀವನದ ಮೂಲಭೂತ ಸಂಗತಿಗಳಿಗೆ ಸಂಬಂಧಿಸಿದಂಥ ವಿಜ್ಞಾನವೇ ಅಂತಿಮವಾಗಿ ಗೆಲ್ಲುವುದು. ಯುದ್ಧದಲ್ಲಿ ಪರಿವರ್ತನೆಗೊಳ್ಳ ಬಹುದಾದ ರಾಷ್ಟ್ರೀಯತೆಯ ಸಂಘರ್ಷಗಳೆ ನಿಜವಾದ ಅಪಾಯಕಾರಿ ಸಂಗತಿಗಳಾಗಿವೆ. ವಿಶ್ವದ ಪ್ರಮುಖ ಸಿದ್ಧಾಂತಗಳಲ್ಲಿರುವ ಶೀತಲ ಸಮರವು ಈ ಅಪಾಯವನ್ನು ಹೆಚ್ಚಿಸುವ ಸಾಧ್ಯತೆಯಿದೆ. ಈ ಸಂಭವನೀಯ ಸೈದ್ಧಾಂತಿಕ ಸಂಘರ್ಷದ ಹಿಂದೆ ಬೃಹತ್ ದೇಶಗಳ ಮಧ್ಯದಲ್ಲಿ ರಾಜಕೀಯ ವಿದ್ವೇಷವಿದೆ. ಒಂದು ದೇಶ ಇನ್ನೊಂದು ದೇಶದ ಬಗ್ಗೆ ಭಯವನ್ನಿರಿಸಿಕೊಂಡಿದೆ. ಸೈದ್ಧಾಂತಿಕ ವಿಚಾರಗಳಿಗಿಂತ ಹೆಚ್ಚಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಮಾನವ ಜೀವನವನ್ನು

ಪರಿವರ್ತಿಸುವುದರ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ರಚನೆಗಳನ್ನೂ ಸತತವಾಗಿ ರೂಪಿಸುತ್ತಿವೆ. ಕ್ರಿಯೆಯ ಪ್ರಭಾವ ರಚನೆಯ ಮೇಲೆ ಇರುತ್ತದೆ. ಇದು ವಾಸ್ತುಶಿಲ್ಪದ ಕ್ಷೇತ್ರದಲ್ಲಿ ನಡೆಯುವಂಥದ್ದಾದರೂ ಅಂತಿಮವಾಗಿ ಇದು ಸಾಮಾಜಿಕ ರಚನೆಗಳಿಗೂ ಸಂಬಂಧಿಸಿದ್ದಾಗಿರುತ್ತದೆ. ವಿಜ್ಞಾನ ಮತ್ತು ತಂತಜ್ಞಾನ ಸತತ ಪರಿವರ್ತನಾಶೀಲ ಕ್ರಿಯೆಗಳು. ಆದ್ದರಿಂದ ಸಾಮಾಜಿಕ ರಚನೆ ಈ ಹೊಸ ಕ್ರಿಯೆಗಳೊಂದಿಗೆ ತನ್ನನ್ನು ತಾನು ಹೊಂದಿಸಿಕೊಳ್ಳಬೇಕಾಗುತ್ತದೆ. ವಯಸ್ಕ ಮತದಾನ ಮತ್ತು ಸಂಸದೀಯ ಸರ್ಕಾರವಿರುವಂಥ ಪ್ರಜಾಸತ್ತಾತ್ಮಕ ಸಮಾಜದಲ್ಲಿ ಈ ಬದಲಾವಣೆಗೆ ಅಗತ್ಯವಾಗಿರುವ ಮಾಧ್ಯಮಗಳು ಒದಗಿ ಬರುತ್ತವೆ. ಆದರೆ ಹಳೆಕಾಲದ ಬಲಿಷ್ಠ ರೀತಿ ನೀತಿ ಮತ್ತು ಪಟ್ಟಭದ್ರ ಹಿತಾಸಕ್ತಿ ಬದಲಾವಣೆಗಳನ್ನು ವಿರೋಧಿಸುತ್ತವೆ. ಪರಿಸ್ಥಿತಿವಶವಾಗಿ ಈ ಬದಲಾವಣೆ ಉಂಟಾಗುವವರೆಗೂ ಈ ವಿರೋಧ ಇದ್ದೇ ಇರುತ್ತದೆ. ಸಂಸ್ಥಾಪಿತಗೊಂಡ ಯಾವುದೇ ವ್ಯವಸ್ಥೆ ಯಾವಾಗಲೂ ಬದಲಾವಣೆಯನ್ನು ವಿರೋಧಿಸುತ್ತಲೇ ಇರುತ್ತದೆ. ಆ ಬದಲಾವಣೆ ಧಾರ್ಮಿಕ, ಆರ್ಥಿಕ ಅಥವಾ ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದ್ದಾಗಿರಬಹುದು.

ಬದಲಾಗುತ್ತಿರುವ ಸ್ಥಿತಿಗತಿಗಳೊಂದಿಗೆ ಸತತವಾಗಿ ಹೊಂದಿಕೆ ಮಾಡಿಕೊಳ್ಳುವುದೇ ಜೀವನ. ಪ್ರತಿಯೊಂದು ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ರಚನೆ ತನ್ನದೇ ಆದ ಸಿದ್ಧಾಂತ ಹೊಂದಿರುತ್ತದೆ. ಹಾಗೆಯೇ ಧರ್ಮಕ್ಕೂ ಒಂದು ಸಿದ್ಧಾಂತವಿರುತ್ತದೆ. ಈ ಸಿದ್ಧಾಂತ ಸಾಮಾನ್ಯ ಸ್ವರೂಪದ ನೈತಿಕ ಅಥವಾ ಆಧ್ಯಾತ್ಮಿಕ ಆಧಾರದ ಮೇಲೆ ಇರುತ್ತದೆ. ಹಳೇಕಾಲದ ಸಿದ್ಧಾಂತಗಳು ಕ್ರಮಶಃ ದುರ್ಬಲಗೊಳ್ಳುತ್ತವೆ. ಅವುಗಳ ಸ್ಥಾನವನ್ನು ಹೊಸ ಸಿದ್ಧಾಂತಗಳು ಆಕ್ರಮಿಸಿಕೊಳ್ಳುತ್ತವೆ. ಕಳೆದ ಅರ್ಧ ಶತಮಾನದಲ್ಲಿ ಸಂಭವಿಸಿದ ತೀವ್ರಸ್ವರೂಪದ ತಾಂತ್ರಿಕ ಬದಲಾವಣೆ ಸಾಮಾಜಿಕ ಪರಿವರ್ತನೆಯ ಅಗತ್ಯವನ್ನು ಹಿಂದೆಂದಿಗಿಂತಲೂ ಹೆಚ್ಚಿಸಿವೆ. ಆದರೆ ಈ ಪರಿವರ್ತನೆ ಸರಿಪ್ರಮಾಣದಲ್ಲಿಲ್ಲ. ಪ್ರಾಚೀನ ಕಾಲದಲ್ಲಿ ಜೀವನ ಸರಳವಾಗಿತ್ತು ಮತ್ತು ಪ್ರಕೃತಿಯೊಂದಿಗೆ ಹೆಚ್ಚು ನಿಕಟತೆ ಹೊಂದಿತ್ತು. ಆಲೋಚಿಸಲು ಮತ್ತು ಧ್ಯಾನಾಸಕ್ತರಾಗಲು ಸಾಕಷ್ಟು ಸಮಯವಿತ್ತು. ಈಗ ಜೀವನ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿದೆ. ಶಾಂತ ಚಿತ್ತತೆಯ ಆಲೋಚನೆ ಕಡಿಮೆಯಾಗುತ್ತಿದೆ. ಯಾವಾಗ ಬಿಡುವಿದೆಯೋ ಆಗ ಆ ಬಿಡುವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದು ತಿಳಿದಿರುವುದಿಲ್ಲ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಿಡುವಿನ ಸಮಯದ ಉಪಯೋಗದ ಸಮಸ್ಯೆ ಕ್ರಮೇಣ ದೊಡ್ಡ ವಿಷಯವಾಗುತ್ತಿದೆ. ಆ ಸಮಸ್ಯೆ ಸಧ್ಯಕ್ಕಂತೂ ಭಾರತವನ್ನು ಕಾಡುವುದಿಲ್ಲ ಮತ್ತು ಇನ್ನು ಕೆಲವಾರು ವರ್ಷಗಳವರೆಗೂ ಕಾಡಲಾರದು. ಪ್ರಕೃತಿಯಿಂದ ದೂರವಾಗಿರುವಂಥ ಮತ್ತು ಯಂತ್ರಗಳ ಮೇಲೆ ಹೆಚ್ಚು ಹೆಚ್ಚಾಗಿ ಅವಲಂಬಿಸಿರುವಂಥ ಜೀವನ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ; ಹಾಗೂ ಅದರ ಕ್ರಿಯಾಶೀಲತೆ ಕಳಚಿ ಹೋಗುತ್ತದೆ, ನೈತಿಕ ಮತ್ತು ಆಧ್ಯಾತ್ಮಿಕ ಸಿದ್ಧಾಂತಗಳು

ಭಗ್ನಗೊಳ್ಳುತ್ತವೆ; ಕೊನೆಯಲ್ಲಿ ಒಂದು ಪ್ರಕಾರದ ಭ್ರಮೆ ಹುಟ್ಟಿಕೊಳ್ಳುತ್ತದೆ. ಅದರ ಫಲವಾಗಿ ನಮ್ಮ ನಾಗರಿಕತೆಯಲ್ಲಿಯೆ ಏನೋ ದೋಷವಿದೆಯೆಂಬ ಭಾವನೆ ಹುಟ್ಟುತ್ತದೆ. ಕೆಲವರು ಪ್ರಾಚೀನ ಕಾಲದ ರೀತಿಯಲ್ಲಿದ್ದಂತೆ ಪುನಃ ಪ್ರಕೃತಿಯ ಕಡೆಗೆ ಮತ್ತು ಸರಳ ಜೀವನದ ಕಡೆಗೆ ಹೋಗಬೇಕೆಂದು ಹೇಳುತ್ತಾರೆ. ಪ್ರಾಚೀನಕಾಲದ ಆ ಜೀವನದ ವಿಧಾನದಲ್ಲಿ ಎಂಥದೇ ಸದ್ಗುಣವಿದ್ದಿದ್ದರೂ ಸಹ ಅಂಥ ಜೀವನ ಪದ್ಧತಿಗೆ ಈಗ ನಾವು ಹೋಗುವುದು ಸಾಧ್ಯವೇ ಇಲ್ಲ. ಪ್ರಪಂಚ ಬದಲಾಯಿಸಿದೆ. ಒಬ್ಬ ವ್ಯಕ್ತಿ ತ್ಯಾಗಮಯ ಜೀವನ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದೇ ಹೊರತು, ಇಡೀ ಸಮಾಜವೇ ಆ ರೀತಿ ಮಾಡಲಾರದು. ಏಕೆಂದರೆ ಸಮಾಜವು ಜೀವನದ ಎಲ್ಲಾ ಪ್ರಕಾರದ ಸಮಸ್ಯೆಗಳನ್ನೂ, ಕಷ್ಟಗಳನ್ನೂ ಅಂಗೀಕರಿಸುತ್ತಾ ಅವುಗಳಿಂದ ಹೆಚ್ಚು ಪ್ರಯೋಜನ ಪಡೆಯುವಂತೆ ಪ್ರಯತ್ನಿಸಬೇಕಾಗುತ್ತದೆ. ಹಾಗೇನಾದರೂ ಸಮಾಜ ಮಾಡದೇ ಇದ್ದಲ್ಲಿ ಅದು ವಿನಾಶಗೊಳ್ಳುವುದು. ವಿಜ್ಞಾನ ಮತ್ತು ತಾಂತ್ರಿಕತೆಯ ಮುನ್ನಡೆ ವಿಶ್ವದ ಬಹಳಷ್ಟು ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಬಲ್ಲವಾಗಿವೆ. ಅದರಲ್ಲಿಯೂ ಮುಖ್ಯವಾಗಿ ಜೀವನದ ಪ್ರಾಥಮಿಕ ಅಗತ್ಯಗಳನ್ನು, ಪ್ರಪಂಚದಾದ್ಯಂತ ಎಲ್ಲರಿಗೂ ಒದಗಿಸಬಲ್ಲವಾಗಿವೆ. ಉನ್ನತ ಜೀವನಮಟ್ಟದ ಸಾಧನೆಯ ಮಾರ್ಗಗಳ ಭರವಸೆಯನ್ನು ಅವು ಕೊಡುವುದರ ಜೊತೆಗೆ ಸಾಂಸ್ಕೃತಿಕ ಅಭಿವೃದ್ಧಿಯ ಮಾರ್ಗಗಳನ್ನೂ ತೆರೆದಿಡುತ್ತವೆ. ಇಂದು ಪ್ರಚಲಿತವಿರುವ ಕಲ್ಯಾಣಕಾರಿ ಸಮಾಜ, ವರ್ಗರಹಿತ ಸಮಾಜ ಇವು ಕೇವಲ ಸಮಾಜವಾದದ ಆದರ್ಶಗಳಾಗಿ ಉಳಿದಿಲ್ಲ. ಆ ಆದರ್ಶಗಳನ್ನು ಬಂಡವಾಳಶಾಹಿ ದೇಶಗಳೂ ಅಂಗೀಕರಿಸಿವೆ. ಆ ಆದರ್ಶಗಳ ಅನುಷ್ಠಾನದ ಕ್ರಮ ಬೇರೆಬೇರೆಯಾಗಿರಬಹುದು. ಆದಾಗ್ಯೂ ಮೂಲಭೂತ ಆದರ್ಶಗಳು ಪರಸ್ಪರ ಹತ್ತಿರ ಬರುತ್ತಿವೆ. ಈ ಮಾರ್ಗಗಳು ಕೇವಲ ತರ್ಕಸಿದ್ಧಾಂತಗಳನ್ನು ಅವಲಂಬಿಸಿರದೆ ಆಯಾ ದೇಶದ ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಹಿನ್ನಲೆಯನ್ನು ಅವಲಂಬಿಸಿವೆ. ಯಾವುದೇ ನಿರ್ದಿಷ್ಟ ಬದಲಾವಣೆಯನ್ನು ಸಮಾಜದ ಮೇಲೆ ಹೇರಲು ಸಾಧ್ಯವಿಲ್ಲ ಅದು ತಾನಾಗಿಯೇ ಬೆಳೆಯಬೇಕಾಗುತ್ತದೆ. ಪ್ರಾಚೀನ ನಾಗರಿಕತೆಯನ್ನು ಹೊಂದಿರುವ ದೇಶದ ಅಸ್ತಿತ್ವದ ಮೂಲಗಳು ಗತಕಾಲವೆಂಬ ಭೂಮಿಯಲ್ಲಿ ಆಳವಾಗಿ ಹೋಗಿರುತ್ತವೆ. ಬೇರುಗಳಿಗೆ ಆಘಾತ ಮಾಡದೆ ಅವನ್ನು ಹೊರೆಗೆಳೆಯಲು ಸಾಧ್ಯವಿಲ್ಲ. ಇದರ ಅರ್ಥ ಅಪಾಯಕಾರಿಯಾದ ಅಥವಾ ಅಪ್ರಸ್ತುತವಾದ ಸ್ವರೂಪದಲ್ಲಿರುವ ಕಳೆಯನ್ನು ತೆಗೆದುಹಾಕಬಾರದೆಂದಲ್ಲ. ಸ್ವತಃ ಪ್ರಕೃತಿಯೆ ಸಮತೋಲನವನ್ನು ಕಾಯ್ದುಕೊಂಡು ಬರುತ್ತಿರುತ್ತದೆ. ಅದನ್ನು ಏಕಾಏಕಿಯಾಗಿ ಮುರಿಯುವುದು ಸಾಧ್ಯವಿಲ್ಲ. ಹಾಗೇನಾದರೂ ಮಾಡಲು ಪ್ರಯತ್ನಿಸಿದಲ್ಲಿ ಅನಪೇಕ್ಷಣೀಯ ಪರಿಣಾಮಗಳು ಉಂಟಾಗುವವು. ಇಂಥದೇ ಸ್ಥಿತಿ ಒಂದು ಸಮಾಜ ಅಥವಾ ಒಂದು ದೇಶದಲ್ಲಿಯೂ ಸಂಭವಿಸುತ್ತದೆ. ಆದ್ದರಿಂದ ಹಳೆ ಕಾಲದ ಜೀವನ ವಿಧಾನಗಳನ್ನು ಮಾರ್ಪಡಿಸುವುದು ಸುಲಭವೂ

ಅಲ್ಲ, ಬಯಸುವಂಥದೂ ಅಲ್ಲ. ಯಾವುದೇ ಸಮಸ್ಯೆಯನ್ನು ಪಲ್ಲಟಗೊಳಿಸುವ ಮಾರ್ಗದ ಮೂಲಕ ಬಿಡಿಸಲು ಪ್ರಯತ್ನಿಸಿದಲ್ಲಿ ಇನ್ನೂ ಹೆಚ್ಚು ಗಂಭೀರವಾದ ಮತ್ತು ಕಷ್ಟಕರವಾದ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇದು ಬಾಹ್ಯ ವಿಷಯದ ಸಂಗತಿಯಾಗಿದ್ದರೆ ಇಂದಿನ ಮನುಷ್ಯನ ಮನಸ್ಸು, ಭಾವನೆ ಮತ್ತು ಚೈತನ್ಯದಲ್ಲಿ ಖಂಡಿತವಾಗಿಯೂ ದೊಡ್ಡ ಪ್ರಮಾಣದ ಬದಲಾವಣೆಗಳು ಸಂಭವಿಸಬಲ್ಲವು. ಮಾನವ ಇತಿಹಾಸದಲ್ಲಿ ಎಂದೂ ಇಲ್ಲದೆ ಇದ್ದಂಥ ಬದಲಾವಣೆಯೆಂಬ ಶಾಶ್ವತ ಜೊತೆಗಾರನ ಜೊತೆ ಇಂದಿನ ಮಾನವ ಸಹ ಜಿವನ ನಡೆಸಬೇಕಾಗುತ್ತದೆ. ಈ ಬದಲಾವಣೆಯೆಂಬುದು ಅವನ ಎಲ್ಲ ಚಟುವಟಿಕೆಗಳನ್ನೂ, ಸಂಸ್ಥೆಗಳನ್ನೂ ಆವರಿಸಿರುತ್ತದೆ. ಈ ಬದಲಾವಣೆಗಳು ಎಷ್ಟು ವೇಗವಾಗಿ ಸಂಭವಿಸುತ್ತಿವೆಯೆಂದರೆ ಅವನು ಅವುಗಳೊಂದಿಗೆ ಹೆಜ್ಜೆ ಇಡಲು ಅಸಮರ್ಥನಾಗಿದ್ದಾನೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡರೂ ಸಹ ಅವುಗಳನ್ನು ಅವನು ಕಿಂಚಿತ್ತಾಗಿ ಮಾತ್ರ ಅರ್ಥೈಸಿಕೊಳ್ಳಬಲ್ಲ! ಶಿಕ್ಷಣ ಓರ್ವ ಪರಿಪೂರ್ಣ ಮಾನವನನ್ನು ತಯಾರಿಸಬಲ್ಲದೆಂದು ತಿಳಿಯಲಾಗುತ್ತದೆ; ಸಮಾಜದಲ್ಲಿ ಉಪಯುಕ್ತವಾದ ಕೆಲಸಗಳನ್ನು ಮಾಡಲು ಅವನನ್ನು ಸಿದ್ಧಗೊಳಿಸುತ್ತದೆಂದೂ ಭಾವಿಸಲಾಗುತ್ತದೆ. ಸಾಮೂಹಿಕ ಜೀವನದಲ್ಲಿ ಭಾಗಿಯಾಗುವಂತೆಯೂ ಮಾಡುತ್ತದೆಂದೂ ಭಾವಿಸಲಾಗುತ್ತದೆ ಆದರೆ ಸಮಾಜವೇ ದಿನದಿಂದ ದಿನಕ್ಕೆ ಬದಲಾಯಿಸುತ್ತಿದ್ದರೆ, ಯಾವ ರೀತಿ ಮನುಷ್ಯನನ್ನು ಸಿದ್ಧಗೊಳಿಸಬೇಕು ಮತ್ತು ಏನನ್ನು ಗುರಿಯಾಗಿಟ್ಟುಕೊಳ್ಳಬೇಕೆಂಬುದನ್ನು ಅರಿತುಕೊಳ್ಳುವುದೇ ಕಷ್ಟವಾಗುತ್ತದೆ. ಅತ್ಯಂತ ಉನ್ನತವಾದ ತಾಂತ್ರಿಕ ನಾಗರಿಕತೆ, ಹಳೆಯ ರೀತಿಯ ಸಾಮಾಜಿಕ ಜೀವನ ಹಾಗೂ ಇವೆರಡರಲ್ಲಿ ಅಂತರ್ಗತವಾಗಿರುವ ಸಿದ್ಧಾಂತ ಇವುಗಳ ಮಧ್ಯೆ ಸಮನ್ವಯತೆಯ ಅಭಾವವಿದೆ. ಪ್ರಕೃತಿಯೊಂದಿಗಿನ ಮಾನವ ಸಂಬಂಧವೂ ಬದಲಾವಣೆಗೊಳ್ಳುತ್ತಿರುತ್ತದೆ. ಅಷ್ಟೆ ಅಲ್ಲ, ತನ್ನಲ್ಲಿಯೆ ಇರುವ ವ್ಯಕ್ತಿತ್ವದೊಂದಿಗಿನ ಮನುಷ್ಯನ ಸಂಬಂಧವು ಸಹ ಬದಲಾವಣೆಗೊಳ್ಳುತ್ತಿರುತ್ತದೆ. ಯಾಂತ್ರೀಕೃತ ಸಮಾಜದಲ್ಲಿ ಮಾನವನ ವ್ಯಕ್ತಿತ್ವದ ಮೌಲ್ಯ ಕುಂಠಿತಗೊಳ್ಳುತ್ತದೆ. ಜನಸಾಗರದಲ್ಲಿ ಮನುಷ್ಯ ತನ್ನನ್ನು ಕಳೆದುಕೊಳ್ಳುತ್ತಾನೆ. ಸಂಕೀರ್ಣ ವ್ಯವಸ್ಥೆಯಲ್ಲಿ ಅಂಶಮಾತ್ರವಾಗುತ್ತಾನೆ. ಆ ಸಂಕೀರ್ಣವ್ಯವಸ್ಥೆಯು ಸದಾ ಕಾಲ ಇಡೀ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಾಗಿ ಪ್ರಯತ್ನಿಸುತ್ತಿರುತ್ತದೆ.

ನಮ್ಮಲ್ಲಿ ಅನೇಕರು ಅಭಿವೃದ್ಧಿ ಮತ್ತು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಬಹಳ ಮಹತ್ವವನ್ನು ಕೊಡುತ್ತಾರೆ. ಸೈದ್ಧಾಂತಿಕ ಹಿನ್ನಲೆಗಳು ಈ ಸಂಬಂಧದಲ್ಲಿ ಕೆಲವೊಂದು ಸಲ ಸಹಾಯಕವಾಗಿರುತ್ತವೆ ಇಲ್ಲವೇ ಅಡಚಣೆಯಾಗಿರುತ್ತವೆ. ಆದರೆ ಓರ್ವ ವ್ಯಕ್ತಿಯ ವ್ಯಕ್ತಿತ್ವದ ಮೌಲ್ಯವನ್ನು ಕುಂಠಿತಗೊಳಿಸುವ ಅತ್ಯಂತ ತೀವ್ರತಮವಾದ ಸಂಗತಿ ಯಾಂತ್ರಿಕತೆ ಮತ್ತು ಸ್ವಯಂಚಾಲಕತೆ. ಇವುಗಳಲ್ಲಿ ಆಗುತ್ತಿರುವ ತೀವ್ರತಮವಾದ ತಾಂತ್ರಿಕ ಬದಲಾವಣೆಗಳ ಪರಿಣಾಮವನ್ನು ನಾವು ಇಂದು

ಕಾಣುತ್ತಿದ್ದೇವೆ. ಮುಖ್ಯವಾಗಿ ಯುವಕರು ಮತ್ತು ಹಿರಿಯರ ಮಧ್ಯೆ ಇರುವ ವ್ಯತ್ಯಾಸ ತಂದೆ ತಾಯಿಗಳನ್ನು, ಶಿಕ್ಷಣ ತಜ್ಞರನ್ನು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ತೊಂದರೆಗೊಳಗಾಗಿಸಿದೆ. ಹಿರಿಯರ ವರ್ತನಾರೀತಿ ಈಗ ಸ್ವೀಕೃತವಾಗುತ್ತಿಲ್ಲ. ಹಳೆಯ ರೀತಿಯ ನೈತಿಕ ಮೌಲ್ಯಗಳು ಸಹ ನಿರಾಕರಿಸಲ್ಪಡುತ್ತಿವೆ. ಉದ್ರಿಕ್ತ ಸಂದರ್ಭಗಳಲ್ಲಿ ಅಪರಾಧೀಕರಣ, ಸುರಪಾನ, ವಿಧ್ವಂಸಕೃತ್ಯ, ಕಾಮ ಪ್ರಚೋದನೆ ಇತ್ಯಾದಿಗಳಿಗೆ ಶರಣಾಗುವ ಪ್ರವೃತ್ತಿಯಿದೆ ಅಲ್ಲದೆ, ಜೀವನ ಮತ್ತು ಕಾಯಕದ ಬಗ್ಗೆ ತಿರಸ್ಕಾರ ಹಾಗೂ ನಕಾರಾತ್ಮಕ ಮನೋವೃತ್ತಿಯನ್ನೂ ಬೆಳಸಿಕೊಳ್ಳಲಾಗುತ್ತದೆ. ಭರವಸೆಯಿಲ್ಲದ ಹಾಗೂ ಸತತ ಬದಲಾವಣೆಯ ಜಗತ್ತಿನಲ್ಲಿ ಭೋಗಜೀವನ ತತ್ವಗಳ ಕಡೆಗೇ ವಿಶೇಷ ಆಕರ್ಷಣೆ ಇರುತ್ತದೆ. ಇದರಿಂದಾಗಿ ರಾಷ್ಟ್ರೀಯ ಸಂಸ್ಕೃತಿ, ಪರಂಪರೆಗೆ ಆಪತ್ತು ಕಾದಿರುತ್ತದೆ ಹಾಗೂ ಸಾಮಾಜಿಕ ವಿಘಟನೆ ಖಚಿತವಾಗುತ್ತದೆ.

ಭಾರತ ಹಾಗೂ ವಿಶ್ವದಲ್ಲಿಯ ಘಟನೆಗಳ ಬಗ್ಗೆ ಪ್ರತಿಕ್ರಿಯೆ ನಿರಾಶದಾಯಕವಾಗಿಲ್ಲ. ವಿಶ್ಲೇಷಿಸಲಾಗದ ಅಥವಾ ವಿವರಿಸಲಾಗದ ಯಾವುದೋ ಒಂದು ಬಗೆಯ ನಂಬಿಕೆ ನನ್ನಲ್ಲಿ ಆಸೆಯನ್ನೂ, ಭರವಸೆಯನ್ನೂ ಉಂಟುಮಾಡುತ್ತದೆ. ಬಹುಶಃ ಇದಕ್ಕೆ ಕಾರಣ ನನ್ನ ಅದೃಷ್ಟವು ನನ್ನೊಂದಿಗೆ ಇದ್ದುದು ಬಹಳವಾಗಿ ಕಾರಣವಾಗಿರಬಹುದು. ಅತ್ಯಂತ ದೊಡ್ಡ ಅದೃಷ್ಟ ನಾನು ಭಾರತೀಯರಿಂದ ಪಡೆದ ಅದ್ಭುತ ಪ್ರೇಮ. ವಿದೇಶಕ್ಕೆ ಹೋದಾಗಲೂ ಸ್ನೇಹ ಮತ್ತು ಹೃದಯಸ್ಪರ್ಶಿ ಸ್ವಾಗತ ನನಗೆ ದೊರೆತಿದೆ. ಭಾರತದ ಜನತೆಯ ಬಗ್ಗೆ ಬಹಳ ವಾತ್ಸಲ್ಯ ಮತ್ತು ವಿಶ್ವಾಸವನ್ನು ಬೆಳಸಿಕೊಂಡಿದ್ದೇನೆ. ಬೇರೆಕಡೆಯಲ್ಲಿರುವ ಜನರ ಬಗ್ಗೆಯೂ ಗೌರವ ಮತ್ತು ಪ್ರೀತಿಯನ್ನು ಹೊಂದಿದ್ದೇನೆ. ಮನುಷ್ಯ ಯಾವುದನ್ನು ಕೊಡುತ್ತಾನೋ ಅದನ್ನೆ ಹಿಂದಿರುಗಿ ಪಡೆಯುತ್ತಾನೆಂಬುದಾಗಿ ನಂಬಿದ್ದೇನೆ. ಯಾರಾದರೂ ವಾತ್ಸಲ್ಯವನ್ನು ಕೊಟ್ಟರೆ ದೊಡ್ಡ ಪ್ರಮಾಣದಲ್ಲಿ ಅದು ಕೊಟ್ಟಂಥವರಿಗೆ ಹಿಂದಿರುಗಿ ಬರುತ್ತದೆ. ಒಂದು ವೇಳೆ ದ್ವೇಷವಾಗಿದ್ದರೆ ಅದನ್ನೇ ಹಿಂದಿರುಗಿ ಪಡೆಯುತ್ತೇವೆ. ಎಲ್ಲೆಡೆ ಜನರು ಶಾಂತಿ, ಸ್ನೇಹ, ಸಹಕಾರಕ್ಕಾಗಿ ಹಾತೊರೆಯುತ್ತಾರೆ. ಅಂದಮೇಲೆ ಸಂಘರ್ಷದ ಘಟನೆಗಳನ್ನು ಸಹಕಾರದ ಸಂದರ್ಭಗಳನ್ನಾಗಿ ಪರಿವರ್ತಿಸಲು ಸಾಧ್ಯವಾಗಬೇಕು. ನನ್ನ ಅಭಿಪ್ರಾಯದಲ್ಲಿ ಭಯ ಅತ್ಯಂತ ದೊಡ್ಡ ಕೆಡುಕಿನ ಸಂಗತಿಯಾಗಿದೆ. ಏಕೆಂದರೆ ಭಯುವೇ ಸಂಘರ್ಷ ಮತ್ತು ಹಿಂಸೆಯ ತಾಯಿಯಾಗಿದೆ. ಹಿಂಸೆ ಭಯದ ಪ್ರತಿಕ್ರಿಯೆಯಾಗಿದೆ. ಅದೇ ರೀತಿ ಅಸತ್ಯ. ನಮ್ಮ ಪ್ರಾಚೀನ ಸಾಹಿತ್ಯದ ಮೇರೆಗೆ ಬೇರೆಯವರಿಗೆ ಕೊಡಬಹುದಾದ ಉತ್ಕೃಷ್ಟ ಕಾಣಿಕೆ ಎಂದರೆ ನಿರ್ಭಯತೆ. ಭಯದಿಂದ ಮುಕ್ತನಾದ ಮನುಷ್ಯ ಮಾತ್ರ ವಿಷಯಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಬಲ್ಲ. ಮನಸ್ಸು ಮತ್ತು ಕೃತಿಗಳಲ್ಲಿ ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳಬಲ್ಲ. ಇಂದು ವಿಶ್ವವನ್ನು ಭಯ ಆವರಿಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಅತ್ಯಂತ ದೊಡ್ಡ ಹಾಗೂ ಬಲಿಷ್ಟ ರಾಷ್ಟ್ರಗಳು ಕೂಡ ಭಯದಿಂದ

ಪೀಡಿತವಾಗಿವೆ. ಐಶ್ವರ್ಯ ಮತ್ತು ಅಧಿಕಾರ ಭಯವನ್ನು ಕಡಿಮೆಮಾಡುವ ಬದಲು ವಸ್ತುತಃ ಭಯವನ್ನು ಹೆಚ್ಚಿಸುತ್ತವೆ. ನಮ್ಮಲ್ಲಿ ಸನ್ಯಾಸಿಗಳು ಮತ್ತು ಮಹಾತ್ಮರ ಹೊರತಾಗಿ ಯಾರೂ ಸಂಪೂರ್ಣವಾಗಿ ನಿರ್ಭಯರಾಗಿರಲು ಸಾಧ್ಯವಿಲ್ಲ. ಆದರೂ ಆ ಆದರ್ಶವನ್ನು ನಮ್ಮ ಮುಂದಿಟ್ಟುಕೊಳ್ಳ ಬಹುದು ಹಾಗೂ ಅದನ್ನು ಸಾಧಿಸಲು ಪ್ರಯತ್ನಿಸಬಹುದು. ನಮ್ಮ ಜನರಲ್ಲಿಯ ಭಯದ ಮನೋಭಾವನೆಯನ್ನು ಕಡಿಮೆ ಮಾಡಿದುದೇ ಗಾಂಧೀಯವರ ಶ್ರೇಷ್ಠ ಕೊಡುಗೆಯಾಗಿತ್ತು. ನಿರ್ಭಯತೆಯು ದಯೆ ಮತ್ತು ಸಹನೆಗೆ ದಾರಿ ಮಾಡಿಕೊಡುತ್ತದೆ. ನಾವು ಬುದ್ಧನ ಬಗ್ಗೆ ಯೋಚನೆ ಮಾಡಿದಾಗ ಅವನು ಬೋಧಿಸಿದ ದಯಾತತ್ವ ನಮ್ಮನ್ನು ಆವರಿಸಿಕೊಳ್ಳುತ್ತದೆ. ಅಶೋಕನನ್ನು ಜ್ಞಾಪಿಸಿಕೊಂಡಾಗ ಅವನ ಅದ್ಭುತ ಸಹನಾಶಕ್ತಿ ನಮ್ಮನ್ನು ನಮ್ಮ ಜನಾಂಗ, ಧರ್ಮ, ಜಾತಿ, ವರ್ಗ ಇತ್ಯಾದಿ ಸಂಕುಚಿತತೆಗಳಿಂದ ಹೊರಕ್ಕೆಳೆಯುತ್ತದೆ. ಘರ್ಷಣೆಗಳನ್ನು ನಿರಾಕರಿಸುವುದಾಗಲೀ ಅವುಗಳನ್ನು ಮರೆಮಾಚುವುದಾಗಲೀ ಮೂರ್ಖತನವೆಂದೆನಿಸಿಕೊಳ್ಳುತ್ತದೆ. ಆದರೆ ಅವುಗಳತ್ತ ನಾವು ಸಂಘರ್ಷದ ದಾರಿಯಲ್ಲೇ ಸಾಗದೆ ಶಾಂತಿ ಮಾರ್ಗದಲ್ಲಿ ಸಾಗುತ್ತ ಅವುಗಳನ್ನು ಬಗೆಹರಿಸಬಹುದು.

ಅಂತರರಾಷ್ಟ್ರೀಯವಾಗಿ ಇಂದಿನ ಪ್ರಧಾನ ಪ್ರಶ್ನೆ ವಿಶ್ವಶಾಂತಿ. ಇದರ ಅರ್ಥ ನಮ್ಮನ್ನು ಬಾಧಿಸುತ್ತಿರುವ ಎಲ್ಲ ದೊಡ್ಡ ಸಮಸ್ಯೆ ಮತ್ತು ವಿವಾದಗಳನ್ನು ಶಾಂತಿಯಿಂದ ಬಗೆಹರಿಸಿ ಕೊಳ್ಳ ಬೇಕೆಂಬುದೇ ಆಗಿದೆ. ಯಾವ ರೀತಿ ಪರಿಹಾರ ದೊರೆಯುತ್ತದೆ ಎಂಬುದನ್ನು ನಾನು ಹೇಳಲಾರೆ. ಆದರೆ ನಾವು ಯಾವ ಸಾಧನಗಳನ್ನು ಉಪಯೋಗಿಸುತ್ತೇವೆ ಮತ್ತು ಮಾರ್ಗವನ್ನು ತುಳಿಯುತ್ತೇವೆ ಎಂಬುದರ ಬಗ್ಗೆ ನಮ್ಮ ಮನಸ್ಸಿನಲ್ಲಿ ಸ್ಪಷ್ಟತೆ ಇರಬೇಕು. ಈ ಎಲ್ಲ ಸಮಸ್ಯೆಗಳಿಗೆ ಪೂರ್ಣನಾಶದತ್ತ ಒಯ್ಯುವ ಯುದ್ಧ ಮತ್ತು ಶಾಂತಿಪೂರ್ಣ ಪರಿಹಾರ ಈ ಎರಡು ಮಾರ್ಗಗಳಲ್ಲಿ ಯಾವ ಮಾರ್ಗದ ಆಯ್ಕೆ ನಮ್ಮ ಮುಂದೆ ಇದೆ ಎಂದು ಕೇಳಲಾಗುತ್ತದೆ. ಈ ಎರಡೇ ಮಾರ್ಗಗಳು ನಮ್ಮ ಮುಂದಿರುವ ಆಯ್ಕೆಗಳಾದರೆ ನಮ್ಮ ಆಯ್ಕೆ ಯಾವುದೆಂಬುದು ಸ್ಪಷ್ಟವಾಗಿದೆ. ಅದನ್ನು ಆಯ್ಕೆ ಮಾಡಿಕೊಂಡಾದ ನಂತರ ವಿಶ್ವದ ಆತಂಕವನ್ನು ಹೆಚ್ಚು ಮಾಡುವ ಪ್ರತಿಯೊಂದು ಪರಿಸ್ಥಿತಿಯನ್ನೂ ತಪ್ಪಿಸಬೇಕು. ಯುದ್ಧವನ್ನು ಪೂರ್ಣವಾಗಿ ತಪ್ಪಿಸಬೇಕೆಂಬ ದೃಢ ತೀರ್ಮಾನಕ್ಕೆ ಬರಬೇಕು. ಏಕೆಂದರೆ ಯುದ್ಧವು ಜಯವನ್ನು ತಂದುಕೊಡುವ ವಚನವನ್ನು ಕೊಡುವುದಿರಲಿ ಜಯದ ಫಲಗಳ ಆಶ್ವಾಸನೆಯನ್ನೂ ಕೊಡಲಾರದು. ಆದ್ದರಿಂದ ಯುದ್ಧದ ಆತಂಕದಲ್ಲಿದ್ದುಕೊಂಡು ಉತ್ತರಕುಮಾರನ ಪೌರುಷತ್ವವನ್ನು ತೋರಿಸುವುದೆಂದರೆ ಬುದ್ಧಿಮತ್ತತೆಯ ಅಭಾವವೇ ಆಗಿದೆ. ನಾವು ಪರಸ್ಪರ ಭಿನ್ನಾಭಿಪ್ರಾಯ ಹೊಂದಿದ್ದರೂ ಸಹ ಕೋಪೋದ್ರಿಕ್ತವಾದ ಟೀಕೆಗಳಿಂದಲೂ, ಬೇರೆಯವರನ್ನು ಅವಹೇಳಿಸುವ ವರ್ತನೆಗಳಿಂದಲೂ ದೂರವಿರಬೇಕು.ವಿಶ್ವದ ಯಾವುದೇ ಒಂದು ಭಾಗ ಕೆಟ್ಟದುದಾಗಿದೆ ಎಂದೂ ಅಥವಾ ದುಷ್ಟತನದಿಂದ ಕೂಡಿದುದಾಗಿದೆಯೆಂದೂ ಯಾವುದೇ ಒಂದು ಜನಸಮೂಹ

ಹೇಳುವುದು ಮೂರ್ಖತನವಾಗುತ್ತದೆ. ಬಂಡವಾಳಶಾಹಿ ವಿಶ್ವವನ್ನಾಗಲಿ ಅಥವಾ ಸಾಮ್ಯವಾದಿ ವಿಶ್ವವನ್ನಾಗಲಿ ಟೀಕಿಸುವುದು ಸುಲಭ. ಆದರೆ ಅವು ತಮ್ಮೆಲ್ಲ ವಿಫಲತೆಗಳ ಮಧ್ಯೆಯೂ ಅನೇಕ ಗುಣವಿಶೇಷಗಳನ್ನು ಹೊಂದಿವೆ. ತಮ್ಮಲ್ಲಿ ವೈರುಧ್ಯಗಳಿದ್ದಾಗ್ಯೂ ಅವು ಒಂದೇ ದಿಕ್ಕಿನತ್ತ ಸಾಗುವ ಮನೋವೃತ್ತಿಯನ್ನಿರಿಸಿಕೊಂಡಿವೆ. ಅವೆರಡೂ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಾಗಿರುವ ಪ್ರಗತಿಯಿಂದ ಪ್ರಭಾವಿತಗೊಂಡಿವೆ. ವಿಶ್ವ ಯಾವ ಸ್ವರೂಪದಲ್ಲಿ ಇದೆಯೋ ಅದೇ ರೀತಿಯಲ್ಲಿ ಒಪ್ಪಿಕೊಳ್ಳುವುದನ್ನು ಬಿಟ್ಟರೆ ಇನ್ನು ಬೇರಾವ ದಾರಿಯಿಲ್ಲ. ಪರಸ್ಪರರೊಂದಿಗೆ ಸಹಕರಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು. ಹಳೆಯ ಸಂಕುಚಿತ ಧರ್ಮಗಳು ರಕ್ತಪಾತಯುಕ್ತ ಯುದ್ಧಾನಂತರ ಮುಕ್ತಾಯ ಗೊಂಡವು. ನಂತರ ಸಹನಶೀಲತೆ ಹುಟ್ಟಿಕೊಂಡಿತು. ಆದ್ದರಿಂದ ಮೇಲೆ ಹೇಳಿದ ಎರಡು ವಿರೋಧೀ ಆರ್ಥಿಕ ಮತ್ತು ಸಾಮಾಜಿಕ ಸಿದ್ಧಾಂತಗಳ ಮಧ್ಯೆ ಸಹನಶೀಲತೆ ಉಂಟಾಗದೇ ಇರುವುದಕ್ಕೆ ಕಾರಣವಿಲ್ಲ. ಕೊನೆಯಲ್ಲಿ ಜೀವನದ ವಾಸ್ತವಿಕತೆಗಳೇ ಅಂತಿಮ ತೀರ್ಮಾನ ಕೊಡುತ್ತವೆ ಮತ್ತು ವಿಶ್ವವನ್ನು ಪ್ರಭಾವಿತಗೊಳಿಸುತ್ತವೆ. ಬೇರೆಯವರಿಂದ ಕಲಿಯುತ್ತ ತನ್ನದೇ ಆದ ರೀತಿಯಲ್ಲಿ ಅಭಿವೃದ್ಧಿಹೊಂದಲು ಪ್ರತಿಯೊಂದು ದೇಶಕ್ಕೆ ಅವಕಾಶವಿರಬೇಕು. ಈ ರೀತಿ ಪ್ರತಿಯೊಂದು ಸಿದ್ಧಾಂತವೂ ಬೇರೊಂದು ಸಿದ್ಧಾಂತದ ಮೇಲೆ ಪ್ರಭಾವ ಬೀರುತ್ತಾ ಸ್ವತಃ ತಾನೂ ಕೂಡ ಪ್ರಭಾವಕ್ಕೆ ಒಳಗಾಗುತ್ತಾ ಹೋಗುವುದು ಸಹಜ ಕ್ರಿಯೆ. ಸಾಮ್ರಾಜ್ಯವಾದ ಅಥವಾ ವಸಾಹತುಶಾಹಿವಾದ ಯಾವುದೇ ರೂಪ ತಾಳಲಿ, ಇಂದು ಅವು ಕಾಲವಿರೋಧಿಗಳಾಗಿವೆ ಹಾಗೂ ಸಂಘರ್ಷದ ಮೂಲಗಳಾಗಿವೆ. ಆ ಸಿದ್ಧಾಂತಗಳು ಇನ್ನೂ ಅನೇಕ ಸ್ಥಳಗಳಲ್ಲಿ ಜೀವಂತವಾಗಿದೆ. ಅವುಗಳ ತಾತ್ವಿಕ ವಿಚಾರಗಳು ಅನೇಕ ಜನರ ಮನಸ್ಸುಗಳ ಮೇಲೆ ಪ್ರಭಾವ ಬೀರುತ್ತಲಿವೆ. ಆದರೆ ಅವು ಎಲ್ಲಕಡೆಗೂ ತಮ್ಮ ಬೆಲೆಯನ್ನು ಕಳೆದುಕೊಂಡಿವೆ ಮತ್ತು ಆತ್ಮರಕ್ಷಣೆಗಾಗಿ ಹೋರಾಡುತ್ತಿವೆ. ವರ್ಣ ಭೇದವನ್ನೂ, ಸಮ್ರಾಜ್ಯವಾದವನ್ನೂ ಕೊನೆಗೊಳಿಸುವಂಥ ವಿಶ್ವನೀತಿಯೊಂದು ರೂಪಿತಗೊಳ್ಳಬೇಕಿದೆ. ಹಾಗೆ ಮಾಡಿದಲ್ಲಿ ಎಲ್ಲ ದೇಶಗಳು ತಮ್ಮ ತಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವುದಕ್ಕೆ ಸ್ವತಂತ್ರವಾಗಿರುತ್ತವೆ.ಇದು ಕೆಲವು ದೇಶಗಳಲ್ಲಿ ಅವ್ಯವಸ್ಥೆ ಮತ್ತು ಅಶಾಂತಿಗೆ ಕಾರಣವಾಗಬಹುದು. ಆದರೆ ಇದು ಸೀಮಿತವಾಗಿರುತ್ತದೆಯೆ ಹೊರತು ಇತರ ಪ್ರದೇಶಗಳ ಮೇಲೆ ಪ್ರಭಾವಬೀರಲಾರದು. ಬಹುಶಃ ಸ್ವಲ್ಪಸಮಯದ ನಂತರ ಇಲ್ಲದಂತೆಯೂ ಆಗಬಹುದು. ಇಂದು ಅಪಾಯಕಾರಿ ಸನ್ನಿವೇಶಗಳಿಗೆ ಇಂದು ಕಾರಣವಾಗುತ್ತಿರುವ ತಪ್ಪೇನೆಂದರೆ ಒಂದು ದೇಶವು ತನ್ನ ಇಚ್ಛೆಯನ್ನು ಇನ್ನೊಂದು ದೇಶದ ಮೇಲೆ ಹೇರಲು ಪ್ರಯತ್ನಿಸುತ್ತಿರುವುದೇ ಆಗಿದೆ. ಮಿಲಿಟರಿ ಒಪ್ಪಂದಗಳು ಮತ್ತು ಶೀತಲ ಸಮರಕ್ಕೆ ಯಾವುದೇ ಉಚಿತ ಕಾರಣವಿರಬಹುದು. ಆದರೆ ಇಂದಿನಕಾಲದಲ್ಲಿ ಆ ಒಪ್ಪಂದಗಳು ಅಭದ್ರತೆ ಹಾಗೂ ಯುದ್ಧದ ಭೀತಿಗೆ

ಕಾರಣವಾಗಬಹುದು. ಅವು ದೇಶದ ಸಾಮಾನ್ಯ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತವಲ್ಲದೆ ವಿಶ್ವದ ವಾತಾವರಣವನ್ನೆ ಕೆಡಿಸುತ್ತವೆ. ಶೀತಲಯುದ್ಧ ಇರುವವರೆಗೂ ಸಹನಶೀಲತೆಯೆಂಬುದಿರುವುದಿಲ್ಲ. ಅಭಿವೃದ್ಧಿಹೊಂದದೇ ಇರುವ ದೇಶಗಳಿಗೆ ಸಹಾಯಮಾಡಿ ಅವೂ ಅಭಿವೃದ್ಧಿ ಹೊಂದುವಂತೆ ಮತ್ತು ಅವುಗಳ ಜೀವನಮಟ್ಟ ಉನ್ನತಗೊಳ್ಳುವಂತೆ ಮಾಡುವ ವಿಷಯಕ್ಕೆ ಬದಲಾಗಿ ಮಿಲಟರಿ ಸಂಬಂಧಗಳೆ ಬಹುವಾಗಿ ಗಣನೆಗೆ ಬರುತ್ತವೆ; ಪ್ರತಿಗಾಮಿ ಸರ್ಕಾರಗಳು ಅಸ್ತಿತ್ವಕ್ಕೆ ಬರುತ್ತವೆ. ಹೀಗೆ ಅಭದ್ರತೆಯ ಪರಿಸ್ಥಿತಿಯನ್ನು ಅವು ಇನ್ನಷ್ಟು ತೀವ್ರಗೊಳಿಸುತ್ತವೆ. ವಿಶ್ವದ ಸಮಸ್ಯೆಗಳು, ಸಂಘರ್ಷಗಳು ಮತ್ತು ಉದ್ವೇಗಗಳನ್ನು ಯಾವುದೇ ಒಂದು ಜಾದೂಕೋಲಿನಿಂದಾಗಲೀ, ಸಾತ್ವಿಕ ಘೋಷಣೆಗಳಿಂದಾಗಲೀ ನಿವಾರಿಸ ಬಹುದೆಂದು ಯಾರಾದರೂ ಸೂಚಿಸಿದರೆ ಅದು ಅವಾಸ್ತವಿಕ ಸಲಹೆಯಾಗುತ್ತದೆ. ಉದ್ವೇಗವನ್ನು ಕಡಿಮೆ ಮಾಡುವಂಥ ಯಾವುದೇ ಒಂದು ಸಕಾರಾತ್ಮಕ ಕ್ರಿಯೆಯನ್ನು ಸೂಚಿಸುವುದು ಹೆಚ್ಚು ವಾಸ್ತವಿಕವೆನಿಸುತ್ತದೆ. ಈ ಪ್ರಕಾರದ ಕ್ರಿಯೆ ಹೊಸ ಮನೋಧರ್ಮದ ಮಾರ್ಗವಾಗಿರುತ್ತದೆ. ರಾಜಕೀಯ ಮತ್ತು ಆರ್ಥಿಕ ನೀತಿಗಳು ಅದನ್ನು ಉಸುರಿಸುತ್ತವೆ. ಶಾಂತಿ ಅಂದರೆ ಭೌತಿಕವಾಗಿ ಯುದ್ಧವನ್ನು ತಪ್ಪಿಸುವುದು ಮಾತ್ರವಾಗಿರದೆ ವಿಶ್ವದಲ್ಲೆಲ್ಲಾ ಶಾಂತಿಯ ವಾತಾವರಣವನ್ನು ಸ್ಥಾಪಿಸುವ ಪ್ರಯತ್ನವಾಗಿದೆ.

ಈ ನೀತಿಯನ್ನು ನಾವು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ತರಲು ಪ್ರಯತ್ನಿಸಿದ್ದೇವೆ. ಈ ಪ್ರಯತ್ನದಲ್ಲಿ ನಾವು ಯಾವಾಗಲೂ ಯಶಸ್ವಿಯಾಗಿದ್ದೇವೆಂದು ನಾ ಹೇಳಲಾರೆ. ವಿದೇಶನೀತಿಗಳು ಅಂತಿಮವಾಗಿ ಆಯಾ ದೇಶದ ಆಂತರಿಕ ಪರಿಸ್ಥಿತಿಗಳನ್ನೂ, ಬೆಳವಣಿಗೆಗಳನ್ನೂ ಅವಲಂಬಿಸಿರುತ್ತವೆ. ಆದ್ದರಿಂದ ನಾವು ಜಾಗತಿಕ ವ್ಯವಹಾರಗಳಲ್ಲಿ ಪರಿಣಾಮಕಾರಿಯಾಗಿ ಪಾತ್ರವಹಿಸಬೇಕೆಂದರೆ ನಮ್ಮ ಆಂತರಿಕ ಪ್ರಗತಿ ಬಹಳ ಮುಖ್ಯವಾಗುತ್ತದೆ. ನಮ್ಮ ಅಭ್ಯುದಯಕ್ಕಂತೂ ಅದು ಹೆಚ್ಚು ಅಗತ್ಯವಾಗಿದೆ. ಮೊದಲನೆಯ ಪಂಚವಾರ್ಷಿಯ ಯೋಜನೆಯ ನಂತರ ಮತ್ತು ಎರಡನೆ ಯೋಜನೆಯ ಮೂರುವರ್ಷಗಳ ನಂತರ ನಿರ್ದಿಷ್ಟ ಪ್ರಗತಿಯನ್ನು ಎಲ್ಲ ಕ್ಷೇತ್ರದಲ್ಲಿಯೂ ಸಾಧಿಸಿದ್ದೇವೆ. ಕೆಲವು ಬಹಳ ಸ್ಪಷ್ಟವಾಗಿ ಗೋಚರಿಸುತ್ತವೆ, ಇನ್ನು ಕೆಲವು ಅಷ್ಟೊಂದು ಸ್ಪಷ್ಟವಾಗಿಲ್ಲ. ಆದರೆ ಸಾಧಿತ ಪ್ರಗತಿ ಮಾತ್ರ ಗಟ್ಟಿಯೂ ಅಧಿಕ ಪ್ರಮಾಣದ್ದೂ ಆಗಿದೆ. ವ್ಯವಸಾಯ ಮತ್ತು ಕೈಗಾರಿಕೆಯಲ್ಲಿಯ ಪ್ರಗತಿ ಸ್ಪಷ್ಟವಾಗಿದೆ. ನಮ್ಮ ಭವಿಷ್ಯ ಈ ಕ್ಷೇತ್ರಗಳಲ್ಲಿಯ ಪ್ರಗತಿಯನ್ನೇ ಅವಲಂಬಿಸಿದೆ.

ಈ ಪ್ರಗತಿಗೆ ಶಿಕ್ಷಣವೇ ಪ್ರಧಾನ ಅಡಿಪಾಯವಾಗಿದೆ. ಆದ್ದರಿಂದ ಪ್ರಾಥಮಿಕ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣದ ಪ್ರಚಾರಕ್ಕಾಗಿ ಬಹಳಷ್ಟು ಗಮನವನ್ನು ಕೊಡಲಾಗುತ್ತಿದೆ. ಕೋಟಿ ಸಂಖ್ಯೆಯಲ್ಲಿ ಹುಡುಗರು ಮತ್ತು ಹುಡುಗಿಯರು ಶಾಲಾ ಮತ್ತು ಕಾಲೇಜು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇನ್ನೂ ಕೋಟಿ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ ತರಬೇತಿ

ಪಡೆಯುತ್ತಿದ್ದಾರೆ. ಈ ಸಂಖ್ಯೆ ದೇಶದ ಜನಸಂಖ್ಯೆಯ ಒಂದು ಭಾಗವಷ್ಟೆ ಆಗಿದೆ. ಸಾಧನೆಮಾಡುವುದು ಇನ್ನೂ ಬಹಳಷ್ಟಿದೆ. ಹುಡುಗರು ಶಾಲೆ ಮತ್ತು ಕಾಲೇಜಿನಿಂದ ಹೊರಗೆ ಬರುತ್ತಿದ್ದಂತೆ ತಮ್ಮ ಜೀವನದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಹೊಸ ದೃಷ್ಟಿಕೋನವನ್ನು ಇಟ್ಟುಕೊಂಡು ಬರುತ್ತಾರೆ. ಹೀಗೆ ನಿಧಾನವಾಗಿ, ಆದರೆ ತಪ್ಪದೆ, ನಮ್ಮ ಸಾಮಾಜಿಕ ರಚನೆಗಳು ಬದಲಾಗುತ್ತಿವೆ. ನಮ್ಮ ಅತ್ಯಂತ ದೊಡ್ಡ ಹಾಗೂ ಕ್ರಾಂತಿಕಾರಿ ಬದಲಾವಣೆ ಮಹಿಳೆಯರ ಶಿಕ್ಷಣದ ಮೂಲಕ ಆಗುತ್ತಿದೆ. ಬಾಲಕಿಯರು ಮತ್ತು ಯುವತಿಯರು ಭಾರತೀಯರ ಇಡೀ ಜೀವನವನ್ನು ವೇಗವಾಗಿ ಬದಲಾಯಿಸುತ್ತಿದ್ದಾರೆ. ಸಧ್ಯಕ್ಕೆ ಈ ಬದಲಾವಣೆಗಳು ಹಳ್ಳಿಗಳಿಗಿಂತ ಹೆಚ್ಚಾಗಿ ನಗರಗಳಲ್ಲಿ ಆಗುತ್ತಿದ್ದರೂ ನಮ್ಮ ಹಳ್ಳಿಗಳು ಆ ಬದಲಾವಣೆಗಳಿಂದ ಪ್ರಭಾವಿತವಾಗದೇ ಉಳಿದಿಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣ ಶಾಲಾವಯಸ್ಸಿನ ಎಲ್ಲ ಮಕ್ಕಳನ್ನೂ ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುವುದು. ಇಂದಿನ ಆಧುನಿಕ ಶಿಕ್ಷಣ ಬಹಳ ಟೀಕೆಗೆ ಒಳಗಾಗಿದೆಯಾದರೂ ಶಿಕ್ಷಣ ವೇಗವಾಗಿ ಹಬ್ಬುತ್ತಿರುವುದು ಮತ್ತು ನಮ್ಮ ಜೀವನದ ಭವಿಷ್ಯವನ್ನು ಬದಲಾಯಿಸುತ್ತಿರುವುದು ಮಾತ್ರ ಸತ್ಯ.

ಇನ್ನು ಜನಸಂಖ್ಯೆಯ ಸಮಸ್ಯೆಯನ್ನು ಕುರಿತು; ಜಗತ್ತಿನಾದ್ಯಂತ ಗಣನೀಯವಾಗಿ ಜನಸಂಖ್ಯೆ ಹೆಚ್ಚಾಗುತ್ತಿದೆ. ಜನಸಂಖ್ಯೆ ಈ ಪ್ರಮಾಣದಲ್ಲಿ ಬೆಳೆದಿದ್ದೇ ಆದರೆ ಈ ಶತಮಾನದ ಕೊನೆಯ ವೇಳೆಗೆ ವಿಶ್ವದ ಜನಸಂಖ್ಯೆ ೩೫೦ ಕೋಟಿಯಿಂದ ೫೦೦ ಕೋಟಿ ಆಗಬಹುದು. ಭಾರತದಲ್ಲಿ ಈ ಅಂದಾಜು ೨೦೦೦ ಇಸವಿಯ ವೇಳೆಗೆ ೬೮ ಕೋಟಿ ತಲುಪಬಹುದು. ಜನಸಂಖ್ಯಾ ವೃದ್ಧಿಯ ಗತಿಯನ್ನು ನಾವು ತಡೆಯಲು ಸಮರ್ಥರಾದರೆ ಭಾರತದ ಜನಸಂಖ್ಯೆ ೬೦ ಕೋಟಿಯನ್ನು ತಲುಪಬಹುದು. ಜನಸಂಖ್ಯೆಯ ವೃದ್ಧಿಗೆ ಸಂಬಂಧಿಸಿದಂತೆ ಎರಡು ಸಮಸ್ಯೆಗಳಿವೆ. ಅದರಲ್ಲಿ ಒಂದು ಸಮಸ್ಯೆ, ನಮ್ಮ ಆರ್ಥಿಕ ಮುನ್ನಡೆಯಲ್ಲಿ ಅಡ್ಡಿಯನ್ನುಂಟು ಮಾಡುವಂಥದು; ಎರಡನೆ ಸಮಸ್ಯೆ ವಿಶ್ವದ ಸಂಪನ್ಮೂಲಗಳನ್ನು ಮತ್ತು ಕೈಗಾರಿಕಾ ಸಾಮಗ್ರಿಗಳನ್ನು ತೀವ್ರವಾಗಿ ನುಂಗಿಹಾಕುತ್ತಿರುವಂಥದು. ಅಮೆರಿಕಾ ಸಂಯುಕ್ತ ಸಂಸ್ಥಾನ ಈಗ ಮಾಡುತ್ತಿರುವಂತೆ ವಿಶ್ವದ ಎಲ್ಲಾ ದೇಶಗಳು ಮಾಡಲು ಪ್ರಾರಂಭಿಸಿದಲ್ಲಿ ಈ ಶತಮಾನದ ಕೊನೆಯಲ್ಲಿ ಎಲ್ಲ ಅಗತ್ಯ ಪದಾರ್ಥಗಳು ತೀರಿಹೋಗಿರುತ್ತವೆ.

ಅದಕ್ಕಾಗಿ ನಾವು ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯಬೇಕು ಮತ್ತು ಶಕ್ತಿಯ ಬೇರೆ ಮೂಲಗಳನ್ನು ಕಂಡು ಹಿಡಿಯ ಬೇಕು. ಅಣುಶಕ್ತಿಯು ಇನ್ನೊಂದು ಮೂಲಶಕ್ತಿಯಾಗುವ ಸಾಧ್ಯತೆ ಇದೆ. ಭಾರತದಲ್ಲಿ ನಾವು ಜನಸಂಖ್ಯಾ ನಿಯಂತ್ರಣದ ಬಗ್ಗೆ ಬಹಳ ಚಿಂತಿತರಾಗಿದ್ದೇವೆ. ಈ ವಿಷಯ ಬಹು ದೊಡ್ಡ ಮಹತ್ವದ ವಿಷಯವಷ್ಟೇ ಅಲ್ಲ ತುರ್ತು ವಿಷಯವೂ ಆಗಿದೆ.

ಎರಡು: ಮೂಲಭೂತ ವಿಷಯಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳ

ಬೇಕಾಗಿದೆ. ಅವುಗಳಲ್ಲಿ ಒಂದು, ಕೆಲವು ರಾಷ್ಟ್ರಗಳ ಅದ್ಭುತವಾದ ಉತ್ಪದನಾ ಸಾಮರ್ಥ್ಯ ಮತ್ತು ತತ್ಪರಿಣಾಮವಾಗಿ ಉಂಟಾಗಿರುವ ಶ್ರೀಮಂತಿಕೆ ಮತ್ತು ಬಲ. ಇದರೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಕೂಡಿಕೊಂಡಿದೆ. ಇನ್ನೊಂದು, ಈ ಶ್ರೀಮಂತ ಮತ್ತು ಬಲಿಷ್ಠ ರಾಷ್ಟ್ರಗಳು ಹಾಗೂ ಅಭಿವೃದ್ಧಿ ಹೊಂದದೇ ಇರುವ ರಾಷ್ಟ್ರಗಳ ಮಧ್ಯೆ ಇರುವ ಬಹು ದೊಡ್ಡ ಅಂತರ. ಈ ಅಂತರ ಇನ್ನೂ ಹೆಚ್ಚಾಗುತ್ತಲೆ ಹೋಗುತ್ತದೆ. ಸಾಮಾನ್ಯ ಆರ್ಥಿಕ ಮತ್ತು ಇತರ ಶಕ್ತಿಗಳಿಗೆ ಹೆಚ್ಚಿನ ಅವಕಾಶ ಸಿಕ್ಕಲ್ಲಿ ಅವು ಶ್ರೀಮಂತರಾಷ್ಟ್ರಗಳನ್ನು ಹೆಚ್ಚು ಶ್ರೀಮಂತವನ್ನಾಗಿಯೂ ಮತ್ತು ಬಲಿಷ್ಠ ರಾಷ್ಟ್ರಗಳನ್ನು ಹೆಚ್ಚು ಬಲಿಷ್ಠವನ್ನಾಗಿಯೂ ಮಾಡುವವು. ಉಳಿದ ದೇಶಗಳು ತಮ್ಮ ಪ್ರಾಥಮಿಕ ಅಗತ್ಯಗಳ ಪೂರೈಕೆಗಾಗಿ ಹೋರಾಡುವ ಸ್ಥಿತಿಯಲ್ಲಿಯೇ ಇರುತ್ತವೆ. ದೇಶದಲ್ಲಿಯ ಒಂದು ಅಭಿವೃದ್ಧಿ ಹೊಂದಿದ ಕ್ಷೇತ್ರ ಬೇರೆ ಕ್ಷೇತ್ರಗಳಿಗಿಂತ ಮುಂದುವರಿಯುತ್ತಾ ಹೋಗುವುದು. ಇದರ ಪರಿಣಾಮವಾಗಿ ದೇಶ ದೇಶಗಳ ಮಧ್ಯೆ ಘರ್ಷಣೆಗಳು ಮತ್ತು ಯುದ್ಧದ ಭೀತಿಗಳು ಹುಟ್ಟಿಕೊಳ್ಳುವವು. ಅಭಿವೃದ್ಧಿ ಹೊಂದಿದ ದೇಶಗಳ ಮನಸ್ಸಿನಲ್ಲಿ ಸಾಮಾಜಿಕ ಅಶಾಂತಿ ಉಂಟಾಗುವುದು. ಅಧಿಕಾರ ಮತ್ತು ಐಶ್ವರ್ಯ ವೈರತ್ವಕ್ಕೆ ಮತ್ತು ಸಂಘರ್ಷಕ್ಕೆ ಕಾರಣವಾಗುವಂತೆಯೇ ಬಡತನ ಮತ್ತು ಕಷ್ಟಗಳು ಅವ್ಯವಸ್ಥೆ ಮತ್ತು ಸಂಘರ್ಷಕ್ಕೆ ಕಾರಣವಾಗುತ್ತವೆ. ಅಂತಿಮವಾಗಿ ಇವೆರಡೂ ಭಯ ಮತ್ತು ಅಭದ್ರತೆಗೆ ಕಾರಣವಾಗುತ್ತವೆ. ಐಶ್ವರ್ಯ ಮತ್ತು ಅಧಿಕಾರದ ಅತಿಯಾದ ಕ್ರೋಢೀಕರಣ ಭದ್ರತೆಯನ್ನು ತರಲಾರದು. ಬದಲಿಗೆ ವಿಶ್ವದ ಇತರ ಶಕ್ತಿಗಳ ಬಗ್ಗೆ ಇರಬೇಕಾದ ಸೂಕ್ತ ತಿಳುವಳಿಕೆಯನ್ನು ಮರೆಮಾಚುತ್ತವೆ. ಆದ್ದರಿಂದ ರಾಷ್ಟ್ರಗಳ ಮದ್ಯೆದಲ್ಲಿರುವ ಈ ಅಂತರವನ್ನು ಕಡಿಮೆಮಾಡಬೇಕು.

ಅಣುಯುಗದ ಸಮಸ್ಯೆಗಳನ್ನು ನಿನ್ನೆಯ ಪಾರಂಪರಿಕ ಮಾರ್ಗಗಳ ಮೂಲಕ ಪರಿಹರಿಸಲು ಸಾಧ್ಯವಿಲ್ಲ. ರಾಜಕೀಯ ಕ್ಷೇತ್ರದಲ್ಲಾಗಲಿ ಅಥವಾ ಆರ್ಥಿಕ ಕ್ಷೇತ್ರದಲ್ಲಾಗಲಿ ಆ ಪಾರಂಪರಿಕ ವಿಚಾರಗಳು ತೃಪ್ತಿಕರವಾದ ಫಲಿತಾಂಶಗಳನ್ನು ಕೊಡಲಾರವು. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಶೀತಲಸಮರವನ್ನು ನಡೆಸಿಕೊಂಡು ಹೋಗುವುದರಲ್ಲಿರುವ ಬುದ್ಧಿಹೀನತೆಯನ್ನು ನಾವು ಕಾಣುತ್ತಿದ್ದೇವೆ. ಅಣು ಪ್ರಯೋಗಗಳು ಇಂದಿನ ಮತ್ತು ಮುಂದಿನ ತಲೆಮಾರುಗಳಿಗೆ ಅಪಾಯಕಾರಿಯಾಗಿವೆಯೆಂದು ಪ್ರಖ್ಯಾತ ವಿಜ್ಞಾನಿಗಳು ಹೇಳಿದ್ದರೂ ಅಣು ಪ್ರಯೋಗಗಳು ನಡೆಯುತ್ತಲೇ ಇವೆ. ಪ್ರತಿಯೊಂದು ದೇಶದ ಒಳಗೂ ಸಂಘರ್ಷಗಳಿವೆ. ಭಾರತದಲ್ಲಿ ಭಾಷಾಂಧತೆಯ ಕಾರಣದಿಂದಾಗಿ ಬಹಳ ಆತಂಕಕಾರಿಯಾದ ಸಂಘರ್ಷಗಳನ್ನು ಹೊಂದಿದ್ದೆವು. ಇವುಗಳ ಹಿಂದೆ ಮುಖ್ಯವಾಗಿ ಹಿತಾಸಕ್ತಿಗಳ ಸಂಘರ್ಷ ಇತ್ತು. ಇಂದಿಗೂ ಅದು ಸಮಸ್ಯೆಯಾಗಿಯೆ ಇದೆ. ಅಂಥ ಸಂದರ್ಭಗಳಲ್ಲಿ ಆ ಹಿತಾಸಕ್ತಿಗಳನ್ನು ತೆಗೆದು ಹಾಕುವುದು ಸುಲಭದ ಕೆಲಸವಾಗಿರುವುದಿಲ್ಲ. ಆದಾಗ್ಯೂ ಸಹ ಅವುಗಳನ್ನು ನಾವು ಬಹಳಷ್ಟು ನಿವಾರಿಸಲು ಸಮರ್ಥರಾಗಿದ್ದೇವೆ.

ನಮ್ಮ ಇಂದಿನ ಶ್ರಮವೇ ನಾಳಿನ ಭಾರತವನ್ನು ರೂಪಿಸುವುದು. ಭಾರತ ಕೈಗಾರಿಕೃತವಾಗಿಯೂ ಮತ್ತು ಬೇರೆ ರೀತಿಯಲ್ಲೂ ಮುಂದುವರಿಯುವುದು ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಹಾಗೆಯೇ ನಮ್ಮ ಜನರ ಜೀವನಮಟ್ಟವು ಉನ್ನತಗೊಳ್ಳುವುದು; ಶಿಕ್ಷಣವು ಪ್ರಚಾರಗೊಳ್ಳುವುದು; ಆರೋಗ್ಯದ ಪರಿಸ್ಥಿತಿ ಉತ್ತಮಗೊಳ್ಳುವುದು; ಕಲೆ ಮತ್ತು ಸಂಸ್ಕೃತಿ ಜನರ ಜೀವನವನ್ನು ಶ್ರೀಮಂತಗೊಳಿಸುವುದು. ನಾವು ಇಂಥ ಯಾತ್ರೆಯನ್ನು ಪ್ರಾರಂಭಿಸಿದ್ದೇವೆ. ನಮ್ಮಲ್ಲಿ ಬಲವಾದ ಉದ್ದೇಶವಿದೆ, ಒಳ್ಳೆಯ ಹೃದಯವಂತಿಕೆಯಿದೆ. ಆದ್ದರಿಂದ ಈ ಯಾತ್ರೆ ಎಷ್ಟೇ ದೀರ್ಘವಾಗಿದ್ದರೂ ಅದನ್ನು ನಾವು ಮುಗಿಸಬಲ್ಲೆವು. ನನಗೆ ನಮ್ಮ ಭೌತಿಕ ಪ್ರಗತಿಯ ಬಗ್ಗೆ ಮಾತ್ರ ಚಿಂತೆ ಇಲ್ಲ. ನಮ್ಮ ಜನರ ಗುಣಧರ್ಮ ಮತ್ತು ಅವರ ಸಾಮರ್ಥ್ಯದ ಬಗ್ಗೆಯೂ ಚಿಂತೆ ಇದೆ. ಕೈಗಾರಿಕರಣದ ಮೂಲಕ ಶ್ರೀಮಂತಿಕೆ ಮತ್ತು ಸುಖ ಜೀವನದ ಹುಡುಕಾಟದಲ್ಲಿ ನಮ್ಮ ಜನರು ತಮ್ಮನ್ನು ತಾವೇ ಎಲ್ಲಿ ಕಳೆದುಕೊಳ್ಳುವರೊ ಎಂಬ ಚಿಂತೆಯೂ ನನಗಿದೆ. ಹಾಗೇನಾದರೂ ಸಂಭವಿಸಿದಲ್ಲಿ ಅದೊಂದು ದುರಂತವೇ ಸರಿ. ಏಕೆಂದರೆ ಯಾವ ಮೌಲ್ಯಗಳಿಗಾಗಿ ಭಾರತ ಪ್ರಚೀನ ಕಾಲದಿಂದಲೂ ಮತ್ತು ಇತ್ತಿಚಿಗಿನ ಕಾಲದಲ್ಲಿ ಗಾಂಧಿಯ ಉದಾಹರಣೆಯ ಮೂಲಕ ವ್ಯಕ್ತವಾಗಿದೆಯೋ ಅದನ್ನು ನಿರಾಕರಿಸಿದಂತಾಗುತ್ತದೆ. ಅಧಿಕಾರವೇನೋ ಅಗತ್ಯ. ಆದರೆ ಜ್ಞಾನ ಅತ್ಯಗತ್ಯ. ಜ್ಞಾನದೊಂದಿಗೆ ಸೇರಿದ ಅಧಿಕಾರ ಹಿತಕಾರಿ. ಮನಸ್ಸಿನಲ್ಲಿಯೂ, ಚೇತನದಲ್ಲಿಯೂ ಇರುವ ಪ್ರಗತಿಯೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯನ್ನೂ ನಾವು ಸೇರಿಸಬಲ್ಲೆವೆ? ನಾವು ವಿಜ್ಞಾನಕ್ಕೆ ದ್ರೋಹ ಬಗೆಯಲು ಸಾಧ್ಯವಿಲ್ಲ. ಏಕೆಂದರೆ ವಿಜ್ಞಾನವು ಇಂದಿನ ಜೀವನದ ಮೂಲಸಂಗತಿಯನ್ನು ಪ್ರತಿನಿಧಿಸುತ್ತದೆ. ಅದೇ ರೀತಿ ಭಾರತ ಯಾವ ತತ್ವಗಳನ್ನು ಗತಕಾಲದಿಂದಲೂ ಪ್ರತಿಪಾದಿಸಿದೆಯೋ ಆ ತತ್ವಗಳಿಗೂ ಕೂಡ ನಾವು ದ್ರೋಹ ಬಗೆಯಬಲ್ಲೆವೆ? ಅಂದಮೇಲೆ ನಾವು ಕೈಗಾರಿಕೆಯ ಪ್ರಗತಿ ಪಥದಲ್ಲಿ ನಮ್ಮ ನಂಬಿಗೆಯನ್ನೂ ನಮ್ಮೆಲ್ಲ ಶಕ್ತಿ ಮತ್ತು ಸಾಮರ್ಥ್ಯದೊಂದಿಗೆ ಸಾಧಿಸೋಣ. ಜೊತೆಯಲ್ಲಿ ಸಹನೆ, ದಯೆ ಮತ್ತು ಜ್ಞಾನಗಳಿಲ್ಲದ ಭೌತಿಕ ಶ್ರೀಮಂತಿಕೆ ಮಣ್ಣುಗೂಡುವುದೆಂಬುದನ್ನೂ ಸಹ ನೆನಪಿಟ್ಟುಕೊಳ್ಳೋಣ. "ಶಾಂತಿಪ್ರಿಯರೆ ಅದೃಷ್ಟವಂತರು" ಎಂಬುದನ್ನು ಕೂಡ ನೆನಪಿನಲ್ಲಿಟ್ಟುಕೊಳ್ಳೋಣ.

(ಅಮೆರಿಕಾ ಸಂಯುಕ್ತ ಸಂಸ್ಥಾನದ ಪ್ರತಿಷ್ಠಿತ ಪತ್ರಿಕೆ Wisdomನ ಜೂನ್ ೧೯೬೦ರ ಸಂಚಿಕೆಯಲ್ಲಿ ಪ್ರಕಟಗೊಂಡಿದ್ದ ನೆಹರುರವರ ಲೇಖನದ ಪೂರ್ಣ ಅನುವಾದವಿದು.)

ಅನುವಾದ -ಸು.ಕೌ.

ಜನಪದ ನಿಲಯದ ಅಂತರಂಗದಲ್ಲಿ ೬

-ಸುರೇಂದ್ರ ಕೌಲಗಿ



ಮೇಲುಕೋಟೆಗೇನೋ ಬಂದದ್ದಾಯಿತು; ಅದನ್ನು ಕಾರ್ಯಕ್ಷೇತ್ರವನ್ನಾಗಿಯೂ ಆಯ್ಕೆಮಾಡಿಕೊಂಡದ್ದಾಯಿತು. ಆದರೆ ವಾಸವಾಗಿರುವುದೆಲ್ಲಿ, ಊಟದ ವ್ಯವಸ್ಥೆಯೆಲ್ಲಿ ದಿನನಿತ್ಯದ ಖರ್ಚುವೆಚ್ಚಗಳ ನಿರ್ವಹಣೆ ಹೇಗೆ ಎಂಬಿತ್ಯಾದಿ ಜೀವನ ಸಂಬಂಧಿ ಪ್ರಶ್ನೆಗಳು ಸಹಜವಾಗಿಯೇ ಉದ್ಭವಿಸಿದವು. ಈ ಪ್ರಶ್ನೆಗಳಿಗೆ ನನ್ನ ಬಳಿ ಯಾವ ಸಿದ್ಧ ಉತ್ತರಗಳಿರಲಿಲ್ಲ. ಏಕೆಂದರೆ ನನ್ನ ಸ್ವಂತ ಸಂಪಾದನೆಯೆಂಬುದಿರಲಿಲ್ಲ. ಅದು ಶೂನ್ಯವಾಗಿತ್ತು. ಕಾರ್ಯಯೋಜನೆ ಎಲ್ಲರೂ ಒಪ್ಪುವಂಥದೂ ಆಗಿರಲಿಲ್ಲ. ಮುಂದಿನ ಜೀವನವೇ ಪ್ರಶ್ನಾರ್ಥಕವಾಗಿ ನೇತಾಡುತ್ತಿದ್ದಾಗ ಜೀವನ ನಿರ್ವಹಣೆಯ ವಿಷಯ ಅಸ್ಪಷ್ಟವಾಗಿಯೇ ಇರಬೇಕಾಗುತ್ತದಲ್ಲದೆ, ಇನ್ನಾವ ರೀತಿಯಲ್ಲೂ ಇರಲು ಸಾಧ್ಯವಿಲ್ಲ. ಜಯಪ್ರಕಾಶರ ಸೇವೆಯಿಂದ ಬಿಡುಗಡೆ ಹೊಂದಿ ನೇರವಾಗಿ ಮೇಲುಕೋಟೆಯ ತೆಕ್ಕೆಯೊಳಗೆ ಬಂದಿದ್ದೆ. ಅವರ ಆಶೀರ್ವಾದದ ಬಲ ಇತ್ತು; ಅವರೊಂದಿಗಿನ ಕಾರ್ಯಭಾರದ ಅನುಭವದ ಬುತ್ತಿ ಇತ್ತು. ಅಷ್ಟೆ. ಹಣಕಾಸಿನ ವ್ಯವಸ್ಥೆ ಕಿಂಚಿತ್ತಾಗಿತ್ತು. ಜಯಪ್ರಕಾಶ್‌ರಿಂದ ಬಿಡುಗಡೆ ಹೊಂದುವಾಗ ಅವರು ನನಗೆ ಕೊಡಬಹುದಾದ ಆರ್ಥಿಕ ನೆರವಿನ ಬಗ್ಗೆ ವಿಚಾರಿಸಿದರು. ನಾನು ಅವರ ಬಳಿ ೧೯೫೪ ರಿಂದ ೬೦ರ ವರೆಗೆ ಆಪ್ತ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದೆ. ಆಗ ನಾನು ಒಬ್ಬಂಟಿಗನಾಗಿದ್ದೆ. ನನ್ನ ಜೀವನ ನಿರ್ವಹಣೆ ಸಹಜವಾಗಿ ಆಗಿ ಹೋಗುತ್ತಿತ್ತು. ನನ್ನ ಅವಶ್ಯಕತೆಗಳೂ ಸಹ ಯಾವುದೂ ಇಲ್ಲವೇನೋ ಎಂಬಷ್ಟರ ಮಟ್ಟಿಗೆ ಇದ್ದವು. ಆದರೂ ಕೂಡ ಆಗ ಮುಂಬೈಯಲ್ಲಿದ್ದ ನನ್ನ ಏಕಮಾತ್ರ ಅಣ್ಣನಿಗೆ ಆರ್ಥಿಕ ನೆರವಿಗೆಂದು ಜಯಪ್ರಕಾಶರಿಂದ ಮಾಹೆಯಾನಾ ೫೦ ರೂ. ಪಡೆಯುತ್ತಿದ್ದೆ ಮತ್ತು ಅದನ್ನು ನನ್ನ ಅಣ್ಣನಿಗೆ ಘಾಟ್ಕೋಪರದಲ್ಲಿಯ ಸಾಲುಮನೆಗಳಲ್ಲಿಯ ಒಂದು ಪುಟ್ಟಮನೆಯ ಬಾಡಿಗೆಯ ನಿರ್ವಹಣೆಗಾಗಿ ಆ ೫೦ ರೂ. ಗಳನ್ನು ಕಳುಹಿಸುತ್ತಿದ್ದೆ. ಆದ್ದರಿಂದ ೧೯೬೦ ರಲ್ಲಿ ಮೇಲುಕೋಟೆಗೆ ಬಂದಾಗ ನನ್ನ ಕೈ ಖಾಲಿ ಇತ್ತು; ಜೇಬೂ ಖಾಲಿ ಇತ್ತು; ಎರಡು ಜೊತೆ ಖಾದಿ ಬಟ್ಟೆ, ಪಂಚೆ–ಜುಬ್ಬಗಳು; ಪೆಟ್ಟಿಗೆ ಚರಖಾ ಇತ್ಯಾದಿ ಮಾತ್ರ ಇದ್ದವು ಊರು ತೀರ ಹೊಸದು; ಗ್ರಾಮಸ್ಥರೂ ತೀರ ಅಪರಿಚಿತರು. ಗ್ರಾಮದಲ್ಲಿ ನನ್ನ ನೆಂಟರಿಲ್ಲ, ಬಾಂಧವರಿಲ್ಲ, ಗ್ರಾಮ ನಿವಾಸಿಗಳು ನನಗೆ ಎಷ್ಟು ಅಪರಿಚಿತರೋ ಅಷ್ಟೇ ಅಪರಿಚಿತ

ನಾನು ಗ್ರಾಮಸ್ಥರಿಗೆ. ಇಂಥ ಪರಿಸ್ಥಿತಿಯಲ್ಲಿ ನನ್ನ ಬಳಿ ಇದ್ದ ಒಂದೇ ಒಂದು ಬಲ ಎನ್ನಿ, ನಿಧಿ ಎನ್ನಿ– ಅದು ಸರ್ವೋದಯ ವಿಚಾರ. ಈ ಸರ್ವೋದಯ ವಿಚಾರವೇ ಅಲ್ಲವೆ ಗಾಂಧಿಯುವರನ್ನು ೭೯ವರ್ಷ ಕೈಹಿಡಿದು ನಡೆಸಿದ್ದು, ಜಯುಪ್ರಕಾಶ ನಾರಾಯಣರನ್ನು ೭೭ವರ್ಷ ಕೈಹಿಡಿದು ನಡೆಸಿದ್ದು; ವಿನೋಬಾ ಭಾವೆಯುವರನ್ನು ೮೭ ವರ್ಷ ಕೈಹಿಡಿದು ನಡೆಸಿದ್ದು. ಆ ಸರ್ವೋದಯ ವಿಚಾರವೇ ಈಗ ನನ್ನನ್ನು ಕೈಹಿಡಿದು ನಡೆಸಲು ಮುಂದಾಗಿತ್ತು. ಆ ವಿಚಾರವೇ ನನಗೆ ದಾರಿತೋರಿಸಬೇಕಾಗಿತ್ತು, ಒಡನಾಡಿಗಳನ್ನು ಕೊಡಬೇಕಾಗಿತ್ತು. ಈ ಮಾತು ಕ್ರಮೇಣ ನಿಜವಾಗುತ್ತಲೂ ಬಂತು.

ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಆಗ ಮೇಲುಕೋಟೆಯಲ್ಲಿ ಹಿರಿಯ ಮತ್ತು ಪ್ರಸಿದ್ಧ ಸಂಸ್ಥೆಯಾಗಿದ್ದ ದಿವ್ಯ ದೇಶ ಜೀರ್ಣೋದ್ಧಾರಕ ಭಕ್ತ ಮಂಡಳಿಯಲ್ಲಿ ಜಗ್ಗು ನಾರಾಯಣರ ಸ್ನೇಹಪರ ಪ್ರಯತ್ನದಿಂದಾಗಿ ಏರ್ಪಾಡಾದವು. ದಿವ್ಯದೇಶ ಜೀರ್ಣೋದ್ಧಾರಕ ಭಕ್ತ ಮಂಡಳಿಗೆ ಮೇಲುಕೋಟೆಯ ಸಾರ್ವಜನಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನವಿದೆ. ಮೇಲುಕೋಟೆಯು ವಿಶಿಷ್ಟಾದ್ವೈತ ತತ್ವದ ಪ್ರತಿಪಾದಕರಾದ ಶ್ರೀ ರಾಮಾನುಜಾಚಾರ್ಯರಿಂದ ಈಗ್ಗೆ ಸುಮಾರು ೯೦೦ ವರ್ಷಗಳ ಹಿಂದೆ ಸ್ಥಾಪಿತವಾದುದು. ಅಲ್ಲದೆ ಶ್ರೀ ಚಲುವನಾರಾಯಣಸ್ವಾಮಿ ಮತ್ತು ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನಗಳ ನೆಲೆವೀಡು. ಆದ್ದರಿಂದ ಮೇಲುಕೋಟೆ ದಿವ್ಯದೇಶವೆಂದು ಭಕ್ತಾದಿಗಳು ಭಾವಿಸಿದರು. ಜೊತೆಗೆ ತಿರುನಾರಾಯಣಪುರ, ಯಾದವಾದ್ರಿ, ಯದುಗಿರಿ ಇತ್ಯಾದಿ ಹೆಸರುಗಳೂ ಮೇಲುಕೋಟೆಯೆಂಬ ಹೆಸರಿನ ಜೊತೆ ಬಳಕೆಗೆ ಬಂದವು. ಪ್ರಸ್ಥವಾದ ಭೂಮಿಯ ಮೇಲೆ ಪಾಳೆಗಾರರಿಂದ ಕೋಟೆ ಕಟ್ಟಲ್ಪಟ್ಟಿದ್ದರಿಂದ ಸಹಜವಾಗಿಯೇ ಈ ಊರಿಗೆ ಮೇಲುಕೋಟೆ ಎಂಬ ಹೆಸರು ಬಂತು. ದಿವ್ಯದೇಶವೆಂದು ಪ್ರಸಿದ್ಧವಾದ ಈ ಊರಿನ ಜೀರ್ಣೋದ್ಧಾರದ ಉದ್ದೇಶದಿಂದಲೂ, ದೇವಸ್ಥಾನಗಳಲ್ಲಿ ಕೆಲಸ ಮಾಡುವ ವಿವಿಧ ಕೈಂಕರ್ಯಪರರ ಹಿತ ಸಾಧಿಸಬೇಕೆಂಬ ಉದ್ದೇಶ್ಯ ದಿಂದಲೂ, ದಿವ್ಯದೇಶಕ್ಕೆ ಬರುವ ಯಾತ್ರಾರ್ಥಿಗಳ ಸೌಕರ್ಯವನ್ನು ಗಮನಿಸಬೇಕೆಂಬ ಉದ್ದೇಶ್ಯದಿಂದಲೂ ಸಂಪ್ರದಾಯಸ್ಥರಾಗಿದ್ದರೂ ಸಹ ಸಾರ್ವಜನಿಕ ಕಾರ್ಯದಲ್ಲಿ ಬಹು ಆಸಕ್ತಿ ಹೊಂದಿದ್ದ ಶ್ರೀ ಶ್ಯಾಮ ಅಯ್ಯಂಗಾರ್ ಅವರಿಂದ ಈ ಭಕ್ತಮಂಡಲಿ ಸ್ಥಾಪಿತವಾಗಿತ್ತು.

ಶ್ರೀ ಶ್ಯಾಮ ಅಯ್ಯಂಗಾರ್ ಪುರಸಭಾಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದರು ಅವರ ಅಧಿಕಾರಾವಧಿಯಲ್ಲಿ ಪೌರಕಾರ್ಮಿಕರು ಮುಷ್ಕರ ಹೂಡಿದ್ದರು ಅದರ ಪರಿಣಾಮವಾಗಿ ಗ್ರಾಮದ ಚರಂಡಿಗಳಲ್ಲಿಯ ಕೊಚ್ಚೆ ನೀರು ಸರಿಯಾಗಿ ಹರಿಯದೆ ಬೀದಿಗೆ ಬರುವಂತಾಗಿತ್ತು. ಬೀದಿಗಳು ಸಹ ಕಸಕಡ್ಡಿಯಿಂದ ತುಂಬಿತ್ತು. ಆಗ ಶ್ಯಾಮ ಅಯ್ಯಂಗಾರರು ವರ್ಣವ್ಯವಸ್ಥೆಯನ್ನು ಮುರಿದು ಸ್ವತಃ ಚರಂಡಿಗಳನ್ನು ಸ್ವಚ್ಛಗೊಳಿಸಿ ಬೀದಿಯನ್ನು ಗುಡಿಸಿದ್ದರು. ಕೈಗಾರಿಕಾ ಕೇಂದ್ರವನ್ನು ಸಹ ಪ್ರಾರಂಭಿಸಿದ್ದರು; ಗಾಂಧೀಜಿಯುವರ ವಿಚಾರದಿಂದ ಪ್ರಭಾವಿತರಾಗಿ ಪಂಚಮರ ಉದ್ಧಾರದ

ಸಮ್ಮೇಳನವನ್ನು ಸಹ ನಡೆಸಿದ್ದರು. ಈ ಸಮ್ಮೇಳನ ಈಗ ಪಾಳು ಬಿದ್ದಿರುವ ತೆಪ್ಪಕೊಳದ ಆವರಣದಲ್ಲಿ ನಡೆದಿತ್ತು. ಶ್ಯಾಮ ಅಯ್ಯಂಗಾರರೇ ದಿವ್ಯ ದೇಶೋದ್ಧಾರಕ ಭಕ್ತ ಮಂಡಳಿಯನ್ನು ಸ್ಥಾಪಿಸಿದ್ದರು. ಇಂದಿಗೂ ಆ ಭಕ್ತಮಂಡಳಿ ಇದೆ; ನಾನು ಭಕ್ತಮಂಡಳಿಯ ಆಶ್ರಯ ಪಡೆಯುವ ಸಮಯದಲ್ಲಿ ಅದರ ಕರ್ಣಧಾರರಾಗಿ ಬಾ. ವೆಂ. ರಾಘವಾಚಾರ್ಯರು ಇದ್ದರು. ಅವರಿಗೆ ಸುಮಾರು ೬೦ ವರ್ಷಗಳಾಗಿದ್ದಿರಬಹುದು. ನಾರಾಯಣಸ್ವಾಮಿ ದೇವಸ್ಥಾನದ ಎದುರಿನಲ್ಲಿಯ ಕಿರಿದಾದ ಓಣಿಯಲ್ಲಿ ಅಂಟಿಕೊಂಡಂತೆ ಒಳಭಾಗದಲ್ಲಿ ದೊಡ್ಡದಾಗಿದ್ದ ಮನೆಯ ಮಹಡಿಯ ಮೇಲೆ ಭಕ್ತಮಂಡಳಿಯ ಪುಟ್ಟ ಕಾರ್ಯಾಲಯ ಇತ್ತು. ಈ ಕಾರ್ಯಾಲಯದಲ್ಲಿ ರಾಘವಾಚಾರ್ಯರಿಗೆ ಸಹಾಯಕರಾಗಿ ಆಯುರ್ವೇದ ಪಂಡಿತರಾಗಿದ್ದ ಶ್ರೀ ಸಂಪತ್ತಕುಮಾರಾಚಾರ್ಯರಿದ್ದರು. ಆಗಿನ ಕಾಲಕ್ಕೆ ಇವರೇ ಮೇಲುಕೋಟೆ ಮತ್ತು ಸುತ್ತಲಿನ ಹಳ್ಳಿಗಳ ಜನರಿಗೆ ವೈದ್ಯರಾಗಿದ್ದರು. ಭಕ್ತಮಂಡಳಿಗೆ ಮದ್ರಾಸ್ ಕಡೆಯ ರಾಮಾನುಜಭಕ್ತರು ದಾನಿಗಳಾಗಿದ್ದರು.

ರಾಘವಾಚಾರ್ಯರದು ಸ್ಥೂಲ ದೇಹ, ಎತ್ತರ ಸಾಮಾನ್ಯ, ಶ್ರೀವಿಶಿಷ್ಟಾದ್ವೈತದ ಅನುಯಾಯಿಗಳು ಅನುಸರಿಸುವ ಸಂಪ್ರದಾಯದಂತೆ ಅವರ ದಿನಚರಿ, ವೇಷಭೂಷಣಗಳಿದ್ದವು. ಹಣೆಯ ಮೇಲೆ ಬಹು ಅಗಲ ಎನ್ನಬಹುದಾದ, ಕಣ್ಣಿಗೆ ಢಾಳಾಗಿ ಕಾಣುವ ತಿರುಮಣ್ಣಿನ ಶ್ರೀ ವೈಷ್ಣವರ ತೆಂಗಲೆನಾಮ ಅವರ ಹಣೆಯನ್ನು ಅಲಂಕರಿಸಿರುತ್ತಿತ್ತು. ಕತ್ತಿನಲ್ಲಿ ರುದ್ರಾಕ್ಷಿಸರ, ಬೆರಳುಗಳಲ್ಲಿ ಬೆಲೆಬಾಳುವ ಉಂಗುರಗಳು, ಮೈಮೇಲೆ ಹಸಿರು ಅಥವಾ ಕೆಂಪು ಬಣ್ಣದ ರೇಶ್ಮೆಶಾಲು ಮುಖದಲ್ಲಿ ಶಾಂತ ಮತ್ತು ಪ್ರಸನ್ನತೆಯ ಮುದ್ರೆ; ಮೆಲುಧ್ವನಿಯಲ್ಲಿ ಮಾತು, ಸಂಭಾಷಣೆ ನಡೆಸುವಾಗ ಮಧ್ಯೆ-ಮಧ್ಯೆ ವೈರಾಗ್ಯದ ಪಾರಲೌಕಿಕ ಮಾತುಗಳು, ಬೆಳಿಗ್ಗೆ ಸ್ನಾನ ಇತ್ಯಾದಿ ಮುಗಿಸಿ ತಮ್ಮ ಮನೆಯಲ್ಲದ್ದ ಆಳ್ವಾರುಗಳ ಪೂಜೆ! ಇದು ಅರ್ಧಘಂಟೆಗೂ ಹೆಚ್ಚುಕಾಲ ನಡೆಯುತ್ತಿತ್ತು. ಪೂಜೆಯನಂತರ ಮನೆ ಮುಂದಿಯೆಲ್ಲ ಸಾಲಾಗಿ ನಿಂತು ರಾಘವಾಚಾರ್ಯರಿಂದ ತೀರ್ಥ, ತುಳಸಿ ಪಡೆಯುತ್ತಿದ್ದರು. ನಂತರ ಊಟ. ದೇವರ ಕೋಣೆಯ ಮುಂದೆ ಇದ್ದ ಉಯ್ಯಾಲೆಯ ಮೇಲೆ ರಾಘವಾಚಾರ್ಯರು ಕುಳಿತು ಮನೆಯವರ, ಮನೆಗೆಬಂದ ಅತಿಥಿಗಳ ಊಟದ ಮೇಲ್ವಿಚಾರಣೆ ಮಾಡುತ್ತಿದ್ದರು. ಇಂಥ ಸಾಂಪ್ರದಾಯಿಕ ರೀತಿಯ ಕುಟುಂಬದಲ್ಲಿ ನಾನೊಬ್ಬ ಅತಿಥಿಯಾಗಿ ಸೇರಿಕೊಂಡೆ. . .

(ಮುಂದುವರಿಯುವುದು)

ಸನ್ಮಾನ್ಯರಿಂದ

ಜನಪದವಿಚಾರ ತಲುಪುತ್ತಿದೆ. ಪತ್ರಿಕೆ ಉತ್ತಮವಾಗಿ ಪ್ರಕಟವಾಗುತ್ತಿದೆ.

—ಹೆಚ್.ಡಿ. ತುಳಸಿದಾಸಪ್ಪ.
ಮೈಸೂರು

ಜನಪದ ವಿಚಾರದಲ್ಲಿಯ ಸೃಜನಶೀಲ ಬರಹಗಾರರ ವೈಚಾರಿಕ ಲೇಖನಗಳಿಂದ ತಮ್ಮ ಪತ್ರಿಕೆ ಭವಿಷ್ಯತ್ತಿನಲ್ಲಿ ಶಕ್ತಿಯುತವಾಗಿ ಬೆಳೆಯಬಹುದು, ತಾವುಗಳು ವೈಜ್ಞಾನಿಕ ದೃಷ್ಟಿಕೋನದ ಹಿನ್ನಲೆಯಲ್ಲಿ ಮೂಡಿದ ಕಥೆಗಳನ್ನೂ ಪ್ರಕಟಿಸುವುದು ಒಳಿತು. ತಮ್ಮ ಪತ್ರಿಕೆಯ ಬಗ್ಗೆ ಬರೆದು ತಿಳಿಸುವುದಕ್ಕಿಂತ ಲೇಖನವನ್ನು ಕಳುಹಿಸಬೇಕೆಂದು ಕೊಂಡಿದ್ದರಿಂದ ಪತ್ರ ಬರೆಯುವದಾಗಲಿಲ್ಲ. ಸಮಯ ಸಿಕ್ಕಾಗ ನಿಮ್ಮ ಪತ್ರಿಕೆಗೆ ಆಗಾಗ ಲೇಖನಗಳನ್ನು ಬರೆಯುತ್ತೇನೆ. ಸ್ನೇಹಿತರಿಗೂ ತಿಳಿಸುತ್ತೇನೆ.

—ಟಿ. ಎಸ್. ಗೊರವರ.
ರಾಜೂರ – ೫೮೨೨೩೦

ಜನಪದ ವಿಚಾರ ನನಗೆ ಇಷ್ಟವಾಯಿತು.

—ಗೀತಾಪಾರ್ಥಸಾರಥಿ,
ಬೆಂಗಳೂರು

ಜನಪದ ವಿಚಾರ ತನ್ನ ಐದನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಪತ್ರಿಕೆಯು ಚಂದಾದಾರರ, ವಾಚಕರ ಮತ್ತು ಅಭಿಮಾನಿ ಮಿತ್ರರ ಸಹಕಾರವನ್ನು ಕೋರುತ್ತದೆ.

—ಪ್ರಕಾಶಕರು

ವಾಚಕ ಮಿತ್ರರಲ್ಲಿ ವಿನಂತಿ.

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಂದ ಪ್ರಸ್ತುತ ವಿಷಯಗಳಿಗೆ ಸಂಬಧಿಸಿದಂತೆ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಡಲು ಆಸಕ್ತವುಳ್ಳ ಸ್ನೆಹಿತರ ಸಹಾಯವನ್ನು ಜನಪದ ವಿಚಾರ ಬಯುಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು

ಇತ್ತೀಚೆಗೆ ಕುಂಭಕೋಣಂ ಶಾಲೆಯಲ್ಲಿ
ಮೃತರಾದ ಮಕ್ಕಳಿಗಾಗಿ
ಜನಪದ ವಿಚಾರ
ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com